ಮಂಗಳವಾರ, ಜನವರಿ 21, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಐಟಿಎಫ್ ವಿಶ್ವ ಟೆನಿಸ್

ಬೆಂಗಳೂರಿನಲ್ಲಿ ಸೋಮವಾರ ನಡೆದ ಕೆಪಿಬಿ ಟ್ರಸ್ಟ್ ಮಹಿಳೆಯರ ಐಟಿಎಫ್ ವಿಶ್ವ ಟೆನಿಸ್ ಪಂದ್ಯದಲ್ಲಿ ಭಾರತದ ಆಮೋದಿನಿ ನಾಯಕ್ ಅವರು ಬೆಲರೂಸ್‌ನ ಇರಿನಾ ಶೈಮಾನೊವಿಚ್ ಅವರ ವಿರುದ್ಧ ಆಡಿದ ವೈಖರಿ...

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

1924-2024
ಬೆಳಗಾವಿ, ಕರ್ನಾಟಕ

ಗಾಂಧಿ ಭಾರತ



ಗಾಂಧಿ ಭಾರತ ಮರು ನಿರ್ಮಾಣ...

"ಮಹಿಳೆಯರನ್ನು ಸಮಾನವಾಗಿ ಕಾಣುವ, ಎಲ್ಲ ಜಾತಿ–ಧರ್ಮಗಳನ್ನು ಸಮನಾಗಿ ನೋಡುವ, ಉಳ್ಳವರು ಮತ್ತು ಬಡವರನ್ನು ಸಮನಾಗಿ ನಡೆಸಿಕೊಳ್ಳುವ, ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ಸಬಲಗೊಳಿಸುವ ಭಾರತದ ಬಗ್ಗೆ **ಮಹಾತ್ಮ ಗಾಂಧಿ ಅವರು** ಕನಸು ಕಂಡಿದ್ದರು.

ಇವತ್ತು, ಗಾಂಧಿಯವರ ಕನಸಿನ ಭಾರತ ನಿಧಾನವಾಗಿ ಕಣ್ಮರೆಯಾಗುತ್ತಿದೆ. **1924ರಲ್ಲಿ ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಐತಿಹಾಸಿಕ ಬೆಳಗಾವಿ ಅಧಿವೇಶನದ ಶತಮಾನೋತ್ಸವ** ಆಚರಿಸುತ್ತಿರುವ ಈ ಸಂದರ್ಭದಲ್ಲಿ, ವಿಭಜನಕಾರಿ ಮತ್ತು ಫ್ಯಾಸಿಸ್ಟ್ ಶಕ್ತಿಗಳಿಂದ ಗಾಂಧಿ ಭಾರತವನ್ನು ಮರಳಿ ಪಡೆದು ಗಾಂಧಿ ಭಾರತದ ಮರು ನಿರ್ಮಾಣ ಮಾಡುವ ಸಮಯ ಬಂದೊದಗಿದೆ.

ನಮ್ಮ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಗಾಂಧಿ ಭಾರತದ ಕನಸನ್ನು ನನಸು ಮಾಡುವ ಪ್ರಾಮಾಣಿಕ ಪ್ರಯತ್ನವಾಗಿದೆ."

ಕರ್ನಾಟಕ ಮಾದರಿ ಆಡಳಿತವು ಗ್ಯಾರಂಟಿ ಯೋಜನೆಗಳನ್ನು ನೂರಕ್ಕೆ ನೂರರಷ್ಟು ಅನುಷ್ಠಾನಗೊಳಿಸುವ ಮೂಲಕ ಮಹಿಳೆಯರು, ಬಡವರು ಮತ್ತು ಶೋಷಿತ ವರ್ಗದವರನ್ನು ಸಬಲೀಕರಣಗೊಳಿಸುತ್ತಾ 'ಗಾಂಧಿ ಭಾರತ'ವನ್ನು ನಿರ್ಮಿಸುವ ಕನಸನ್ನು ನನಸಾಗಿಸುವತ್ತ ಮುನ್ನಡೆಯುತ್ತಿದೆ.

ದಿನಾಂಕ : 21.01.2025 • ಸಮಯ : ಬೆಳಗ್ಗೆ 10:30 • ಸ್ಥಳ : ಸುವರ್ಣ ವಿಧಾನಸೌಧ, ಬೆಳಗಾವಿ

ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭ

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿ ಅನಾವರಣ

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg

ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಗೃಹಲಕ್ಷ್ಮಿ — ₹2000

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟವರ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು – ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬೆಳಗಾವಿ: ಬಾಪೂಜಿ ಭೇಟಿ ಸ್ಮರಣೆಗೆ ಪೂರಕವಾಗಿ ಬೃಹತ್ ಸಮಾವೇಶ • ಕುಂದಾನಗರಕ್ಕೆ ಪಕ್ಷದ ನಾಯಕರ ದಂಡು

ಗಾಂಧಿ ಭಾರತ: ಕಾಂಗ್ರೆಸ್ ಸಮಾವೇಶ ಇಂದು

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ರಾಜಕೀಯ ಮತ್ತು ಸಂವಿಧಾನ ರಕ್ಷಣೆ ವಿಷಯವಾಗಿ ದೇಶಕ್ಕೆ ಹೊಸ ಸಂದೇಶ ನೀಡಲು ಇಲ್ಲಿ ಮಂಗಳವಾರ (ಜ.21) ಆಯೋಜಿಸಲಾಗಿರುವ 'ಜೈ ಬಾಪು, ಜೈ ಭೀಮ್ ಮತ್ತು ಜೈ ಸಂವಿಧಾನ' ಸಮಾವೇಶ ಹಲವು ನಿರೀಕ್ಷೆ ಮತ್ತು ಕುತೂಹಲಗಳಿಗೆ ಎಡೆ ಮಾಡಿಕೊಟ್ಟಿದೆ.

1924ರಲ್ಲಿ ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಬೆಳಗಾವಿ ಸಾಕ್ಷಿಯಾಗಿತ್ತು. ಈಗ ಅಧಿವೇಶನದ ಶತಮಾನೋತ್ಸವದ ಭಾಗವಾಗಿ ಸಮಾವೇಶ ನಡೆಯುತ್ತಿದೆ. 'ಕೈ' ಪಡೆಯ ಘಟಾನುಘಟಿ ನಾಯಕರ ದಂಡೇ ಬೆಳಗಾವಿಯತ್ತ ಮುಖ ಮಾಡಿದೆ.

ಕೆಲ ಆಂತರಿಕ ಶಿಸ್ತುಕ್ರಮದ ವಿದ್ಯಮಾನಗಳ ಮಧ್ಯೆಯೂ, ನಾಯಕರು ಮತ್ತು ಕಾರ್ಯಕರ್ತರು ಸಮಾವೇಶದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ. ಪಕ್ಷ ಸಂಘಟನೆ ಬಲವರ್ಧನೆಯ ವಿಷಯದಲ್ಲಿ ವಿಚಾರಿಸುತ್ತಿದ್ದಾರೆ. ಕಾಂಗ್ರೆಸ್ ನಾಯಕರ ಕಟೌಟ್, ಪಕ್ಷದ ಧ್ವಜಗಳಿಂದ ನಗರದ ಪ್ರಮುಖ ರಸ್ತೆಗಳು ರಾರಾಜಿಸುತ್ತಿವೆ.

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಪ್ರಯುಕ್ತ ಬೆಳಗಾವಿಯಲ್ಲಿ ಕಳೆದ ವರ್ಷ ಡಿಸೆಂಬರ್ 26, 27ರಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 26ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಆದರೆ, 27ರಂದು ನಡೆಯಬೇಕಿದ್ದ ಸಮಾವೇಶವನ್ನು ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿಧನದ ಕಾರಣ ಮುಂದೂಡಲಾಗಿತ್ತು.

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸವಿನೆನಪಿಗೆ ಸುವರ್ಣ ವಿಧಾನಸೌಧ ಆವರಣದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರತಿಮೆಯನ್ನು ಬೆಳಿಗ್ಗೆ 10.30ಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಉಪಸ್ಥಿತಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನಾವರಣ ಮಾಡುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾಲ್ಗೊಳ್ಳುವರು. ಶತಮಾನದ ಹಿಂದೆ ನಡೆದ ಅಧಿವೇಶನದಲ್ಲಿ ಗಾಂಧೀಜಿ ಮಾಡಿದ ಅಧ್ಯಕ್ಷೀಯ ಭಾಷಣದ ಸಂದೇಶ ಮತ್ತು 'ಗಾಂಧಿ ಭಾರತ' ಪುಸ್ತಕ ಬಿಡುಗಡೆ ಆಗಲಿದೆ.

ಮಧ್ಯಾಹ್ನ 12ಕ್ಕೆ ನಡೆಯುವ ಸಮಾವೇಶಕ್ಕೆ ಸಿಪಿಇಡಿ ಮೈದಾನದಲ್ಲಿ ಭವ್ಯ ವೇದಿಕೆ ಮತ್ತು ಶಾಮಿಯಾನ ಹಾಕಲಾಗಿದೆ. ವರ್ಣರಂಜಿತವಾಗಿ ಶೃಂಗರಿಸುತ್ತಿರುವ ವೇದಿಕೆ ಮುಂಭಾಗದಲ್ಲಿ ಕುರ್ಚಿಗಳು 50 ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿದೆ. ಸಮಾವೇಶದ ಸ್ಥಳದಲ್ಲಿ ಗಾಂಧೀಜಿ, ಅಂಬೇಡ್ಕರ್ ಮತ್ತು ಸಂವಿಧಾನದ ಚಿತ್ರವಿದೆ. ಅವುಗಳ ಸುತ್ತ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಎಂದು ಬರೆಯಲಾಗಿದೆ. ಇದರೊಂದಿಗೆ ಕಾಂಗ್ರೆಸ್ ಪರಂಪರೆ ಚಿತ್ರಗಳಿವೆ. ಕಾರ್ಯಕ್ರಮ ವೀಕ್ಷಿಸುವವರ ಅನುಕೂಲಕ್ಕೆ ಅಲ್ಲಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿದೆ.

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಹಲವು ನಾಯಕರು ಈಗಾಗಲೇ ಬಂದಿರುವ ಕಾರಣ, ನಗರ ಸೇರಿದಂತೆ ಎಲ್ಲೆಡೆ ಪೊಲೀಸರ ಬಿಗಿ ಭದ್ರತೆ ಕೈಗೊಂಡಿದ್ದಾರೆ. ಸಿಪಿಇಡಿ ಮೈದಾನ, ಸುವರ್ಣ ವಿಧಾನಸೌಧ, ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಪ್ರತಿ ಚಟುವಟಿಕೆ ಮೇಲೂ ಕಣ್ಣಿಟ್ಟಿದ್ದಾರೆ. ಭದ್ರತೆಗೆ 4 ಸಾವಿರಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದೆ.

ಬೆಳಗಾವಿಯ ಸಿಪಿಇಡಿ ಮೈದಾನದಲ್ಲಿ 'ಜೈ ಬಾಪು, ಜೈ ಭೀಮ್ ಮತ್ತು ಜೈ ಸಂವಿಧಾನ' ಸಮಾವೇಶಕ್ಕೆ ಸಿದ್ಧಗೊಂಡಿರುವುದು
ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

'ಪ್ರಚಾರಕ್ಕೆ ಕಾಂಗ್ರೆಸ್‌ನಿಂದ ಗಾಂಧಿ ಹೆಸರು ಬಳಕೆ'

ಬೆಳಗಾವಿ: 'ಇಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆ ವಹಿಸಿದ್ದ ಮಹಾತ್ಮ ಗಾಂಧಿ ಅವರ ಹೆಸರು ಮತ್ತು ಅಧಿವೇಶನದ ಶತಮಾನೋತ್ಸವವನ್ನು ಕಾಂಗ್ರೆಸ್ ತನ್ನ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೂರಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸರ್ಕಾರಿ ಕಚೇರಿಗಳ ವಿದ್ಯುತ್ ಶುಲ್ಕ ಭರಿಸಲು ಹಣ ಇಲ್ಲದಿರುವಾಗ, ಇಲ್ಲಿ ನಡೆಯುತ್ತಿರುವ ಕಾಂಗ್ರೆಸ್‌ನ ಸಮಾವೇಶಕ್ಕೆ ಸರ್ಕಾರದ ಹಣ ಬಳಸಲಾಗುತ್ತಿದೆ' ಎಂದರು. 'ಇದು ನಿಜವಾದ ಅವರ ಮೂಲ ಕಾಂಗ್ರೆಸ್ ಪಕ್ಷವಲ್ಲ. ಇದು ನಕಲಿ ಗಾಂಧಿ, ನಕಲಿ ಕಾಂಗ್ರೆಸ್ ಪಕ್ಷ. ಅಂಬೇಡ್ಕರ್ ಅವರಿಗೂ ಅಪಮಾನ ಮಾಡಿದೆ' ಎಂದರು.

ಪ್ರಲ್ಹಾದ ಜೋಶಿ

ಜೋಶಿ, ಯತ್ನಾಳಗೆ ಇತಿಹಾಸ ಗೊತ್ತಿಲ್ಲ: ಸಿ.ಎಂ

ಬೆಳಗಾವಿ: 'ಪ್ರಲ್ಹಾದ ಜೋಶಿ ಅವರಿಗೆ ಇತಿಹಾಸ ಗೊತ್ತಿಲ್ಲ. ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಜಾರಿಯಾದ ಸಂದರ್ಭದಲ್ಲಿ ಗೋಳ್ವಾಲ್ಕರ್, ಸಾವರ್ಕರ್ ಏನು ಮಾತನಾಡಿದ್ದರು ಎಂಬುದು ಅವರಿಗೆ ತಿಳಿದಿದೆಯೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

'ಕಾಂಗ್ರೆಸ್‌ನಿಂದ ಅಂಬೇಡ್ಕರ್‌ಗೆ ಅವಮಾನ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾಡಿದ ಆರೋಪಕ್ಕೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಜೋಶಿಯವರು ಇತಿಹಾಸ ತಿಳಿದುಕೊಳ್ಳಬೇಕು' ಎಂದರು.

'ಗಾಂಧಿ ಹತ್ಯೆಯಲ್ಲಿ ನೆಹರೂ ಅವರ ಪಾತ್ರವಿದೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಗಾಂಧಿ ಅವರನ್ನು ಗೋಡ್ಸೆ ಕೊಂದಿದ್ದಾರೆ. ಆತನೊಂದಿಗೆ ಸಾವರ್ಕರ್ ಸಹ ಶಾಮೀಲಾದ ಬಗ್ಗೆ ಪ್ರಕರಣವಿತ್ತು. ಯತ್ನಾಳಗೆ ಇತಿಹಾಸ ತಿಳಿದಿಲ್ಲ. ಅದನ್ನು ಓದಿಯೂ ಇಲ್ಲ. ಅದಕ್ಕೆ ಇತಿಹಾಸ ತಿಳಿಯದವರು ಇತಿಹಾಸ ಸೃಷ್ಟಿಸಲಾರರು ಎಂದು ಅಂಬೇಡ್ಕರ್ ಹೇಳಿದ್ದರು' ಎಂದರು.

> ಪ್ರತಿ ವಿಧಾನಸಭಾ ಕ್ಷೇತ್ರದಿಂದ ಕನಿಷ್ಠ 100 ಜನರನ್ನು ಸಮಾವೇಶಕ್ಕೆ ಕರೆತರಲು ಸೂಚಿಸಲಾಗಿದೆ. ರಾಜ್ಯ ಮಟ್ಟದ 60ಕ್ಕೂ ಹೆಚ್ಚು ನಾಯಕರು, ಭಾಗವಹಿಸುವರು
> ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗಾಂಧೀಜಿ ಹತ್ಯೆಯಲ್ಲಿ ನೆಹರೂ ಕೈವಾಡ: ಯತ್ನಾಳ ಆರೋಪ

ಹುಬ್ಬಳ್ಳಿ: 'ಮಹಾತ್ಮ ಗಾಂಧೀಜಿ ಅವರ ಹತ್ಯೆಯಲ್ಲಿ ಜವಾಹರಲಾಲ್ ನೆಹರೂ ಅವರ ಕೈವಾಡವಿದೆ ಎಂಬ ಅನುಮಾನವಿದೆ. ಗಾಂಧೀಜಿ ಅವರಿಗೆ ತಗುಲಿದ ಮೂರು ಗುಂಡುಗಳಲ್ಲಿ ಒಂದು ಗುಂಡು ನಾಥೂರಾಮ ಗೋಡ್ಸೆ ಹೊಡೆದರೆ, ಇನ್ನೂ ಎರಡು ಗುಂಡು ಯಾರು ಹೊಡೆದರು' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಒಂದು ಗುಂಡು ನಾಥೂರಾಮ ಗೋಡ್ಸೆ ಹೊಡೆದಿದ್ದು ಎಂಬುದು ನ್ಯಾಯಾಲಯದಲ್ಲಿ ಸಾಬೀತಾಗಿದೆ. ಇನ್ನುಳಿದ ಎರಡು ಗುಂಡುಗಳನ್ನು ಯಾರು ಹೊಡೆದರು? ಅವರೆರಡೂ ಗುಂಡು ನೆಹರೂ ಹೊಡೆಸಿರಬಹುದು ಎಂಬ ಶಂಕೆ ನನಗಿದೆ. ನೆಹರೂಗೆ ಸರ್ವಾಧಿಕಾರಿ ಆಗುವ ಆಸೆ ಇತ್ತು' ಎಂದರು.

'ಈಗ ಕಾಂಗ್ರೆಸ್‌ನಲ್ಲಿ ಇರುವವರು ಯಾರೂ ಸಹ ನಿಜವಾದ ಗಾಂಧಿಗಳಲ್ಲ. ಎಲ್ಲರೂ ನಕಲಿ ಗಾಂಧಿಗಳು. ಅವರೇ ಎಲ್ಲರೂ ಸೇರಿ ಬೆಳಗಾವಿಯಲ್ಲಿ ಗಾಂಧಿ ಹೆಸರಿನಲ್ಲಿ ಸಮಾವೇಶ ಮಾಡುತ್ತಿದ್ದಾರೆ. ಗಾಂಧೀಜಿ ತತ್ವವನ್ನು ಯಾರೂ ಪಾಲಿಸುತ್ತಿಲ್ಲ. ಎಲ್ಲರೂ ನಾಟಕ ಮಾಡುತ್ತಿದ್ದಾರೆ. ಅವರು ಜೈಭೀಮ ಎನ್ನಲೂ ಕೂಡ ಅರ್ಹರಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ಕೂಡಲೇ ಕಾಂಗ್ರೆಸ್ ಪಕ್ಷ ವಿಸರ್ಜನೆ ಗಾಂಧೀಜಿಯವರ ಬಯಕೆ ಆಗಿತ್ತು. ಆದರೆ, ಅದು ಕೂಡ ಈಡೇರಲಿಲ್ಲ' ಎಂದರು.

'ಹುಚ್ಚಾಸ್ಪತ್ರೆಗೆ ಸೇರಿಸಿ'

ಬೆಳಗಾವಿ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಸಚಿವ ಎಂ.ಬಿ.ಪಾಟೀಲ ಅವರ ಆಸ್ಪತ್ರೆಗೆ ದಾಖಲಿಸಬೇಕು. ಇಲ್ಲವೇ ಹುಚ್ಚಾಸ್ಪತ್ರೆಗೆ ಸೇರಿಸಲು ಏರ್ಪಾಟು ಮಾಡಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಯತ್ನಾಳ ಅವರ ಆರೋಪಕ್ಕೆ ಡಿ.ಕೆ.ಶಿವಕುಮಾರ್ ಹೀಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

1ರಿಂದ ಎಲ್.ಕೆ. ಅತೀಕ್ ಮುಖ್ಯಮಂತ್ರಿ ಎಸಿಎಸ್

ಬೆಂಗಳೂರು: ಇದೇ 31ರಂದು ನಿವೃತ್ತರಾಗಲಿರುವ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ಫೆ. 1ರಿಂದ ಅನ್ವಯವಾಗುವಂತೆ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ (ಎಸಿಎಸ್) ನೇಮಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಸದ್ಯ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜವಾಬ್ದಾರಿಯ ಜೊತೆಗೆ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿಯೂ ಅತೀಕ್ ಅವರು ಕರ್ತವ್ಯ ನಿಭಾಯಿಸುತ್ತಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ತಾತ್ಕಾಲಿಕವಾಗಿ ಹೊಸತಾಗಿ ಸೃಜಿಸಿದ ಆರ್ಥಿಕ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹೆಚ್ಚುವರಿಯಾಗಿ ನೀಡಲಾಗಿದೆ. ಅಲ್ಲದೆ, ಅತೀಕ್ ಅವರ ನಿವೃತ್ತಿಯಿಂದ ತೆರವಾಗಲಿರುವ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ರಿತೇಶ್ ಕುಮಾರ್ ಸಿಂಗ್ ಅವರನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.



ಉದ್ಯಮಿಯ ಕಾರು ಅಡ್ಡಗಟ್ಟಿ ದರೋಡೆ

ಜಯಪುರ (ಮೈಸೂರು ಜಿಲ್ಲೆ): ಮೈಸೂರು ತಾಲ್ಲೂಕಿನ ಗುಜ್ಜೇಗೌಡನಪುರದ ಬಳಿ ಸೋಮವಾರ ಬೆಳಿಗ್ಗೆ ಉದ್ಯಮಿಯೊಬ್ಬರ ಕಾರನ್ನು ಅಡ್ಡಗಟ್ಟಿದ ಮುಸುಕುಧಾರಿಗಳ ಗುಂಪು ಹಲ್ಲೆ ನಡೆಸಿ, ₹1.5 ಲಕ್ಷ ಕಸಿದು ಕಾರಿನೊಂದಿಗೆ ಪರಾರಿಯಾಗಿದೆ.

'ಕೇರಳದ ಸುಲ್ತಾನ್ ಬತ್ತೇರಿಯ ಅಡಿಕೆ ವ್ಯಾಪಾರಿ ಮೊಹಮ್ಮದ್ ಆಶ್ರಫ್ ಅವರು ಎಚ್.ಡಿ.ಕೋಟೆ ಕಡೆಗೆ ಮೈಸೂರು- ಮಾನಂದವಾಡಿ ರಾಜ್ಯ ಹೆದ್ದಾರಿಯಲ್ಲಿ ತೆರಳುತ್ತಿದ್ದರು. ಎರಡು ಕಾರಿನಲ್ಲಿ ಬಂದು ಅಡ್ಡಗಟ್ಟಿದ ಗುಂಪು, ಚಾಲಕ ಶಫಿ ಹಾಗೂ ಅಶ್ರಫ್ ಅವರನ್ನು ಕಾರಿನಿಂದ ಎಳೆದು ಹಾಕಿ, ಕಾರಿನ ಸಮೇತ ಪರಾರಿಯಾಗಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ತಿಳಿಸಿದ್ದಾರೆ.

'ಹಲ್ಲೆಗೊಳಗಾದವರಿಗೆ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಯಿತು. ನಾಲ್ಕರಿಂದ ಐವರು ಆರೋಪಿಗಳಿರುವುದು ಗೊತ್ತಾಗಿದೆ. ಪತ್ತೆಗಾಗಿ ಮೂರು ತಂಡಗಳನ್ನು ರಚಿಸಲಾಗಿದೆ' ಎಂದು ಎಡಿಎಸ್‌ಪಿ ಮಲ್ಲಿಕ್ 'ಪ್ರಜಾವಾಣಿ'ಗೆ ತಿಳಿಸಿದರು. ಸ್ಥಳಕ್ಕೆ ಐಜಿಪಿ ಬೋರಲಿಂಗಯ್ಯ ಭೇಟಿ ನೀಡಿ ಪರಿಶೀಲಿಸಿದರು. ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಪತ್ತೆ: 'ಕೃತ್ಯ ನಡೆದ ಸುಮಾರು 10 ಕಿ.ಮೀ ದೂರದಲ್ಲಿ, ಮಾರ್ಬಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಬಳಿ, ಆರೋಪಿಗಳ ಕಾರು ಪತ್ತೆಯಾಗಿದೆ. ಜೊತೆಗೆ ಗೋಪಾಲಪುರದ ಬಳಿ ವ್ಯಾಪಾರಿಯ ಕಾರು ಪತ್ತೆಯಾಗಿದ್ದು, ದರೋಡೆಕೋರರು ಗಾಜು ಒಡೆದು, ಹಣ ತೆಗೆದು ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾವೇರಿ–ವೆಲ್ಲಾರ್ ರಾಜ್ಯ ಅರ್ಜಿ ಪರಿಗಣನೆಗೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಕಣಿವೆಯ ಹೆಚ್ಚುವರಿ ನೀರು ಬಳಕೆಗೆ ತಮಿಳುನಾಡು ಕೈಗೆತ್ತಿಕೊಂಡಿರುವ 'ಕಾವೇರಿ–ವೆಲ್ಲಾರ್–ಗುಂಡಾರ್' ನದಿ ಜೋಡಣೆ ಸಂಬಂಧಿಸಿದಂತೆ ಕರ್ನಾಟಕ ಸಲ್ಲಿಸಿರುವ ಮಧ್ಯಂತರ ಪರಿಹಾರ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

'ಕೇಂದ್ರ ಸರ್ಕಾರವು ಈ ಯೋಜನೆಗೆ ಇನ್ನೂ ಅನುಮತಿ ನೀಡಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಅರ್ಜಿಯನ್ನು ಪರಿಗಣಿಸುತ್ತಿಲ್ಲ' ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರ ಪೀಠ ಹೇಳಿದೆ.

ಯೋಜನೆಯ ಕಾಮಗಾರಿಗೆ ತಡೆಯಾಜ್ಞೆ ನೀಡಬೇಕು ಎಂದು ಒತ್ತಾಯಿಸಿ ಕರ್ನಾಟಕ ಸರ್ಕಾರವು ಅರ್ಜಿ ಸಲ್ಲಿಸಿತ್ತು. 'ಈ ಯೋಜನೆಯು ಕಾವೇರಿ ನ್ಯಾಯಮಂಡಳಿ ತೀರ್ಪಿನ ಸ್ಪಷ್ಟ ಉಲ್ಲಂಘನೆ' ಎಂದು ರಾಜ್ಯದ ವಕೀಲರು ದೂರಿದ್ದರು.

ರಾಜ್ಯದ ಹಲವೆಡೆ ದಟ್ಟ ಮಂಜು

ಬೆಂಗಳೂರು: ನಗರ ಸೇರಿ ದಕ್ಷಿಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಂಗಳವಾರ ಮುಂಜಾನೆಯಿಂದ ಮೋಡ ಕವಿದ ವಾತಾವರಣದೊಂದಿಗೆ ದಟ್ಟ ಮಂಜು ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ಕರಾವಳಿ ಮತ್ತು ದಕ್ಷಿಣ ಒಳನಾಡಿನ ಕೆಲವು ಸ್ಥಳಗಳಲ್ಲಿ ಮಳೆಯಾಗಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ, ಪುತ್ತೂರು, ಮೂಲ್ಕಿ ಸಹಿತ ಕೆಲವು ಕಡೆಗಳಲ್ಲಿ ಭಾನುವಾರ ಸಾಧಾರಣ ಮಳೆಯಾಗಿದೆ.

ಮುಂಜಾನೆ ಮಂಜು ಬೀಳುವ ಸಂಭವವಿದ್ದು, ಗರಿಷ್ಠ ತಾಪಮಾನವು 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನವು 16 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಜಾತಿ ಜನಗಣತಿಗೆ ವಿರೋಧವೇಕೆ: ಇಬ್ರಾಹಿಂ

ನವ ಕರ್ನಾಟಕ ನಿರ್ಮಾಣಕ್ಕೆ 'ಜನತಾ ಪ್ರಣಾಳಿಕೆ' ಬಿಡುಗಡೆ • ಪ್ರತಿ ಜಿಲ್ಲೆಯಲ್ಲೂ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತರು ತಮ್ಮ ಹಕ್ಕುಗಳನ್ನು ಎಲ್ಲಿ ಕೇಳುತ್ತಾರೋ ಎಂಬ ಕಾರಣಕ್ಕೆ ಜಾತಿ ಜನಗಣತಿಯನ್ನು ವಿರೋಧಿಸಲಾಗುತ್ತಿದೆ' ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ದೂರಿದರು.

ನವಕರ್ನಾಟಕ ನಿರ್ಮಾಣ ಸಮಿತಿ ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರೈತ, ದಲಿತ, ಕನ್ನಡ ಭಾಷಾ, ಕಾರ್ಮಿಕ, ಪರಿಸರ, ಮಹಿಳಾ ಮತ್ತು ವಿದ್ಯಾರ್ಥಿ–ಯುವಜನರ ಚಳವಳಿಗಳು ಒಟ್ಟಾಗಿ ನವ ಕರ್ನಾಟದ ನಿರ್ಮಾಣಕ್ಕಾಗಿ ರೂಪಿಸಿರುವ 'ಜನತಾ ಪ್ರಣಾಳಿಕೆ' ಬಿಡುಗಡೆಗೊಳಿಸಿ ಮಾತನಾಡಿದರು.

'ಹಿಂದೆ ಜಾತಿ ಜನಗಣತಿಗೆ ಮುಸ್ಲಿಂ ಸಮುದಾಯ ಹೆದರುತ್ತಿತ್ತು. ಜನರ ಕಣ್ಣು ಬೀಳುತ್ತದೆ ಎಂಬ ಕಾರಣಕ್ಕೆ ಹತ್ತು ಮಕ್ಕಳು ಇದ್ದರೆ ನಾಲ್ಕು ಮಕ್ಕಳು ಎನ್ನುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಈಗ ಜಾತಿ ಜನಗಣತಿಗೆ ವಿರೋಧ ಏಕೆ' ಎಂದು ಪ್ರಶ್ನಿಸಿದರು.

'ಬಿಎಸ್‌ಪಿಯ ಸಂಸ್ಥಾಪಕ ಕಾನ್ಸಿರಾಂ ಅವರು ರಾಜಕೀಯ ಅಧಿಕಾರ ಪಡೆದುಕೊಳ್ಳುವಂತೆ ಹೇಳುತ್ತಿದ್ದರು. ಇಂದು ಜಾತಿ ಮತ್ತು ದುಡ್ಡಿನ ಮೇಲೆ ಅಧಿಕಾರ ನಿಂತಿದೆ. ಚನ್ನಪಟ್ಟಣ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿ ₹ 100 ಕೋಟಿ ಖರ್ಚು ಮಾಡಿದರೆ, ಸೋತ ಅಭ್ಯರ್ಥಿ ₹ 150 ಕೋಟಿ ಖರ್ಚು ಮಾಡಿದ್ದರು. ಶಿಗ್ಗಾವಿ ಕ್ಷೇತ್ರದಲ್ಲೂ ಅದೇ ಕತೆ. ಒಂದು ತಿಂಗಳ ಜೀವನದ ಆಸೆಗಾಗಿ ಹಣ ಪಡೆದು ಐದು ವರ್ಷ ನಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಅಖಿಲ ಭಾರತ ಬಹುಜನ ಸಮಾಜ ಪಕ್ಷದ ರಾಜ್ಯ ಸಂಯೋಜಕ ಎಂ.ಗೋಪಿನಾಥ್ ಮಾತನಾಡಿ, ವಿವಿಧ ಚಳವಳಿಗಳು ಒಗ್ಗೂಡಿ ನವ ಕರ್ನಾಟಕ ನಿರ್ಮಾಣಕ್ಕಾಗಿ ಜನತಾ ಪ್ರಣಾಳಿಕೆ ರೂಪಿಸಿದ್ದೇವೆ. ಇದು ಕರಡು ಅಷ್ಟೇ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಸಮಿತಿ ರಚಿಸಲಾಗುವುದು. ರಾಜ್ಯ ಪ್ರವಾಸ ಕೈಗೊಂಡು ಸಲಹೆ ಪಡೆದು, ಮತ್ತೊಮ್ಮೆ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು ಎಂದರು.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಆರ್‌ಪಿಐ ರಾಷ್ಟ್ರೀಯ ಅಧ್ಯಕ್ಷ ಎನ್. ಮೂರ್ತಿ, ಬಿಎಸ್‌ಪಿ ಮುಖಂಡ ಚಂದ್ರಶೇಖರ್, ಕಾರ್ಮಿಕ ಮುಖಂಡ ಅರುಣ್ ಗೌಡ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನವಕರ್ನಾಟಕ ನಿರ್ಮಾಣ ಸಮಿತಿ ಆಯೋಜಿಸಿದ್ದ ಜನತಾ ಪ್ರಣಾಳಿಕ ಬಿಡುಗಡೆ ಕಾರ್ಯಕ್ರಮದಲ್ಲಿ ಅಖಿಲ ಭಾರತ ಬಿಎಸ್‌ಪಿ ರಾಜ್ಯ ಸಂಯೋಜಕ ಎಂ. ಗೋಪಿನಾಥ್, ಮಾರಸಂದ್ರ ಮುನಿಯಪ್ಪ,ಕೋಡಿಹಳ್ಳಿ ಚಂದ್ರಶೇಖರ್, ಸಿ.ಎಂ. ಇಬ್ರಾಹಿಂ, ಬಿ.ಟಿ. ಲಲಿತಾ ನಾಯಕ್, ಎನ್‌.ಮೂರ್ತಿ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ

ಪ್ರಣಾಳಿಕೆಯ ಪ್ರಮುಖ ಅಂಶಗಳು

- ಅಂತರರಾಜ್ಯ ವಲಸೆ ತಡೆಯುವುದರ ಜತೆಗೆ ಮಹಾಜನ್ ವರದಿ ಜಾರಿಗೆ ಶ್ರಮಿಸಲಾಗುವುದು
- ಆಡಳಿತ, ನ್ಯಾಯಾಂಗ ಮತ್ತು ಶಿಕ್ಷಣದ ಭಾಷೆಯಾಗಿ ಕನ್ನಡವನ್ನು ಎಲ್ಲಾ ಹಂತಗಳಲ್ಲಿ ಜಾರಿ ಮಾಡಲಾಗುವುದು
- ಜನಪ್ರತಿನಿಧಿಗಳು, ಅಧಿಕಾರಿಗಳು ಕಡ್ಡಾಯವಾಗಿ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುವಂತೆ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಪಡೆಯುವಂತೆ ಕಾಯ್ದೆ ರೂಪಿಸಲಾಗುವುದು
- ತಾಲ್ಲೂಕು ಪಂಚಾಯಿತಿಗೊಂದು ಸಾರ್ವಜನಿಕ ವಸತಿ ಶಾಲೆ ಸ್ಥಾಪಿಸಲಾಗುವುದು
- ಶಾಲಾ ಮಕ್ಕಳಿಗೆ ನೀಡುವ ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯ ಜವಾಬ್ದಾರಿಯನ್ನು ಗ್ರಾಮಸಭೆಗೆ ವಹಿಸುವುದು
- ಕೃಷಿ ಸಾಲ, ಭೂ ಅಭಿವೃದ್ಧಿ ಸಾಲ, ಭೂ ಸಂರಕ್ಷಣೆ ಸಾಲಗಳನ್ನು ಸಂಪೂರ್ಣ ರದ್ದುಗೊಳಿಸಲಾಗುವುದು
- ಜಾತಿ ಪದ್ಧತಿ ನಿರ್ಮೂಲನೆಗಾಗಿ ಅಂತರ್ಜಾತಿ ಮತ್ತು ಅಂತರ್ ಧರ್ಮೀಯ ವಿವಾಹಿತರಿಗೆ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಮತ್ತು ನೌಕರಿಗಳಲ್ಲಿ ವಿಶೇಷ ಮೀಸಲಾತಿ ಜಾರಿಗೊಳಿಸಲಾಗುವುದು
- ಸಾರಿಗೆ ಸಂಸ್ಥೆ ಮಾತ್ರವಲ್ಲದೇ ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳನ್ನು ಉನ್ನತೀಕರಿಸಿ, ಉದ್ಯೋಗಿಗಳನ್ನು ಸರ್ಕಾರಿ ನೌಕರರೆಂದು ಘೋಷಿಸಲಾಗುವುದು
- ರಾಜ್ಯದ ವಿಧಾನ ಪರಿಷತ್ ರದ್ದು ಮಾಡಲಾಗುವುದು

ರಾಜ್ಯ ಆಯುಕ್ತರ ನೇಮಕ; ಅಧಿಸೂಚನೆಗೂ ಮೊದಲೇ ಅಪಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಆಯೋಗದ ಮುಖ್ಯ ಆಯುಕ್ತರು ಮತ್ತು ಮಾಹಿತಿ ಆಯುಕ್ತರ ನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆದು, ಅಂತಿಮ ಆಯ್ಕೆಯ ಅಧಿಕಾರವನ್ನು ಸಮಿತಿ ಸಿದ್ದರಾಮಯ್ಯ ಅವರಿಗೆ ನೀಡಿತು.

ಮುಖ್ಯ ಆಯುಕ್ತ, ಏಳು ಮಾಹಿತಿ ಆಯುಕ್ತರ ಹುದ್ದೆಗಳು ಖಾಲಿ ಇದ್ದು, ಸಲ್ಲಿಕೆಯಾದ 500ಕ್ಕೂಹೆಚ್ಚು ಅರ್ಜಿಗಳನ್ನು ಪರಿಷ್ಕರಿಸಿದ ನಂತರ ಅಂತಿಮ 15 ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲಾಗಿತ್ತು. ಈ ಎಲ್ಲ ಅಭ್ಯರ್ಥಿಗಳ ಕುರಿತು ಚರ್ಚಿಸಿದ ಸಮಿತಿ, ಆಯ್ಕೆಯ ಅಂತಿಮ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಿತು.

ಪತ್ರಕರ್ತರದೇ ಪಾರಮ್ಯ: ಈ ಬಾರಿಯ ನೇಮಕಾತಿಯಲ್ಲಿ ಸಾಕಷ್ಟು ಪತ್ರಕರ್ತರೂ ಅರ್ಜಿ ಸಲ್ಲಿಸಿದ್ದರು. ಅವರಲ್ಲಿ ನಾಲ್ವರನ್ನು ಆಯುಕ್ತರ ಹುದ್ದೆಗೆ ಪರಿಗಣಿಸಲಾಗಿದೆ. ಉಳಿದ ನಾಲ್ಕು ಹುದ್ದೆಗಳಿಗೆ ಇತರೆ ಕ್ಷೇತ್ರಗಳ ಅನುಭವಿಗಳಿಗೆ ಆದ್ಯತೆ ನೀಡಲಾಗಿದೆ. ಒಂದೆರಡು ದಿನಗಳಲ್ಲಿ ಅಧಿಸೂಚನೆ ಹೊರಬೀಳಲಿದೆ ಎಂದು ಮೂಲಗಳು ಹೇಳಿವೆ.

ನಿಯಮದಂತೆ 'ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ವ್ಯವಸ್ಥಾಪನೆ, ಪತ್ರಿಕೋದ್ಯಮ, ಸಮೂಹ ಮಾಧ್ಯಮ ಅಥವಾ ನಿರ್ವಹಣೆ ಮತ್ತು ಆಡಳಿತದಲ್ಲಿ ಆಳವಾದ ಜ್ಞಾನ ಮತ್ತು ಅನುಭವ ಹೊಂದಿರುವವರು ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನ ಗಳಿಸಿರುವಂಥ ವ್ಯಕ್ತಿಗಳನ್ನು ಈ ಹುದ್ದೆಗಳಿಗೆ ನೇಮಿಸಬಹುದು. ಆದರೆ, ನೇಮಕಾತಿಯಲ್ಲಿ ಸ್ವಜನಪಕ್ಷಪಾತ ನಡೆದಿದೆ. ಅರ್ಹರಲ್ಲದವರನ್ನೂ ನೇಮಕ ಮಾಡಲಾಗುತ್ತಿದೆ. ಸುಪ್ರೀಂ ಕೋರ್ಟ್ 2019ರಲ್ಲಿ ಆದೇಶಕ್ಕೆ ವಿರುದ್ಧವಾಗಿ ಆಯ್ಕೆ ನಡೆದಿದೆ ಎಂದು ಕೆಲ ಆಕಾಂಕ್ಷಿ ಅಭ್ಯರ್ಥಿಗಳು ದೂರಿದ್ದಾರೆ.

ಮಾಹಿತಿ ಆಯುಕ್ತರ ಅವಧಿ ಮೂರು ವರ್ಷ ಅಥವಾ ನೇಮಕವಾದವರ ವಯಸ್ಸು 65 ಆಗುವವರಿಗೆ ಇರುತ್ತದೆ. ಎರಡರಲ್ಲಿ ಯಾವುದು ಮೊದಲೋ ಆಗ ಅವರ ಅಧಿಕಾರಾವಧಿ ಮುಗಿಯುತ್ತದೆ.

'ಎಲ್ಲರಿಗೂ ಮುಖ್ಯ ಪರೀಕ್ಷೆಗೆ ಅವಕಾಶ ನೀಡಿ'

ಕೆಪಿಎಸ್‌ಸಿ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಮತ್ತೊಮ್ಮೆ ಮರು ಪರೀಕ್ಷೆ ನಡೆಸಬೇಕು ಅಥವಾ ಈಗಾಗಲೇ ನಡೆಸಿದ ಪೂರ್ವಭಾವಿ ಮರು ಪರೀಕ್ಷೆ ಬರೆದ ಎಲ್ಲರಿಗೂ ಮುಖ್ಯ ಪರೀಕ್ಷೆಗೆ ಅವಕಾಶ ನೀಡಬೇಕು. ಅದು ಸಾಧ್ಯವಾಗದೇ ಇದ್ದರೆ ಮರು ಅಧಿಸೂಚನೆ ಹೊರಡಿಸಬೇಕು' ಎಂದು ಆಗ್ರಹಿಸಿ ಕೆಲವು ಅಭ್ಯರ್ಥಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

'ಕೆಪಿಎಸ್‌ಸಿ ಡಿ. 29ರಂದು ನಡೆಸಿದ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ಲೋಪ ಕಾಣಿಸಿಕೊಂಡ ಕಾರಣ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಗ್ರಾಮೀಣ ಮತ್ತು ನಗರದ ಭಾಗದ ಬಡ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಆಗಸ್ಟ್ 27ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಷಾಂತರ ಲೋಪಗಳು ಕಂಡುಬಂದ ಕಾರಣ ಡಿ. 29ಕ್ಕೆ ಮರು ಪರೀಕ್ಷೆ ನಡೆಸಲಾಗಿತ್ತು. ಆದರೆ, ಮರು ಪರೀಕ್ಷೆಯಲ್ಲೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆಪತ್ರಿಕೆಗಳಲ್ಲಿ ಮತ್ತೆ ಸಾಕಷ್ಟು ತಪ್ಪುಗಳು ಕಂಡುಬಂದಿವೆ. ಇಂಗ್ಲಿಷ್ ಪ್ರಶ್ನೆಪತ್ರಿಕೆಯನ್ನು ನೋಡಿ ಸಲೀಸಾಗಿ ಸರಿಯಾಗಿ ಉತ್ತರಿಸಿದ ಅಭ್ಯರ್ಥಿಗಳಿಗೆ ಅಂಕಗಳು ದೊರೆತು, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ದೊಡ್ಡ ಅನ್ಯಾಯವಾಗುತ್ತದೆ. ಇದರಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯಲು ವಿಫಲರಾಗಲಿದ್ದಾರೆ' ಎಂದೂ ಪತ್ರದಲ್ಲಿ ಅಭ್ಯರ್ಥಿಗಳು ಉಲ್ಲೇಖಿಸಿದ್ದಾರೆ. ಐದು ಪುಟಗಳ ಪತ್ರದಲ್ಲಿ ಪ್ರಶ್ನೆಪತ್ರಿಕೆಯಲ್ಲಿರುವ ಭಾಷಾಂತರ ದೋಷಗಳನ್ನೂ ಪಟ್ಟಿ ಮಾಡಿದ್ದಾರೆ.

2010, 2011, 2014, 2015 ಮತ್ತು 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿಯಲ್ಲಿ ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಮುಖ್ಯ ಪರೀಕ್ಷೆ ಬರೆದು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನೂ ಪತ್ರದ ಜೊತೆಗೆ ನೀಡಿರುವ ಅಭ್ಯರ್ಥಿಗಳು, 'ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆದವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಆಗಿದ್ದಾರೆ. ಕನ್ನಡ ಅಭ್ಯರ್ಥಿಗಳಿಗೆ ಭಾರಿ ವಂಚನೆ ಆಗಿದೆ' ಎಂದು ದೂರಿದ್ದಾರೆ.

ಮುಖ್ಯ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಡಿಪಿಎಆರ್ ಕಾರ್ಯದರ್ಶಿ, ಕೆಪಿಎಸ್‌ಸಿ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೂ ಪತ್ರದ ಪ್ರತಿಯನ್ನು ಕಳುಹಿಸಿದ್ದಾರೆ.

ಯುಪಿಸಿಎಲ್: ವಸೂಲಾಗದ ₹ 52 ಕೋಟಿ ದಂಡ

ಜನಜಾಗೃತಿ ಸಮಿತಿ ದೂರು ನೀಡಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನರ ಆರೋಗ್ಯಕ್ಕೆ ಹಾನಿ ಉಂಟು ಮಾಡಿರುವ ಉಡುಪಿ ಸಮೀಪದ ನಂದಿಕೂರಿನಲ್ಲಿರುವ ಅದಾನಿ ಒಡೆತನದ ಯುಪಿಸಿಎಲ್ ಶಾಖೋತ್ಪನ್ನ ಘಟಕದಿಂದ ₹ 52 ಕೋಟಿ ದಂಡ ವಸೂಲು ಮಾಡಬೇಕು' ಎಂದು ದಕ್ಷಿಣ ವಲಯದ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಆದೇಶ ನೀಡಿ ಎರಡು ವರ್ಷ ಕಳೆದರೂ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ನ್ಯಾಯಮೂರ್ತಿ ಕೆ. ರಾಮಕೃಷ್ಣನ್ ಮತ್ತು ಇಬ್ಬರು ತಜ್ಞರನ್ನು ಒಳಗೊಂಡಿದ್ದ ದಕ್ಷಿಣ ವಲಯ ಹಸಿರು ಪೀಠವು 2022ರ ಮೇ 31ರಂದು ಈ ಆದೇಶ ನೀಡಿತ್ತು. ಯುಪಿಸಿಎಲ್ ಶಾಖೋತ್ಪನ್ನ ಘಟಕದ ವಿರುದ್ಧ ಎನ್‌ಜಿಟಿಗೆ ಪರಿಹಾರದ ಶೇ 50ರಷ್ಟು ಮೊತ್ತವನ್ನು ಪರಿಸರ ಮೂಲಸೌಕರ್ಯ ಸುಧಾರಣೆಗೆ ಬಳಸಬೇಕು. ಮಧ್ಯಂತರ ಆದೇಶದ ಅನ್ವಯ ಯುಪಿಸಿಎಲ್ ಈಗಾಗಲೇ ₹ 5 ಕೋಟಿ ಠೇವಣಿ ಇರಿಸಿದೆ. ಉಳಿದ ಮೊತ್ತವನ್ನು ಮುಂದಿನ ಮೂರು ತಿಂಗಳಲ್ಲಿ ಪಾವತಿಸಬೇಕು ಎಂದು ಹಸಿರು ಪೀಠ ಸೂಚಿಸಿತ್ತು.

ಮಾಹಿತಿ ಹಕ್ಕಿನಡಿ ಪಡೆದ ಮಾಹಿತಿಯ ಪ್ರಕಾರ, 'ದಂಡ ಪಾವತಿಸಲು ನಿಗದಿಪಡಿಸಿದ್ದ ಅವಧಿ 2022ರ ಸೆಪ್ಟೆಂಬರ್‌ನಲ್ಲೇ ಮುಗಿದಿದೆ. ಎನ್‌ಜಿಟಿ ಆದೇಶವನ್ನು ಪ್ರಶ್ನಿಸಿ ಕಂಪನಿಯು 20022 ಆಗಸ್ಟ್ 26ರಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಈ ಕುರಿತು ಪ್ರತಿಕ್ರಿಯಿಸಿದ ಜನಜಾಗೃತಿ ಸಮಿತಿಯ ಕಾರ್ಯಕಾರಿ ಅಧ್ಯಕ್ಷರಾದ ಬಾಲಕೃಷ್ಣ ಎಸ್. ಶೆಟ್ಟಿ, 'ಈ ವಿಚಾರದಲ್ಲಿ ಸಿಪಿಸಿಬಿ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

10 ಗ್ರಾ.ಪಂಗಳಲ್ಲಿ 'ಬ್ರಿಟಿಷ್ ಕೌನ್ಸಿಲ್ ಕಾರ್ನರ್'

ಬೆಂಗಳೂರು: ರಾಜ್ಯದ ಆಯ್ದ 10 ಗ್ರಾಮ ಪಂಚಾಯಿತಿ ಅರಿವು ಕೇಂದ್ರಗಳಲ್ಲಿ 'ಬ್ರಿಟಿಷ್ ಕೌನ್ಸಿಲ್ ಕಾರ್ನರ್' ಸ್ಥಾಪನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಚಾಲನೆ ನೀಡಿದರು.

ಬ್ರಿಟಿಷ್ ಕೌನ್ಸಿಲ್ ಕಾರ್ನರ್‌ಗಾಗಿ ಗುರುತಿಸಲಾದ 10 ಗ್ರಾಮ ಪಂಚಾಯತಿ ಅರಿವು ಕೇಂದ್ರಗಳ ವಿವರ: ಬಾಗಲಕೋಟೆ ಜಿಲ್ಲೆ ಕುಂದರಗಿ, ಬೆಳಗಾವಿ ಜಿಲ್ಲೆ ಬೈಲೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಕನ್ನಮಂಗಲ, ಚಿಕ್ಕಬಳ್ಳಾಪುರ ಜಿಲ್ಲೆ ವಾಟದಹೊಸಹಳ್ಳಿ, ಗದಗಜಿಲ್ಲೆ ಡೋಣಿ, ಕಲಬುರಗಿ ಜಿಲ್ಲೆ ನಾಲವಾರ, ಮಂಡ್ಯ ಜಿಲ್ಲೆ ಉಮ್ಮಡಹಳ್ಳಿ, ರಾಯಚೂರು ಜಿಲ್ಲೆ ಕಲ್ಲೂರು, ರಾಮನಗರ ಜಿಲ್ಲೆ ನೀಲಸಂದ್ರ, ವಿಜಯಪುರ ಜಿಲ್ಲೆ ತೊರವಿಗ್ರಾಮ ಪಂಚಾಯಿತಿಗಳಲ್ಲಿ ಬ್ರಿಟಿಷ್ ಕೌನ್ಸಿಲ್ ಕಾರ್ನರ್' ಕಾರ್ಯನಿರ್ವಹಿಸಲಿವೆ.

ಮಾಲಿನ್ಯ ನಿಯಂತ್ರಣ ಮಂಡಳಿಯ 'ಫೇಸ್‌ಲೆಸ್' ವ್ಯವಸ್ಥೆಗೆ ಖಂಡ್ರೆ ಚಾಲನೆ

'ಎಚ್‌ಎಂಟಿ ಭೂಮಿ: ಅಧಿಕಾರಿಗಳ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: 'ಎಚ್‌ಎಂಟಿ ವಶದಲ್ಲಿರುವ 180 ಎಕರೆ ಅರಣ್ಯ ಭೂಮಿಯ ಡಿನೋಟಿಫಿಕೇಶನ್‌ಗೆ ಸಚಿವ ಸಂಪುಟದ ಪೂರ್ವಾನುಮತಿ ಪಡೆಯದೆ ಸುಪ್ರೀಂಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿರುವ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಅಧಿಕಾರಿಗಳ ಉತ್ತರ ಪರಿಶೀಲಿಸಿ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವಿವಿಧ ಸೇವೆಗಳನ್ನು ಒಂದೇ ಸೂರಿನಡಿ ತರುವ ಮುಖಾಮುಖಿರಹಿತ (ಫೇಸ್‌ಲೆಸ್) ಆನ್‌ಲೈನ್ ವ್ಯವಸ್ಥೆಗೆ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, 'ಮಧ್ಯಂತರ ಅರ್ಜಿ ಹಿಂಪಡೆಯಲು ಕಳೆದ ಸಚಿವ ಸಂಪುಟ ಸಭೆಯಲ್ಲಿ ಘಟನೋತ್ತರ ಅನುಮೋದನೆ ನೀಡಲಾಗಿದೆ. ಭಾರಿ ಮೌಲ್ಯದ ಈ ಭೂಮಿಯನ್ನು ನಷ್ಟದಿಂದ ಮುಚ್ಚಿ ಹೋಗಿರುವ ಎಚ್‌ಎಂಟಿ ಸಂಸ್ಥೆ ಅಕ್ರಮವಾಗಿ ಖಾಸಗಿಯವರಿಗೆ ಮಾರಾಟ ಮಾಡಿ ರಿಯಲ್ ಎಸ್ಟೇಟ್ ಮಾಡಲು ಬಿಡುವುದಿಲ್ಲ' ಎಂದರು.

'ಪರಿಸರ ಮಾಲಿನ್ಯ ಮಂಡಳಿಯ ಸೇವೆಗಳನ್ನು ಉದ್ಯಮ ಮತ್ತು ಪರಿಸರಸ್ನೇಹಿ ಮಾಡುವುದು ಫೇಸ್‌ಲೆಸ್ ಸೇವೆಯ ಉದ್ದೇಶ. ಉದ್ದಿಮೆಗಳಿಗೆ, ಸಂಸ್ಥೆಗಳಿಗೆ ಮಂಡಳಿ ನೀಡುತ್ತಿರುವ ವಿವಿಧ ಸೇವೆಗಳನ್ನು ಶೀಘ್ರವಾಗಿ ಮತ್ತು ಸುಲಲಿತವಾಗಿ ಒಂದೇ ಸೂರಿನಡಿ ನೀಡಲು ಈ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ (ಐಐಐಟಿಬಿ) ನಿರ್ದೇಶಕ ದೇಬಬ್ರತ ದಾಸ್ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ತಂತ್ರಜ್ಞರ ಸಮಿತಿಯು ಅರಣ್ಯ ಇಲಾಖೆ, ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ, ಡಿಪಿಎಆರ್ (ಇ-ಆಡಳಿತ) ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳ ಜೊತೆ ಚರ್ಚಿಸಿ ಈ ತಂತ್ರಾಂಶವನ್ನು ಸಿದ್ಧಪಡಿಸಿದೆ' ಎಂದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಜಯ್ ಮೋಹನ್ ರಾಜ್, ದೇಬಬ್ರತ ದಾಸ್ ಇದ್ದರು.

'ಫೆಬ್ರುವರಿಯಲ್ಲಿ ಅರ್ಜುನನ ಸ್ಮಾರಕ ಉದ್ಘಾಟನೆ'

'ಹಾಸನ ಜಿಲ್ಲೆಯ ಯಸಳೂರು ಅರಣ್ಯದಲ್ಲಿ 2023ರ ಡಿ. 4 ರಂದು ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮೃತಪಟ್ಟ, ದಸರಾ ಅಂಬಾರಿ ಹೊರುತ್ತಿದ್ದ ಆನೆ ಅರ್ಜುನನ ಸ್ಮಾರಕವನ್ನು ಫೆಬ್ರುವರಿ ಮೊದಲ ವಾರ ಉದ್ಘಾಟಿಸಲಾಗುವುದು. ಸ್ಮಾರಕ ಅರಣ್ಯ ಪ್ರದೇಶದಲ್ಲಿದ್ದು, ಸಾರ್ವಜನಿಕರ ದರ್ಶನಕ್ಕೆ ತೊಡಕಾಗದ ರೀತಿಯಲ್ಲಿ ಕ್ರಮ ವಹಿಸಲಾಗುವುದು' ಎಂದು ಸಚಿವರು ತಿಳಿಸಿದರು.

ಬಳ್ಳೆಯಲ್ಲೂ ಸ್ಮಾರಕ: ಕಾಕನಕೋಟೆಯಲ್ಲಿ 1968ರಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸೆರೆ ಹಿಡಿಯಲಾಗಿದ್ದ ಅರ್ಜುನ, ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿರುವ ಬಳ್ಳೆ ಆನೆ ಶಿಬಿರದಲ್ಲಿದ್ದ. ಹೀಗಾಗಿ, ಬಳ್ಳೆಯಲ್ಲಿ ಕೂಡ ಸ್ಮಾರಕ ನಿರ್ಮಿಸಲಾಗಿದ್ದು, ಫೆಬ್ರುವರಿ ಅಂತ್ಯದಲ್ಲಿ ಅಥವಾ ಮಾರ್ಚ್ ಮೊದಲ ವಾರದಲ್ಲಿ ಆ ಸ್ಮಾರಕವನ್ನೂ ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲಾಗುವುದು' ಎಂದರು.

ಅಪಪ್ರಚಾರ: ಮಹೇಶ್ ಶೆಟ್ಟಿಗೆ ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ಧರ್ಮಾಧಿಕಾರಿಯೂ ಆದ ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ, ಅವರ ಕುಟುಂಬ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಂಬಂಧಿಸಿದ ಸಂಸ್ಥೆಗಳ ವಿರುದ್ಧ ಯಾವುದೇ ಮಾನಹಾನಿ ಹೇಳಿಕೆ ನೀಡದಂತೆ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಅವರ ಅನುಯಾಯಿಗಳಿಗೆ ಹೈಕೋರ್ಟ್ ಎಚ್ಚರಿಕೆ ನೀಡಿದೆ.

ಈ ಸಂಬಂಧ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಶೀನಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ರಾಜಶೇಖರ ಹುಲಿಯಾರು ಅವರ ವಾದ ಆಲಿಸಿದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿತು.

'ಪ್ರತಿವಾದಿಯಾಗಿರುವ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಇತರರ ವಿರುದ್ಧ ಸಿವಿಲ್ ನ್ಯಾಯಾಲಯದ ನಿರ್ಬಂಧದ ಆದೇಶ ಇದ್ದರೂ, ಧರ್ಮಸ್ಥಳ ಹಾಗೂ ಧರ್ಮಾಧಿಕಾರಿಗಳ ವಿರುದ್ಧ ಅಪಪ್ರಚಾರ, ಮಾನಹಾನಿಕರ ಕೃತ್ಯಗಳಲ್ಲಿ ತೊಡಗಿರುವುದು ನ್ಯಾಯಾಂಗ ವ್ಯವಸ್ಥೆ ಮತ್ತು ನ್ಯಾಯಮೂರ್ತಿಗಳ ವಿರುದ್ಧ ನಿಂದನೆ ಮಾತುಗಳನ್ನಾಡಿರುವುದು ಸರಿಯಲ್ಲ' ಎಂದು ನ್ಯಾಯಪೀಠ ತೀವ್ರ ಅಸಮಾಧಾನ ಹೊರಹಾಕಿತು.

'ಇಂತಹ ವರ್ತನೆಯ ಬಗ್ಗೆ ಮಹೇಶ್ ಶೆಟ್ಟಿ ನ್ಯಾಯಾಲದಲ್ಲಿ ಬೇಷರತ್ ಕ್ಷಮೆ ಯಾಚಿಸಿದ್ದರೂ ತಮ್ಮ ವರ್ತನೆ ಸರಿಪಡಿಸಿಕೊಂಡಿಲ್ಲ' ಎಂದ ನ್ಯಾಯಪೀಠ; 'ಇದು ಹೀಗೆ ಮುಂದುವರೆದರೆ ಕಾನೂನಿನ ಪ್ರಕಾರ ತಕ್ಷಣವೇ ಕ್ರಮ ಜರುಗಿಸಬೇಕು' ಎಂದು ಪೊಲೀಸರಿಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಮಂಗಳವಾರ, ಜನವರಿ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 21 | ಪುಟ 14

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಜೀವನದಲ್ಲಿ ಉತ್ಸಾಹಶೀಲರಾಗಿದ್ದರೆ ಎಂಥ ಸಮಸ್ಯೆಗಳನ್ನಾದರೂ ಎದುರಿಸಬಹುದು



ಆಳ-ಅಗಲ
ಮನಕಲಕಿದ ಹೀನ ಕೃತ್ಯ

ಛತ್ತೀಸಗಢ: ಎನ್‌ಕೌಂಟರ್‌ಗೆ ಇಬ್ಬರು ಮಹಿಳಾ ನಕ್ಸಲರ ಬಲಿ 9

ಯಾರೊಂದಿಗೂ ಭಿನ್ನಾಭಿಪ್ರಾಯವಿಲ್ಲ: ಡಿಕೆಶಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,073	23,344	₹83,680 (ಬೆಂಗಳೂರು)	₹96,200 (ಬೆಂಗಳೂರು)	86.45

ಪರಿಶ್ರಮ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್(ರಿ)
ಪರಿಶ್ರಮ ಪಿಯು ಕಾಲೇಜು
Recg. by Dept. of PU Education, GoK | College Code: AS1057
2025-26 ನೋಂದಣಿ ಪ್ರಾರಂಭವಾಗಿವೆ

1st PUC (PCMB) Admission Started
RESIDENTIAL & DAY SCHOLAR
Integrated NEET Prepation
Everyday objective type exam
Integrated NEET Prepation
Special Focus on answer writing for Board exams
Solving more than 1 lakh MCQ
Guiding you through every sub topic in detail, followed by MCQ
Parishrama is one among the top institutes to send students to AIIMS & JIPMER
080 24413400, 74838 30545 www.parishramaneetacademy.com

ಆರ್‌.ಜಿ.ಕರ್ ಆಸ್ಪತ್ರೆಯ ವೈದ್ಯೆ ಮೇಲೆ ಅತ್ಯಾಚಾರ, ಹತ್ಯೆ ಪ್ರಕರಣದ ಆದೇಶ ಪ್ರಕಟಿಸಿದ ಕೋರ್ಟ್

ರಾಯ್‌ಗೆ ಜೀವನಪೂರ್ತಿ ಜೈಲು

ಕೋಲ್ಕತ್ತ (ಪಿಟಿಐ): ಆರ್‌.ಜಿ. ಕರ್ ವೈದ್ಯಕೀಯ ಕಾಲೇಜಿನ ವೈದ್ಯೆ ಮತ್ತು ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿ, ಆಕೆಯನ್ನು ಹತ್ಯೆ ಮಾಡಿದ ಸಂಜಯ್ ರಾಯ್ ಜೀವ ಇರುವವರೆಗೆ ಜೈಲು ಶಿಕ್ಷೆ ಅನುಭವಿಸಬೇಕು ಎಂದು ಸಿಯಾಲದಹ ದಲ್ಲಿರುವ ನ್ಯಾಯಾಲಯವು ಸೋಮ ವಾರ ಆದೇಶಿಸಿದೆ. ಈ ಪ್ರಕರಣದಲ್ಲಿ ರಾಯ್ ಅಪರಾಧಿ ಎಂದು ನ್ಯಾಯಾಲಯವು ಶನಿವಾರ ಘೋಷಿಸಿತ್ತು.

ರಾಯ್ ಎಸಗಿರುವ ಅಪರಾಧವು ‘ಅಪ ರೂಪದಲ್ಲಿ ಅಪರೂಪದ ಪ್ರಕರಣ’ಗಳ ಸಾಲಿಗೆ ಬರುವುದಿಲ್ಲವಾದ ಕಾರಣ ಈತನಿಗೆ ಮರಣದಂಡನೆ ವಿಧಿಸಿಲ್ಲ ಎಂದು ನ್ಯಾಯಾಧೀಶ ಅನಿರ್ಬನ್ ದಾಸ್ ಅವರು ಹೇಳಿದ್ದಾರೆ. ಮೃತ ವೈದ್ಯ ವಿದ್ಯಾರ್ಥಿನಿಯ ಕುಟುಂಬಕ್ಕೆ ಪರಿಹಾರವಾಗಿ ₹17 ಲಕ್ಷ ನೀಡಬೇಕು ಎಂದು ಅವರು ರಾಜ್ಯ ಸರ್ಕಾರಕ್ಕೆ ಆದೇಶಿಸಿದ್ದಾರೆ.

ಅಪರಾಧಿ ರಾಯ್, ಆತನ ಪರ ವಕೀಲರು ಹಾಗೂ ಸಂತ್ರಸ್ತೆಯ ಕುಟುಂಬದ ಸದಸ್ಯರ ಹೇಳಿಕೆಗಳನ್ನು ಆಲಿಸಿದ ನಂತರ ನ್ಯಾಯಾಧೀಶರು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದರು.

ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 64ರ ಅಡಿಯಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆ, ₹50 ಸಾವಿರ ದಂಡ ವಿಧಿಸಲಾಗುತ್ತಿದೆ ಎಂದು ನ್ಯಾಯಾಧೀಶರು ಹೇಳಿದರು.

> **ಅಪರಾಧಿಗೆ ಮರಣ ದಂಡನೆ ವಿಧಿಸಲು ಆಗ್ರಹಿಸಿದ್ದೆವು. ಕೋಲ್ಕತ್ತ ಪೊಲೀಸರು ತನಿಖೆ ನಡೆಸಿದ್ದಿದ್ದರೆ ಆತನಿಗೆ ಮರಣ ದಂಡನೆ ಆಗುವಂತೆ ನೋಡಿಕೊಳ್ಳುತ್ತಿದ್ದೆವು**
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಬಿಎನ್‌ಎಸ್‌ನ ಸೆಕ್ಷನ್ 103(1)ರ ಅಡಿಯಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆ ಮತ್ತು ₹50 ಸಾವಿರ ದಂಡ ವಿಧಿಸಲಾಗಿದೆ. ಸೆಕ್ಷನ್ 66ರ ಅಡಿಯಲ್ಲಿ ಅಪರಾಧಿಗೆ ಸಾಯುವವರೆಗೂ ಜೈಲುಶಿಕ್ಷೆ ವಿಧಿಸಲಾಗಿದೆ ಎಂದು ನ್ಯಾಯಧೀಶ ದಾಸ್ ಹೇಳಿದರು. ಎಲ್ಲ ಶಿಕ್ಷೆಗಳು ಏಕಕಾಲದಲ್ಲಿ ಜಾರಿಯಲ್ಲಿರುತ್ತವೆ.

ಅಪರಾಧಿಗೆ ಮರಣ ದಂಡನೆ ವಿಧಿಸಬೇಕು ಎಂದು ಸಿಬಿಐ ಕೋರಿತು. ಆದರೆ ಮರಣ ದಂಡನೆಯ ಬದಲು ಜೈಲು ಶಿಕ್ಷೆ ವಿಧಿಸಬೇಕು ಎಂದು ಅಪರಾಧಿಯ ಪರ ವಕೀಲರು ಕೋರಿದರು.

ತಮ್ಮ ಆದೇಶವನ್ನು ಪ್ರಶ್ನಿಸಿ ಕಲ್ಕತ್ತ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಹಕ್ಕು ರಾಯ್‌ಗೆ ಇದೆ, ಮೇಲ್ಮನವಿ ಸಲ್ಲಿ-ಸುವುದಾದರೆ ಹಾಗೂ ಅಗತ್ಯವಿದ್ದರೆ ಕಾನೂನು ನೆರವು ಒದಗಿಸಲಾಗುತ್ತದೆ ಎಂದು ದಾಸ್ ಅವರು ಹೇಳಿದರು.

ಇದಕ್ಕೂ ಮೊದಲು ರಾಯ್, ತಾನು ನಿರಪರಾಧಿ, ತನ್ನನ್ನು ಅಪರಾಧಿ ಎಂದು ಘೋಷಿಸಿರುವುದು ತಪ್ಪು ಎಂದು ಹೇಳಿದ್ದ. ‘ನಾನು ಅಪರಾಧ ಎಸಗಿಲ್ಲ... ಹೀಗಿದ್ದರೂ ನನ್ನನ್ನು ಅಪರಾಧಿ ಎಂದು ಘೋಷಿಸಲಾಗಿದೆ’ ಎಂದು ಶಿಕ್ಷೆ ಪ್ರಮಾಣ ಪ್ರಕಟವಾಗುವ ಮೊದಲು ರಾಯ್ ನ್ಯಾಯಾಲಯಕ್ಕೆ ಹೇಳಿದ್ದ.

ಸಮಾಧಾನ ಇಲ್ಲ: ಪಾಲಕರು

ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸಿರುವುದು ತಮಗೆ ಸಮಾಧಾನ ತಂದಿಲ್ಲ ಎಂದು ವೈದ್ಯ ವಿದ್ಯಾರ್ಥಿನಿಯ ತಂದೆ–ತಾಯಿ ಹೇಳಿದ್ದಾರೆ.

ಈ ಅಪರಾಧ ಕೃತ್ಯದಲ್ಲಿ ಭಾಗಿಯಾದ ಇತರ ಹಲವರನ್ನು ರಕ್ಷಿಸಲಾಗಿದೆ, ತನಿಖೆಯನ್ನು ಪೂರ್ಣ ಮನಸ್ಸಿನಿಂದ ನಡೆಸಿಲ್ಲ ಎಂದು ಅವರು ಹೇಳಿದ್ದಾರೆ. ನ್ಯಾಯ ಕೋರಿ ತಾವು ಮೇಲಿನ ಹಂತದ ನ್ಯಾಯಾಲಯದ ಮೊರೆಹೋಗುವುದಾಗಿ ಅವರು ತಿಳಿಸಿದ್ದಾರೆ.

‘ನಮಗೆ ಆಘಾತವಾಗಿದೆ. ಕರ್ತವ್ಯದಲ್ಲಿದ್ದ ವೈದ್ಯೆಯೊಬ್ಬಳ ಮೇಲೆ ಅತ್ಯಾಚಾರ ಎಸಗಿ ಆಕೆಯನ್ನು ಕೊಲ್ಲಲಾಗಿದೆ. ಇದು ಅತ್ಯಂತ ಅಪರೂಪದಲ್ಲಿ ಅಪರೂಪದ ಪ್ರಕರಣ ಏಕೆ ಅಲ್ಲ? ನಮಗೆ ನಿರಾಶೆಯಾಗಿದೆ. ಈ ಅಪರಾಧದ ಹಿಂದೆ ದೊಡ್ಡ ಪಿತೂರಿ ಇತ್ತು’ ಎಂದು ವಿದ್ಯಾರ್ಥಿನಿಯ ತಾಯಿ ಹೇಳಿದ್ದಾರೆ.

ಇತರ ಎಲ್ಲ ಅಪರಾಧಿಗಳಿಗೆ ಶಿಕ್ಷೆ ಆಗುವವರೆಗೂ ತಾವು ಹೋರಾಟ ನಡೆಸುವುದಾಗಿ ತಂದೆ ಹೇಳಿದ್ದಾರೆ. ತಮಗೆ ಪರಿಹಾರ ಮೊತ್ತ ಬೇಕಾಗಿಲ್ಲ ಎಂದೂ ಅವರು ಹೇಳಿದ್ದಾರೆ.

ವಿದ್ಯಾರ್ಥಿನಿಗೆ ನ್ಯಾಯ ಸಿಗಬೇಕು ಎಂದು ಧರಣಿ ನಡೆಸಿದ್ದ ಕಿರಿಯ ವೈದ್ಯರು ಕೂಡ, ತನಿಖೆಯು ಇನ್ನಷ್ಟು ವಿಸ್ತೃತವಾಗಿ ಆಗಬೇಕು ಎಂದು ಆಗ್ರಹಿಸಿದ್ದಾರೆ.

ಮರಣ ದಂಡನೆ ವಿಧಿಸಬೇಕು: ಬಿಜೆಪಿ

ಕೋಲ್ಕತ್ತ/ನವದೆಹಲಿ (ಪಿಟಿಐ): ಅಪರಾಧಿಗೆ ವಿಧಿಸಿರುವ ಶಿಕ್ಷೆಯ ಪ್ರಮಾಣದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿರುವ ಬಿಜೆಪಿಯ ಮುಖಂಡ ಅಗ್ನಿಮಿತ್ರ ಪೌಲ್, ‘ಆತನಿಗೆ ಮರಣ ದಂಡನೆ ವಿಧಿಸಬೇಕು’ ಎಂದು ಆಗ್ರಹಿಸಿದ್ದಾರೆ. ಈ ಅಪರಾಧದಲ್ಲಿ ಭಾಗಿಯಾದ ಇತರರನ್ನು ಪತ್ತೆ ಮಾಡಲು ತನಿಖೆ ನಡೆಸಬೇಕು ಎಂದು ಕೋರಿದ್ದಾರೆ.

‘ಅಣಕ’: ಜೀವಾವಧಿ ಶಿಕ್ಷೆ ವಿಧಿಸಿರುವುದು ‘ನ್ಯಾಯದಾನದ ಅಣಕ’ ಎಂದು ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

ಈ ಆದೇಶವನ್ನು ಮೇಲಿನ ಹಂತದ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕು, ಸಾಕ್ಷ್ಯಗಳನ್ನು ನಾಶಪಡಿಸಿದ ಕೃತ್ಯದಲ್ಲಿ ಅಂದಿನ ಕೋಲ್ಕತ್ತ ಆಯುಕ್ತರು ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಪಾತ್ರದ ಬಗ್ಗೆ ತನಿಖೆ ಆಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಇಟ್ಟಿಗೆ ಭಟ್ಟಿ ಕಾರ್ಮಿಕರ ಮೇಲೆ ಹಲ್ಲೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಟ್ಟಿಗೆ ಭಟ್ಟಿಯೊಂದ-ರಲ್ಲಿ ಕೆಲಸ ಮಾಡಲು ನಿರಾಕರಿಸಿದ ಮೂವರು ಕೂಲಿ ಕಾರ್ಮಿಕರನ್ನು ಕೂಡಿಹಾಕಿ, ಕೈ-ಕಾಲು ಕಟ್ಟಿ ಅಮಾನವೀಯವಾಗಿ ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಟ್ಟಿಗೆ ಭಟ್ಟಿ ಮಾಲೀಕ, ಮಾಲೀಕನ ಮಗ ಸೇರಿ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಕೂಲಿ ಕಾರ್ಮಿಕರಾದ ಸದಾಶಿವ ಮಾದರ, ಸದಾಶಿವ ಬಬಲಾದಿ ಮತ್ತು ಉಮೇಶ ಮಾದರ ಅವರಿಗೆ ಅಂಗಾಲು, ಬೆನ್ನು, ಸೊಂಟಕ್ಕೆ ಗಾಯಗಳಾಗಿದ್ದು, ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲ್ಲೆ ಆರೋಪದ ಮೇಲೆ ಇಟ್ಟಿಗೆ ಭಟ್ಟಿ ಮಾಲೀಕ ಬಸವನಗರದ ಖೇಮು ರಾಠೋಡ, ಆತನ ಮಗ ರೋಹನ್ ಖೇಮು ರಾಠೋಡ ಹಾಗೂ ಸಹಚರರಾದ ಕನಕಮೂರ್ತಿ ಗೋಂಧಳಿ, ಸಚಿನ ಮಾನವರ, ವಿಶಾಲ ಜುಮನಾಳ ಎಂಬುವರನ್ನು ಬಂಧಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

> **ಕಾರ್ಮಿಕರ ಮೇಲೆ ನಡೆದಿರುವ ಹಲ್ಲೆ ಅಮಾನವೀಯ. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು**
> **ಎಂ. ಬಿ. ಪಾಟೀಲ**
> ಜಿಲ್ಲಾ ಉಸ್ತುವಾರಿ ಸಚಿವ, ವಿಜಯಪುರ

‘ಗಾಂಧಿ ನಗರದಲ್ಲಿರುವ ಇಟ್ಟಿಗೆ ಭಟ್ಟಿಯಲ್ಲಿ ಪ್ರತಿ ದಿನ ₹600 ಕೂಲಿಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕಳೆದ ಸಂಕ್ರಮಣದಂದು ಮನೆಗೆ ತೆರಳಿದ್ದರು. ಕೆಲಸಕ್ಕೆ ಬರುವಂತೆ ಇಟ್ಟಿಗೆ ಭಟ್ಟಿ ಮಾಲೀಕ ದೂರವಾಣಿ ಕರೆ ಮಾಡಿದಾಗ, ಹಬ್ಬದ ಖರ್ಚಿಗೆ ₹10 ಸಾವಿರ ನೀಡಲು ಕಾರ್ಮಿಕರು ಕೋರಿದ್ದರು. ಹಣ ಕೊಡುವುದಾಗಿ ಮಾಲೀಕ ಹೇಳಿದ್ದ. ಜನವರಿ 16ರಂದು ಬಂದ ಕಾರ್ಮಿಕರಿಗೆ ಮಾಲೀಕ ಹಣ ಕೊಡದೇ, ಹೆದರಿಸಿ, ಬೆದರಿಸಿ ಕೆಲಸ ಮಾಡಿಸಿದ’ ಎಂದು ವಿವರಿಸಿದರು.

‘ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡಲು ಒಪ್ಪದೇ, ಕೂಲಿ ಕಾರ್ಮಿಕರು ತಮ್ಮ ಎಲ್ಲಾ ವಸ್ತುಗಳ ಸಹಿತ ಮನೆಗೆ ಹೋಗಲು ಪ್ರಯತ್ನಿಸಿದಾಗ, ಮಾಲೀಕ ಮತ್ತು ಆತನ ಮಗ ತಡೆದಿದ್ದಾರೆ. ತಮ್ಮ ಕಡೆಯ ಜನರನ್ನು ಕರೆಸಿಕೊಂಡು, ಕಾರ್ಮಿಕರನ್ನು ಕೊಠಡಿಯಲ್ಲಿ ಕೂಡಿ ಹಾಕಿ, ನಿತ್ಯವೂ ಹಲ್ಲೆ ಮಾಡಿಸಿದ್ದಾರೆ’ ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಕಸರತ್ತು

ಅಭಿಪ್ರಾಯ ಸಂಗ್ರಹ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷರ ಆಯ್ಕೆ ವಿಚಾರವಾಗಿ ಸಂಸದರು, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರ ಸಭೆಯಲ್ಲಿ ಅಭಿಪ್ರಾಯ ಸಂಗ್ರಹ ಕಾರ್ಯ ಮಂಗಳವಾರ ನಡೆಯಲಿದೆ.

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್, ಸಹ ಉಸ್ತುವಾರಿಗಳಾದ ಸುಧಾಕರ ರೆಡ್ಡಿ, ಚುನಾವಣಾ ಸಹ ಉಸ್ತುವಾರಿ ಪೊನ್ ರಾಧಾಕೃಷ್ಣನ್ ಸಮ್ಮುಖದಲ್ಲಿ ಜಗನ್ನಾಥ ಭವನದಲ್ಲಿ ಮಧ್ಯಾಹ್ನ 3ಕ್ಕೆ ಅಭಿಪ್ರಾಯ ಸಂಗ್ರಹ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಇದೇ ವೇಳೆ ಜಿಲ್ಲಾ ಅಧ್ಯಕ್ಷರ ನೇಮಕದ ಪ್ರಕ್ರಿಯೆಯೂ ನಡೆಯಲಿದೆ. ಹಲವು ಜಿಲ್ಲೆಗಳಿಂದ ಈಗಾಗಲೇ ಅಭಿಪ್ರಾಯ ಸಂಗ್ರಹಿಸಲಾಗಿದೆ. ನಾಳೆ ಹೆಸರುಗಳನ್ನು ಅಂತಿಮಗೊಳಿಸ ಲಾಗುವುದು ಎಂದು ತಿಳಿಸಿವೆ.

9ನೇ ಪುಟ ನೋಡಿ

ಕೆಲಸ ಇಲ್ಲದವರ ಬಗ್ಗೆ ಮಾತನಾಡಲ್ಲ: ವಿಜಯೇಂದ್ರ

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷವನ್ನು ಬಲಗೊಳಿಸುವತ್ತ ಗಮನ-ಕೊಡುತ್ತೇನೆ. ಬಸವನಗೌಡ ಪಾಟೀಲ ಯತ್ನಾಳ ಅಥವಾ ಯಾರೇ ಇರಲಿ ತಲೆಕೆಡಿಸಿಕೊಳ್ಳುವುದಿಲ್ಲ. ಕೆಲಸ ಇಲ್ಲದವರ ಬಗ್ಗೆ ಮಾತಾನಾಡುವು-ದಿಲ್ಲ’ ಎಂದು ವಿಜಯೇಂದ್ರ ತಿಳಿಸಿದರು.

‘ಪಕ್ಷದ ಈಚಿನ ಬೆಳವಣಿಗೆಗಳ ಬಗ್ಗೆ ಕಾರ್ಯಕರ್ತರಿಗೆ ನೋವಾಗಿದೆ. ಆ ನೋವು ಏನು ಎನ್ನುವುದು ಎಲ್ಲರಿಗೂ ಅರ್ಥ ಆಗುತ್ತೆ. ಇವೆಲ್ಲದಕ್ಕೂ ಪಕ್ಷದ ವರಿಷ್ಠರು ಅಂತ್ಯ ಕಾಣಿಸಲಿದ್ದಾರೆ’ ಎಂದರು.

ಬಂಧಿತರಿಂದ ಪಿಸ್ತೂಲ್, ಮಾರಕಾಸ್ತ್ರ, ನಗದು ವಶ

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಜಂಕ್ಷನ್ ಶಾಖೆಯಲ್ಲಿ ನಡೆದ ಕಳ್ಳತನ

₹14 ಕೋಟಿ ಚಿನ್ನ ದರೋಡೆ ಪ್ರಕರಣ: ಮೂವರ ಬಂಧನ

ಮಂಗಳೂರು: ಉಳ್ಳಾಲ ಸಮೀಪದ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಜಂಕ್ಷನ್ ಶಾಖೆಯಲ್ಲಿ ನಡೆದ ₹14 ಕೋಟಿ ಮೊತ್ತದ ಚಿನ್ನಾಭರಣ ದರೋಡೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ತಮಿಳುನಾಡಿನಲ್ಲಿ ಮೂವರನ್ನು ಬಂಧಿಸಿದ್ದಾರೆ.

ತಮಿಳುನಾಡು ತಿರುನಲ್ವೇಲಿ ಜಿಲ್ಲೆಯ ಪದ್ಮನೇರಿ ಗ್ರಾಮದ ಮುರುಗುಂಡಿ ಥೇವರ್ (36), ಮುಂಬೈನ ದೊಂಬಿವಲಿ ವೆಸ್ಟ್‌ನ ಯೊಸುವಾ ರಾಜೇಂದ್ರನ್ (35) ಹಾಗೂ ಮುಂಬೈ ಚೆಂಬೂರ್ ತಿಲಕ ನಗರದ ಕಣ್ಣನ್ ಮಣಿ (36) ಬಂಧಿತರು.

ಬಂಧಿತರಿಂದ ಎರಡು ಪಿಸ್ತೂಲ್, ಮೂರು ಗುಂಡುಗಳು, ಮಾರಕಾಸ್ತ್ರ, ನಗದು ಮತ್ತು ಆಭರಣ, ಕೃತ್ಯಕ್ಕೆ ಬಳಸಿದ್ದ ಮಹಾರಾಷ್ಟ್ರ ನೋಂದಣಿಯ ಫಿಯೆಟ್ ಕಾರನ್ನು ವಶಕ್ಕೆ ಪಡೆಯಲಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದರು.

8ನೇ ಪುಟ ನೋಡಿ

₹4 ಕೋಟಿ ಮೌಲ್ಯದ ಆಭರಣ ಜಪ್ತಿ

ಬೆಳಗಾವಿ: ದಕ್ಷಿಣ ಕನ್ನಡ ಬ್ಯಾಂಕ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ಬಂಧನವಾಗಿದೆ. 4 ಕೆಜಿ ಚಿನ್ನ ಸೇರಿ ₹4 ಕೋಟಿ ಮೌಲ್ಯದ ಆಭರಣ ಜಪ್ತಿ ಮಾಡಲಾಗಿದೆ. ಬೀದರ್‌ನ ಎಟಿಎಂ ಕೇಂದ್ರದ ದರೋಡೆ ಪ್ರಕರಣದ ಆರೋಪಿಗಳ ಸುಳಿವು ಸಹ ಸಿಕ್ಕಿದೆ. ಆರೋಪಿಗಳು ಉತ್ತರ ಪ್ರದೇಶದಲ್ಲಿ ಇರುವ ಬಗ್ಗೆ ಮಾಹಿತಿ ಇದೆ. ಶೀಘ್ರವೇ ಬಂಧಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಮಲ್ಲಣ್ಣ ಜಾತ್ರೆ... ತೆಲಂಗಾಣದ ಸಿದ್ದಿಪೇಟೆ ಜಿಲ್ಲೆಯ ಪುಣ್ಯಕ್ಷೇತ್ರ ಕೊಮುರವೆಲ್ಲಿಯಲ್ಲಿ ಮಲ್ಲಣ್ಣ ಜಾತ್ರೆ ಸೋಮವಾರ ಸಂಭ್ರಮದಿಂದ ಆರಂಭವಾಗಿದ್ದು, ಅಪಾರ ಭಕ್ತರು ಪಾಲ್ಗೊಂಡರು –ಪಿಟಿಐ ಚಿತ್ರ

ಮೈಕ್ರೊ ಫೈನಾನ್ಸ್: ವ್ಯವಸ್ಥಾಪಕನ ಬಂಧನ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಕೂನಮುದ್ದನಹಳ್ಳಿಯಲ್ಲಿರುವ ಇರುಳಿಗರ ಕಾಲೊನಿ ಮಹಿಳೆಯೊಬ್ಬರಿಗೆ ಸಾಲ ಪಾವತಿಸುವಂತೆ ಕಿರುಕುಳ ನೀಡಿದ ಆರೋಪದ ಮೇಲೆ ನ್ಯೂ ಆಪರ್ಚುನಿಟಿ ಕನ್ಸಲ್ಟೇಷನ್ ಪ್ರೈವೆಟ್ ಲಿಮಿಟೆಡ್ ಫೈನಾನ್ಸ್ ಕಂಪನಿ ಬಿಡದಿ ಶಾಖೆ ವ್ಯವಸ್ಥಾಪಕ ರಘು ಎಂಬವರನ್ನು ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಳೆದ ವರ್ಷ ಕೂನಮುದ್ದನಹಳ್ಳಿಗೆ ಬಂದಿದ್ದ ಫೈನಾನ್ಸ್ ವ್ಯವಸ್ಥಾಪಕ ರಘು ಸ್ಥಳೀಯರನ್ನು ಭೇಟಿಯಾಗಿ ಗುಂಪು ರಚಿಸಿಕೊಂಡರೆ ಸಾಲ ಕೊಡುವುದಾಗಿ ಹೇಳಿದ್ದರು. ಅದರಂತೆ ಏಳು ಮಂದಿಯ ಗುಂಪು ರಚಿಸಿಕೊಂಡಿದ್ದರು. ಆ ಪೈಕಿ, ದೂರುದಾರರಾದ 40 ವರ್ಷದ ಮುನಿವೆಂಕಟಮ್ಮ ಅವರಿಗೆ ಫೈನಾನ್ಸ್ ₹52 ಸಾವಿರ ಸಾಲ ಕೊಟ್ಟಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

9ನೇ ಪುಟ ನೋಡಿ

ಪ್ರಿಯಕರನ ಕೊಲೆ ಯುವತಿಗೆ ಗಲ್ಲು

ತಿರುವನಂತಪುರ (ಪಿಟಿಐ): ತನ್ನ ಪ್ರಿಯಕರನಿಗೆ ವಿಷವುಣಿಸಿ ಕೊಂದಿದ್ದ ಪ್ರಕರಣದಲ್ಲಿ ಯುವತಿ ಗ್ರೀಷ್ಮಾಗೆ (24) ಕೇರಳದ ನ್ಯಾಯಾಲಯವು ಮರಣ ದಂಡನೆ ವಿಧಿಸಿ ಸೋಮವಾರ ತೀರ್ಪು ನೀಡಿದೆ. 9

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಮೆರಿಕದ 47ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ

ಟ್ರಂಪ್ ಎರಡನೇ ಅವಧಿ ಶುರು

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಅಮೆರಿಕದ 47ನೇ ಅಧ್ಯಕ್ಷರಾಗಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಅಧಿಕಾರ ವಹಿಸಿಕೊಂಡರು. ಆರ್ಥಿಕ ಮತ್ತು ಮಿಲಿಟರಿ ಶಕ್ತಿಯಲ್ಲಿ ವಿಶ್ವದ ಬಲಾಢ್ಯ ರಾಷ್ಟ್ರವಾಗಿರುವ ಅಮೆರಿಕದ ಚುಕ್ಕಾಣಿಯನ್ನು ಎರಡನೇ ಬಾರಿಗೆ ಹಿಡಿಯುವ ಮೂಲಕ ಇತಿಹಾಸ ನಿರ್ಮಿಸಿದರು.

ಅಧಿಕಾರ ವಹಿಸಿಕೊಂಡ ಬಳಿಕ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಹಲವು ಘೋಷಣೆಗಳನ್ನು ಮಾಡಿದರು.

‘ಇಂದಿನಿಂದ ನಮ್ಮ ದೇಶವು ಬಲಿಷ್ಠವಾಗಲಿದೆಯಲ್ಲದೆ, ವಿಶ್ವದಾದ್ಯಂತ ತನ್ನ ಗೌರವವನ್ನು ಮರಳಿ ಪಡೆಯಲಿದೆ. ಪ್ರತಿ ರಾಷ್ಟ್ರವೂ ಅಸೂಯೆಪಡುವ ರೀತಿಯಲ್ಲಿ ನಾವು ಬೆಳವಣಿಗೆ ಸಾಧಿಸಲಿದ್ದೇವೆ’ ಎಂದು ಹೇಳಿದರು.

‘ಅಮೆರಿಕವು ಯಾರಿಗೂ ಮಣಿಯದು ಅಥವಾ ಹೆದರದು. ನಾವು ಎಂದಿಗೂ ವಿಫಲರಾಗುವುದಿಲ್ಲ. ಅಮೆರಿಕವು ಇಂದಿನಿಂದ ಸಾರ್ವಭೌಮ ಮತ್ತು ಸ್ವತಂತ್ರ ರಾಷ್ಟ್ರವಾಗಲಿದೆ. ಭವಿಷ್ಯವು ನಮ್ಮದಾಗಲಿದೆ’ ಎಂದು ಘೋಷಿಸಿದರು.

ಟ್ರಂಪ್ ಅವರು ದಕ್ಷಿಣದ ಗಡಿಯಲ್ಲಿ ತುರ್ತು ಪರಿಸ್ಥಿತಿ ಘೋಷಣೆ, ಸಾಮೂಹಿಕ ಗಡಿಪಾರು, ಮಹಿಳಾ ಕ್ರೀಡಾ ವಿಭಾಗದಲ್ಲಿ ತೃತೀಯ ಲಿಂಗಿಗಳ ಭಾಗವಹಿಸುವಿಕೆಗೆ ತಡೆ, ಇಂಧನ ಶೋಧಕ್ಕೆ ಹೇರಲಾಗಿರುವ ನಿರ್ಬಂಧ ಕೈಬಿಡುವುದು ಹಾಗೂ ಆಡಳಿತದಲ್ಲಿ ದಕ್ಷತೆ ಹೆಚ್ಚಳ ಸೇರಿದಂತೆ ಹಲವು ಕಾರ್ಯಕಾರಿ ಆದೇಶಗಳಿಗೆ ಸಹಿಹಾಕುವ ಸಾಧ್ಯತೆಯಿದೆ. ಅದರ ಸೂಚನೆಯನ್ನು ಅವರು ತಮ್ಮ ಭಾಷಣದಲ್ಲಿ ನೀಡಿದರು.

3B ಪುಟ ನೋಡಿ

ಅಮೆರಿಕದ ಉಪಾಧ್ಯಕ್ಷರಾಗಿ ಜೆ.ಡಿ.ವೇನ್ಸ್, ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಪ್ರಮಾಣವಚನ ಸ್ವೀಕರಿಸಿದ ಬಳಿಕ ಸಂಭ್ರಮಿಸಿದರು ಎಎಫ್‌ಪಿ ಚಿತ್ರ

> **ಎರಡೂ ದೇಶಗಳಿಗೆ ಅನುಕೂಲವಾಗುವಂತೆ ಮತ್ತು ಜಗತ್ತಿನ ಉತ್ತಮ ಭವಿಷ್ಯಕ್ಕಾಗಿ ಟ್ರಂಪ್ ಜತೆ ಮತ್ತೊಮ್ಮೆ ಒಟ್ಟಿಗೆ ಕೆಲಸ ಮಾಡುವುದನ್ನು ಎದುರು ನೋಡುತ್ತಿದ್ದೇನೆ**
> **ನರೇಂದ್ರ ಮೋದಿ,** ಪ್ರಧಾನಿ

> **ಅಮೆರಿಕದ ಸುವರ್ಣಯುಗ ಇದೀಗ ಪ್ರಾರಂಭವಾಗಿದೆ. ಅಮೆರಿಕವನ್ನು ಮತ್ತೆ ಜಗತ್ತಿನ ಶ್ರೇಷ್ಠ ರಾಷ್ಟ್ರವನ್ನಾಗಿಸಲು ದೇವರು ನನ್ನನ್ನು ಕಾಪಾಡಿದ್ದಾನೆ**
> **ಡೊನಾಲ್ಡ್ ಟ್ರಂಪ್**
> ಅಮೆರಿಕದ ಅಧ್ಯಕ್ಷ

VICCO
— ವಿಶ್ವಾಸಾರ್ಹ ಆಯುರ್ವೇದ —
1952 ರಿಂದ
ಸಂಪೂರ್ಣ ಸ್ವದೇಶಿ
Go natural
ಹಳದಿ ಮತ್ತು ಚಂದನದ ಅದೇ ನೈಸರ್ಗಿಕ ಗುಣ
ಈಗ ಹೊಸ ಪ್ಯಾಕ್‌ನಲ್ಲಿ

ವೀಕೋ ಟರ್ಮರಿಕ್ ಕ್ರೀಮ್
ಹಳದಿ ಇದ್ದರೆ ಹೆಲ್ದೀ ಆಗಿರುತ್ತೆ
• Follow us on @viccolabs • Like us on /ViccoLabs
• Shop online at https://viccolabs.com • Customer Care No. 0712-2420890
• Stocks also available in old pack.
ಹೆಚ್ಚಿನ ಮಾಹಿತಿಗೆ ಮತ್ತು ಖರೀದಿಗೆ ಇಲ್ಲಿ ಸ್ಕ್ಯಾನ್ ಮಾಡಿ.

ವಡ್ಡಗೆರೆ ನಾಗರಾಜಯ್ಯಗೆ 'ಕುವೆಂಪು ಅನಿಕೇತನ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 2024ನೇ ಸಾಲಿನ 'ಕುವೆಂಪು ಅನಿಕೇತನ' ಪ್ರಶಸ್ತಿಗೆ ಚಿಂತಕ ವಡ್ಡಗೆರೆ ನಾಗರಾಜಯ್ಯ ಹಾಗೂ 'ಕುವೆಂಪು ಚಿರಂತನ' ಪ್ರಶಸ್ತಿಗೆ ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಹಾಗೂ 'ಕುವೆಂಪು ಯುವ ಕವಿ' ಪ್ರಶಸ್ತಿಗೆ ಕವಯಿತ್ರಿ ಮಂಜುಳಾ ಹುಲಿಕುಂಟೆ ಅವರನ್ನು ಆಯ್ಕೆ ಮಾಡಲಾಗಿದೆ.


ವಡ್ಡಗೆರೆ ನಾಗರಾಜಯ್ಯ


ಅಗ್ರಹಾರ ಕೃಷ್ಣಮೂರ್ತಿ


ಮಂಜುಳಾ ಹುಲಿಕುಂಟೆ

ಇದೇ 31ರ ಸಂಜೆ 5ಕ್ಕೆ ನಗರದ ಎನ್.ಆರ್.ಕಾಲೊನಿಯ ಬಿ.ಎಂ.ಶ್ರೀ ಕಲಾಭವನದಲ್ಲಿ ಸಮಿತಿ ಆಯೋಜಿಸಿರುವ 'ಕುವೆಂಪು ಹಾಗೂ ಬೇಂದ್ರೆ ಹುಟ್ಟು ಹಬ್ಬದ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡ ಹೋರಾಟಗಾರ ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಪ್ರಾಧ್ಯಾಪಕ ಕಾ.ವೆಂ. ಶ್ರೀನಿವಾಸ ಮೂರ್ತಿ, ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪಾಲ್ಗೊಳ್ಳಲಿದ್ದಾರೆ ಎಂದು ಸಮಿತಿ ತಿಳಿಸಿದೆ.

ಸಾಲ: ಊರು ಬಿಟ್ಟ ಕುಟುಂಬಗಳು

ಕುಶಾಲನಗರ (ಕೊಡಗು ಜಿಲ್ಲೆ): ತಾಲ್ಲೂಕಿನ ನಂಜರಾಯಪಟ್ಟಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಮರುಪಾವತಿಸಲು ಆಗದೆ ಹತ್ತಾರು ಕುಟುಂಬಗಳು ಊರು ತೊರೆದಿವೆ.

'ಮೀನುಕೊಲ್ಲಿ ಹಾಡಿ, ದಾಸವಾಳ ಪೈಸಾರಿ ಭಾಗದಲ್ಲಿ ಕಾರ್ಮಿಕ ಕುಟುಂಬಗಳು ಊರು ಬಿಟ್ಟಿವೆ' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಎಲ್.ವಿಶ್ವ ದೂರಿದ್ದಾರೆ.

'ಖಾಸಗಿ ಸಂಸ್ಥೆಗಳು ಮರುಪಾವತಿ ಸಾಮರ್ಥ್ಯ ಗಮನಿಸದೆ ₹ 1 ಸಾವಿರದಿಂದ ₹1 ಲಕ್ಷದವರೆಗೆ ಸಾಲ ನೀಡಿವೆ. ನೊಂದವರಿಗೆ ಕೂಡಲೇ ನ್ಯಾಯ ಒದಗಿಸಿ ಕೊಡುವಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಗುವುದು' ಎಂದು ತಿಳಿಸಿದ್ದಾರೆ.

ಕೆಂಪೇಗೌಡ ಬಡಾವಣೆಯಲ್ಲಿ ಬಿಡಿಎ ಕಾರ್ಯಾಚರಣೆ

200 ಮಳಿಗೆಗಳ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಅಕ್ರಮವಾಗಿ ನಿರ್ಮಿಸಿದ್ದ 200 ಮಳಿಗೆಗಳನ್ನು ತೆರವುಗೊಳಿಸಿದೆ.

ಮೂರು ದಿನಗಳ ಕಾರ್ಯಾಚರಣೆಯಲ್ಲಿ ಪ್ರಾಧಿಕಾರವು 50 ಗ್ರಾನೈಟ್ ಕಾರ್ಖಾನೆ ಮತ್ತು ಮಾಚೋಹಳ್ಳಿ ಪ್ರದೇಶದಲ್ಲಿದ್ದ ಅನಧಿಕೃತ ನಿರ್ಮಾಣವನ್ನು ನೆಲಸಮಗೊಳಿಸಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಮಾಚೋಹಳ್ಳಿ ಗ್ರಾಮದ ಸರ್ವೆ ನಂ.134/1, 134/2, 135/1, 135/2, 136/1, 137/1 ಮತ್ತು 138/1 ರಲ್ಲಿನ ಪ್ರದೇಶವನ್ನು ಕೆಂಪೇಗೌಡ ಬಡಾವಣೆಯಲ್ಲಿ ಹಾದು ಹೋಗುತ್ತಿರುವ ಮುಖ್ಯ ಸಂಪರ್ಕ ರಸ್ತೆ (ಪಿಆರ್‌ಆರ್ -2) ಗಾಗಿ ಪ್ರಾಧಿಕಾರವು ಭೂ ಸ್ವಾಧೀನಪಡಿಸಿಕೊಂಡಿದೆ.

'ದಶಕದ ಹಿಂದೆ ಈ ಜಾಗವನ್ನು ಅತಿಕ್ರಮಿಸಿಕೊಂಡು ಹಲವರು ಕಾರ್ಖಾನೆ, ಮಳಿಗೆ ನಿರ್ಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ನೋಟಿಸ್ ನೀಡಿ ಸ್ಥಳಾಂತರಕ್ಕೆ ಅವಕಾಶ ನೀಡಲಾಗಿತ್ತು. ಆದರೂ ಮಾಲೀಕರು ಎಂದಿನಂತೆ ವ್ಯಾಪಾರ ಮುಂದುವರೆಸಿದ್ದರು. 15 ಜೆಸಿಬಿ ಹಾಗೂ ಇತರೆ ವಾಹನ ಬಳಸಿ ತೆರವು ಕಾರ್ಯಾಚರಣೆ ನಡೆಸಿ, 19 ಎಕರೆಯನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ಜೆಸಿಬಿ ಯಂತ್ರಗಳು ಮಳಿಗೆಗಳನ್ನು ನೆಲಸಮ ಮಾಡುತ್ತಿದ್ದಂತೆ ಲಕ್ಷಾಂತರ ರೂಪಾಯಿ ಬಂಡವಾಳ ಮಣ್ಣು ಪಾಲಾಗುತ್ತಿರುವುದನ್ನು ಕಂಡು ಹಲವರು ಕಣ್ಣೀರಿಟ್ಟರು. ಅನಧಿಕೃತ ನಿರ್ಮಾಣಗಳನ್ನು ತೆರವು ಮಾಡದಂತೆ ಮನವಿ ಮಾಡಿದರು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಅಕ್ರಮವಾಗಿ ನಿರ್ಮಿಸಿದ್ದ ಮಳಿಗೆಗಳನ್ನು ಬಿಡಿಎ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದರು

ಎಚ್‌ಎಂಟಿ ವಾರ್ಡ್: ರಾಜಕಾಲುವೆ ಒತ್ತುವರಿ ತೆರವು

ಬೆಂಗಳೂರು: ಆರ್.ಆರ್ ನಗರ ವಲಯದ ಎಚ್‌ಎಂಟಿ ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ನೀರುಗಾಲುವೆಯನ್ನು ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿದ್ದ ಶೆಡ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತೆರವುಗೊಳಿಸಿದರು.

ತುಮಕೂರು ಮುಖ್ಯರಸ್ತೆಯಿಂದ ಎಸ್‌ಆರ್‌ಎಸ್ ಸಿಗ್ನಲ್ ಕಡೆಗೆ ಹೋಗುವ ಪ್ರದೇಶದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಹೊಂದಿಕೊಂಡಿರುವ ಬೃಹತ್ ಮಳೆ ನೀರುಗಾಲುವೆಯ ಸುಮಾರು 100 ಮೀಟರ್ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು 35ರಿಂದ 45 ಶೆಡ್, ಒಂದು ಗ್ಯಾರೇಜನ್ನು ನಿರ್ಮಾಣ ಮಾಡಲಾಗಿತ್ತು.

ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿದ್ದ ಶೆಡ್‌ಗಳನ್ನು ತೆರವುಗೊಳಿಸುವ ಮುನ್ನ, ಸ್ಥಳದಲ್ಲಿ ವಾಸವಿದ್ದ ನಿವಾಸಿಗಳನ್ನು ಸ್ಥಳಾಂತರಿಸಲಾಯಿತು. ಎರಡು ಜೆಸಿಬಿ ಯಂತ್ರಗಳ ಮೂಲಕ ಶೆಡ್ ಹಾಗೂ ಗ್ಯಾರೇಜ್ ತೆರವುಗೊಳಿಸಲಾಯಿತು. ಮತ್ತೆ ಒತ್ತುವರಿ ಮಾಡದಂತೆ ಸ್ಥಳದಲ್ಲಿ ವಾಸವಿದ್ದ ನಿವಾಸಿಗಳಿಗೆ ಎಚ್ಚರಿಕೆ ನೀಡಲಾಯಿತು ಎಂದು ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಚೇರಿ ಸ್ಥಳಾಂತರ: ಬೊಮ್ಮನಹಳ್ಳಿ ವಲಯದ ನಗರ ಯೋಜನೆ ವಿಭಾಗದ ಸಹಾಯಕ ನಿರ್ದೇಶಕರ ಕಚೇರಿಯನ್ನು ಬಿಟಿಎಂ ಲೇಔಟ್ 4ನೇ ಹಂತ, 2ನೇ ಬ್ಲಾಕ್, ದೇವರಚಿಕ್ಕನಹಳ್ಳಿಯ ಆರ್‌ಟಿಒ ಕಚೇರಿ ಎದುರಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಚ್‌ಎಂಟಿ ವಾರ್ಡ್ ವ್ಯಾಪ್ತಿಯಲ್ಲಿ ರಾಜಕಾಲುವೆ ಮೇಲೆ ನಿರ್ಮಿಸಲಾಗಿದ್ದ ಶೆಡ್‌ಗಳನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ತೆರವುಗೊಳಿಸಿದರು

ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ

ಜಿಲ್ಲಾ ಆರೋಗ್ಯ ಮತ್ತು ಕು.ಕ. ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ

ಹಳೇ ಟಿ.ಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾ ನಗರ, ಬೆಂಗಳೂರು–38.

ಸಂಖ್ಯೆ : ಡಿ.ಹೆಚ್.ಎಸ್/ಬೆಂ.ನ.ಜಿ/ಎನ್.ಪಿ.ಎನ್.ಸಿ.ಡಿ/ಇ.ಒ.ಐ/01/2024–25 ದಿನಾಂಕ:20.01.2025

ಆಸಕ್ತಿ ವ್ಯಕ್ತಪಡಿಸುವಿಕೆ (Expression of Interest)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಮೇಲ್ದರ್ಜೆ ಆಸ್ಪತ್ರೆಗಳಾದ ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ ಮತ್ತು ಕೆ.ಸಿ.ಜನರಲ್ ಆಸ್ಪತ್ರೆಯ Oncology ಕ್ಯಾನ್ಸರ್ ರೋಗಿಗಳಿಗೆ SAST Empanelment ನೋಂದಣಿ ಹೊಂದಿರುವ ಆಸ್ಪತ್ರೆಗಳ ಮೂಲಕ ಚಿಕಿತ್ಸೆ ಒದಗಿಸಲು ಮತ್ತು ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ Oncology ಕ್ಯಾನ್ಸರ್ ರೋಗಿಗಳಿಗೆ Day Care Chemotherapy Center ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲು SAST Empanelment ನೋಂದಣಿ ಹೊಂದಿರುವ ಖಾಸಗಿ ಆಸ್ಪತ್ರೆಗಳೊಂದಿಗೆ MOU ಮಾಡಿಕೊಂಡು ಸೇವೆಗಳನ್ನು ಪಡೆಯುವ ಸಲುವಾಗಿ ನಿಯಮಾನುಸಾರ ಬೆಂಗಳೂರು ನಗರ ಜಿಲ್ಲೆಯಿಂದ Expression of Interest ಪ್ರಕ್ರಿಯೆಯನ್ನು ಕೆಟಿಪಿಪಿ ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದ್ದು, https://kppp.karnataka.gov.in ಇ–ಪೋರ್ಟಲ್ ಮುಖಾಂತರ ಆಸಕ್ತಿಯುಳ್ಳ ಸಂಸ್ಥೆ/ಆಸ್ಪತ್ರೆಯವರು **ದಿನಾಂಕ:20.01.2025 ರಿಂದ ದಿನಾಂಕ:05.02.2025ರಂದು ಸಂಜೆ 05:30 ಗಂಟೆಯವರೆಗೂ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಹಳೇ ಟಿ.ಬಿ ಆಸ್ಪತ್ರೆ ಆವರಣ, ಇಂದಿರಾನಗರ, ಬೆಂಗಳೂರು– 560038 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾಪ್ರ/ಜಿಎ/4446/2024–25

ಭಾರತ ಸರ್ಕಾರ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ

ಚೇರ್‌ಪರ್ಸನ್, ನ್ಯಾಷನಲ್ ಬಯೋಡೈವರ್ಸಿಟಿ ಅಥಾರಿಟಿ ಹುದ್ದೆ ಭರ್ತಿಗಾಗಿ ಜಾಹೀರಾತು

ಜಾಹೀರಾತು ಸಂ. ಜೆ–22018/12/2003–ಸಿಎಸ್‌ಸಿ(ಬಿಸಿ)ವಾಲ್ಯೂ.III

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಚೇರ್‌ಪರ್ಸನ್, ನ್ಯಾಷನಲ್ ಬಯೋಡೈವರ್ಸಿಟಿ ಅಥಾರಿಟಿ (ರಾಷ್ಟ್ರೀಯ ಜೀವ [illegible]

[illegible]

ಅಥವಾ ಒಂದಕ್ಕಿಂತ ಹೆಚ್ಚಿನ ಅಗತ್ಯತೆಗಳಲ್ಲಿ ಸಡಿಲಿಕೆ ನೀಡಬಹುದಾಗಿರುತ್ತದೆ.

ದಿನಾಂಕ 28.02.2025 (ಮಧ್ಯರಾತ್ರಿ) ರೊಳಗೆ ಸಚಿವಾಲಯದ www.moef.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಲಹೆಗಾರರು/ವಿಜ್ಞಾನಿ 'ಜಿ'
ಸಿಎಸ್–3 (ಬಯೋಡೈವರ್ಸಿಟಿ) ಡಿವಿಜನ್
ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ
ಇಂದಿರಾ ಪರ್ಯಾವರಣ ಭವನ, ಜೋರ್ ಬಾಘ್ ರಸ್ತೆ, ಅಲಿಗಂಜ್, ನವದೆಹಲಿ–110003

CBC 13101/11/0020/2425

ನೈಋತ್ಯ ರೈಲ್ವೆ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರು ಸೂಚನೆ ಸಂ.: **HE-18-2024-25**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಪಿಎಫ್ ಸಂ. 2/3 ಮತ್ತು ಪಿಎಫ್ ಸಂ. 4/5 ರಲ್ಲಿ 02 ನಂ. ಎಸ್ಕಲೇಟರುಗಳಿಗೆ 05 ವರ್ಷಗಳ ಅವಧಿಗೆ ಸಮಗ್ರ ವಾರ್ಷಿಕ ನಿರ್ವಹಣಾ ಒಪ್ಪಂದ.	ರೂ. 31,91,052/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12.02.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಸಾಮಾನ್ಯ/ಹುಬ್ಬಳ್ಳಿ

PUB/715/AAF/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: **38 UBL 2024-25**
ದಿನಾಂಕ: 07.01.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಸಹಾಯಕ ವಿಭಾಗೀಯ ಇಂಜಿನಿಯರ್ & ದೂರಸಂಪರ್ಕ ಇಂಜಿನಿಯರ್ / ಪೂರ್ವ / ಹುಬ್ಬಳ್ಳಿ ಮತ್ತು ಸಹಾಯಕ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ / ಪಶ್ಚಿಮ / ಹುಬ್ಬಳ್ಳಿ ವಿಭಾಗಗಳಲ್ಲಿ ಉಪ ಕಾಮಗಾರಿ: 1 ರಿಂದ ಉಪ ಕಾಮಗಾರಿ: 7 ರ ವರೆಗೆ ಇಂಜಿನಿಯರಿಂಗ್ ಕೆಲಸಗಳಿಗೆ ಸಂಬಂದಿಸಿದಂತೆ ವಿವಿಧ ಎಸ್&ಟಿ ಕಾಮಗಾರಿಗಳು.	ರೂ. 21,97,817.62

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.02.2025, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಸಹಾಯಕ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಪಶ್ಚಿಮ/ಹುಬ್ಬಳ್ಳಿ

PUB/718/AAF/PRB/SWR/2024-25

South Western Railway - SWR | SWRRLY | SWRRLY

IN THE COURT OF THE 5th ADDL DISTRICT AND SESSIONS JUDGE AT TIPTUR.
M.V.C. NO: 1082/2023.

PETITIONER: T.C. Manjunatha swamy Shastry, S/o B.chanappa Shastry, aged about 64 years, Residing at no 3. BCS Garden House. Near Edenahalli gate, B.H.Road Tiptur Town **-V/s-**

RESPONDENTS : T.S. Manoj Kumar & others, **3. Sri. N.Basavaraju,** S/o Nanjappa, Major, R/o Papaiah Street, Oddamavalli, Bangalore-560004. (3 Owner of Santro Car) Bearing Reg.No.K.A-01-MB-2927).

NOTICE

WHEREAS, the petitioner has filed the above petition for Award of compensation amount against the Respondents. But after issue court notices the respondent .no.3 is always avoiding the court notices and intentionally for the purpose of avoid the court notices in order to dragon the proceedings and he is personally well aware of the court proceedings initiated against him by the petitioner.

TAKE NOTICE, that the respondent. no.3 may appear this Hon'ble court in person or through by a pleader on **24-02-2025.** the file of 5th Addl District and Session Judge. at Tiptur at 11.00 am to answer all material questions in the petition

Given under my hand and seal of the court on 18-01-2025.

By order of the court, Sheristedar, 5th Addl District & Sessions Judge at Tiptur.

H.LAKSHMAN & ASSOCIATES, Advocates Tiptur.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ನೆಲಮಹಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಟ್ಟಡ, ಕೋರ್ಟ್ ಸರ್ಕಲ್ ಹತ್ತಿರ, ಕೋಲಾರ–563 101 ದೂರವಾಣಿ ಸಂಖ್ಯೆ:08152–200010
ಇ–ಮೇಲ್: ddwokolar@gmail.com

ಸಂಖ್ಯೆ/ಜಿ.ಅಂ.ಕ.ಸಾ.ಸ/ಟೆಂಡರ್/2024–25 ದಿನಾಂಕ: 18.01.2025

ಟೆಂಡರ್ ಪ್ರಕಟಣೆ

2024–25 ನೇ ಸಾಲಿನ ವಿಕಲಚೇತನರ ಸಾಧನ ಸಲಕರಣೆ ಯೋಜನೆಯಡಿ ಅರ್ಹ ವಿಕಲಚೇತನ ಫಲಾನುಭವಿಗಳಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ಖರೀದಿಸಿ ಉಚಿತವಾಗಿ ವಿತರಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ ರವರು ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಿದ್ದು ಸಾಧನ ಸಲಕರಣೆಗಳನ್ನು ಪೂರೈಸಲು ನೋಂದಾಯಿತಗೊಂಡ ಆಸಕ್ತ ಸಂಸ್ಥೆ/ಏಜೆನ್ಸಿಯವರು ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದ್ದು ಟೆಂಡರ್ ವೇಳಾ ಪಟ್ಟಿ ಈ ಕೆಳಕಂಡಂತಿರುತ್ತದೆ. (1) ಟೆಂಡರ್ ಸಲ್ಲಿಸಲು ಪ್ರಾರಂಭದ **ದಿನಾಂಕ: 18.01.2025.** (2) ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 05.02.2025 ಸಂಜೆ: 05:00 ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.02.2025 ಸಂಜೆ 4:00 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07.02.2025 ಸಂಜೆ 4:00 ಗಂಟೆಗೆ.** (5) ಸಲ್ಲಿಸಬೇಕಾದ ಇ.ಎಂ.ಡಿ **ಮೊತ್ತ: ರೂ.13,000/–.** (6) ಟೆಂಡರ್ ಅಂದಾಜು **ಮೊತ್ತ: ರೂ.2,55,000/–.**

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ, ಕೋಲಾರ ರವರನ್ನು ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ: 08152–200010 ಸಂಪರ್ಕಿಸಬಹುದಾಗಿದೆ.

ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ
ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:404/ಕೆಎಸ್‌ಎಂಸಿಎ/2024–25

'ಡಿಜಿಟಲ್ ಮಣ್ಣಿನ ನಕ್ಷೆ' ಕಾರ್ಯಾಗಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಮತ್ತು ಭೂ ಬಳಕೆ ಯೋಜನೆ ವತಿಯಿಂದ 'ಡಿಜಿಟಲ್ ಮಣ್ಣಿನ ನಕ್ಷೆ' ಕುರಿತು ಅಂತರರಾಷ್ಟ್ರೀಯ ಕಾರ್ಯಾಗಾರವನ್ನು ಜ.21ರಿಂದ 24ರವರೆಗೆ ಜಾಲಹಳ್ಳಿಯ ಗೋಕುಲಂ ಗ್ರ್ಯಾಂಡ್ ಹೋಟೆಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಮಣ್ಣಿನ ಸಮೀಕ್ಷೆ ಮತ್ತು ಭೂ ಬಳಕೆ ಯೋಜನೆಯ ನಿರ್ದೇಶಕ ಎನ್.ಜಿ.ಪಾಟೀಲ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಡಿಜಿಟಲ್ ಮಣ್ಣಿನ ನಕ್ಷೆ ತಂತ್ರಜ್ಞಾನವು ವಿಶಾಲವಾದ ಪ್ರದೇಶಗಳಲ್ಲಿ ಹೆಚ್ಚು ನಿಖರತೆಯಿಂದ ಮಣ್ಣಿನ ಗುಣಲಕ್ಷಣಗಳನ್ನು ಪಟ್ಟಿ ಮಾಡುತ್ತದೆ' ಎಂದು ತಿಳಿಸಿದರು.

'ಇದು ಉಪಗ್ರಹ ಬಿಂಬಿತ ತಂತ್ರಜ್ಞಾನ, ಸುಧಾರಿತ ದತ್ತಾಂಶ ಆಧಾರಿತವಾಗಿ ಕೆಲಸ ನಿರ್ವಹಿಸುವುದರಿಂದ ಸುಸ್ಥಿರ ಕೃಷಿಗೆ ನೆರವಾಗುತ್ತದೆ. ಕಾರ್ಯಾಗಾರದಲ್ಲಿ ಈ ವಿಷಯದ ಕುರಿತಾಗಿ ಸುದೀರ್ಘ ಚರ್ಚೆ, ಮಾಹಿತಿ ಹಂಚಿಕೆ ನಡೆಯಲಿದೆ' ಎಂದು ಹೇಳಿದರು.

ಐಎನ್‌ಎಂ ವ್ಯವಸ್ಥಾಪಕ ನಿರ್ದೇಶಕ ಸುರೇಶ್ ಕುಮಾರ್, ಫ್ರಾನ್ಸ್ ಮಣ್ಣು ತಜ್ಞರಾದ ಲಾರಾ ಸಹಿತ 38 ಅಂತರರಾಷ್ಟ್ರೀಯ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ ಎಂದರು.

ನಿಧನ ವಾರ್ತೆ

ಎಸ್.ಆರ್. ಸತ್ಯನಾರಾಯಣ

ಬೆಂಗಳೂರು: ಜಲಮಂಡಳಿಯ ನಿವೃತ್ತ ಮುಖ್ಯ ಎಂಜಿನಿಯರ್ ಎಸ್.ಆರ್. ಸತ್ಯನಾರಾಯಣ (92) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಎಸ್.ಆರ್. ಸತ್ಯನಾರಾಯಣ

ಮೃತರಿಗೆ ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ ಚಾಮರಾಜಪೇಟೆಯ ಟಿ.ಆರ್. ಮಿಲ್‌ನಲ್ಲಿ ಮಂಗಳವಾರ (ಜ.21) ಬೆಳಿಗ್ಗೆ 10ಕ್ಕೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಹಣ ವಾಪಸ್‌ಗೆ ಅರ್ಜಿ: ಫೆ.1ಕ್ಕೆ ಮುಂದೂಡಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ವೇಳೆ ಜಪ್ತಿ ಮಾಡಿರುವ ತಮ್ಮ ಹಣವನ್ನು ವಾಪಸ್ ನೀಡಲು ಪೊಲೀಸರಿಗೆ ಸೂಚಿಸುವಂತೆ ಕೋರಿ ಆರೋಪಿಗಳಾದ ನಟ ದರ್ಶನ್ ಹಾಗೂ ಪ್ರದೂಷ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನಗರದ 57ನೇ ಸಿಸಿಎಚ್ ನ್ಯಾಯಾಲಯವು ಫೆ.1ಕ್ಕೆ ಮುಂದೂಡಿತು.


ದರ್ಶನ್

ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು, ದರ್ಶನ್, ಅವರ ಪತ್ನಿ ವಿಜಯಲಕ್ಷ್ಮಿ ಹಾಗೂ ಮತ್ತೊಬ್ಬ ಆರೋಪಿ ಪ್ರದೂಷ್ ಮನೆಯಲ್ಲಿ ಹಣ ಜಪ್ತಿ ಮಾಡಿಕೊಂಡಿದ್ದರು. ಸಾಕ್ಷ್ಯನಾಶ ಪಡಿಸಲು ಆರೋಪಿಗಳು ₹37 ಲಕ್ಷ ಸಂಗ್ರಹ ಮಾಡಿಕೊಂಡಿದ್ದರು ಎನ್ನಲಾಗಿತ್ತು. ಇದಾದ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೂ ಪೊಲೀಸರು ಪತ್ರ ಬರೆದು ತನಿಖೆ ನಡೆಸುವಂತೆ ಕೋರಿದ್ದರು. ದರ್ಶನ್ ಅವರು ಬಳ್ಳಾರಿ ಜೈಲಿನಲ್ಲಿದ್ದಾಗ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದರ್ಶನ್ ಅವರನ್ನು ವಿಚಾರಣೆ ನಡೆಸಿದ್ದರು.

ಕೇಂದ್ರ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ವಸತಿ ಸಂಘ

(ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ನೇತೃತ್ವದ ಅಡಿಯಲ್ಲಿನ ಭಾರತ ಸರ್ಕಾರದ ಒಂದು ಸ್ವಾಯುತ್ತ ಅಂಗ)

9ನೇ ಮಹಡಿ, 'ಬಿ' ವಿಂಗ್, ಜನಪಥ ಭವನ, ಜನಪಥ, ನವದೆಹಲಿ–110 001.
ಫೋನ್: 23717249/23355408/23322192,
ಇ–ಮೇಲ್: cgewho@nic.in, ವೆಬ್‌ಸೈಟ್: www.cgewho.in

ಭುವನೇಶ್ವರದಲ್ಲಿನ ಟರ್ನ್‌ಕೀ ಹೌಸಿಂಗ್ ಪ್ರಾಜೆಕ್ಟ್‌ಗೆ ಪೂರ್ವಾರ್ಹತೆ ಕಂ ಆಸಕ್ತಿ ವ್ಯಕ್ತಪಡಿಸುವಿಕೆಗೆ ಮನವಿ ಆಹ್ವಾನ

ಸಿಜಿಇಡಬ್ಲ್ಯುಎಚ್‌ಒ ಇವರು, ಸುಮಾರು 250 ಡಿಯುಎಸ್‌'ನ ಸಂಯುಕ್ತ ಹೌಸಿಂಗ್ ಯೋಜನೆಯ ಅಭಿವೃದ್ಧಿಗಾಗಿ ಭುವನೇಶ್ವರದಲ್ಲಿ ಸಂಪೂರ್ಣ ಎಲ್ಲಾ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಹೊಂದಿರುವ, 5 ರಿಂದ 6 ಎಕರೆ ಜಮೀನಿಗಾಗಿ, ನಿರ್ಮಾಣ ಸಂಸ್ಥೆಗಳಿಂದ ಆಫರ್‌ಗಳನ್ನು ಆಹ್ವಾನಿಸಿದ್ದಾರೆ. ಸದರಿ ಸಂಸ್ಥೆಗೆ, ಜಮೀನುನ್ನು ಸಿಜಿಇಡಬ್ಲ್ಯುಎಚ್‌ಒ ಪರವಾಗಿ ನೋಂದಣಿ ಮಾಡಿಸುವ, ವರ್ಗಾವಣೆ ಮಾಡಿಸುವ, ಸದರಿ ಹೌಸಿಂಗ್ ಯೋಜನೆಯನ್ನು ಅಗತ್ಯ ಎಲ್ಲಾ ಸೇವಾ ಮತ್ತು ಸೌಕರ್ಯಗಳ ಸಮೇತದ ಯೋಜನೆ ಮತ್ತು ನಿರ್ಮಾಣಕ್ಕೆ ಅನುಮೋದನೆ ಪಡೆಯುವ ಹೊಣೆಗಾರಿಕೆಯಿರುತ್ತದೆ. ಸದರಿ ಜಮೀನು ಸಿ ವಿ ರಾಮನ್ ಕಾಲೇಜು, ಭುವನೇಶ್ವರದಿಂದ 10 ಕಿ.ಮೀ. ಸುತ್ತಳತೆಯಲ್ಲಿ ಇರತಕ್ಕದ್ದು. ನಿರ್ಮಾಣಕ್ಕೆ ಉದ್ದೇಶಿಸಲಾಗಿರುವ ಹೌಸಿಂಗ್ ಯೋಜನೆಯಲ್ಲಿ ಆದ್ಯತೆಯ ಮೇರೆಗೆ (ಲಿಫ್ಟ್ ಹೊಂದಿರುವ 3 ಬಿಎಚ್‌ಕೆ & 4 ಬಿಎಚ್‌ಕೆ ಮಾದರಿಯ ವಸತಿ ಘಟಕಗಳು, ಅಂದಾಜು 100–120 ಚ.ಮೀ. ಕಾರ್ಪೆಟ್ ವಿಸ್ತೀರ್ಣವುಳ್ಳ (ಅಥವಾ ರೇರಾ ಉಲ್ಲೇಖದಂತೆಗಿನ). ಶಾಸನಬದ್ಧ ಪ್ರಾಧಿಕಾರಗಳ ನಿಯಮದ ಮೇರೆಗೆ ಸದರಿ ಯೋಜನೆಯಲ್ಲಿ ಕಮ್ಯುನಿಟಿ ಸೆಂಟರ್, ಈಜುಕೊಳ, ಬ್ಯಾಡ್ಮಿಂಟನ್ ಮೈದಾನ ಇರತಕ್ಕದ್ದು. ಪ್ರಸ್ತಾವಣೆ ಸಲ್ಲಿಸುವ ಸಮಯದಲ್ಲಿ, ಸಂಸ್ಥೆಯು ಸ್ಥಳೀಯ ಬೈಲಾ ಮತ್ತು ರಾಜ್ಯದ ರೇರಾ ಮಾರ್ಗಸೂಚಿಗಳ ಪ್ರಕಾರ ಎಲ್ಲಾ ಶಾಸನಬದ್ಧ ಅವಶ್ಯಕತೆಗಳನ್ನು ಕಟ್ಟುನಿಟ್ಟಾಗಿ ಮತ್ತು ಕಡ್ಡಾಯವಾಗಿ ಅನುಸರಿಸಲಾಗುತ್ತದೆ ಖಾತರಿಪಡಿಸಬೇಕಾಗುತ್ತದೆ. ನಿರ್ಮಾಣ ಸಂಸ್ಥೆಯು ಒಂದು ಅಥವಾ ಒಂದಕ್ಕಿಂತ ಹೆಚ್ಚು ಸೂಕ್ತ ಜಮೀನನ್ನು [illegible]

2) [illegible]

3) [illegible] www.tenderwizard.com/CGEWHO ಅಥವಾ www.cgewho.in [illegible] (eprocure.gov.in) [illegible]

4) [illegible]

5) [illegible]

ಮುಖ್ಯ ಕಾರ್ಯಕಾರಿ ಅಧಿಕಾರಿ
ಸಿಜಿಇಡಬ್ಲ್ಯುಎಚ್‌ಒ

CBC 20105/12/0015/2425

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

ಅಪೊಲೋ ಫಾರ್ಮಸಿ ವತಿಯಿಂದ
ಬೃಹತ್ ಉದ್ಯೋಗ ಮೇಳ
ಫಾರ್ಮಸಿಸ್ಟ್ (ಡಿ/ಬಿ. ಫಾರ್ಮಸಿ) ಮತ್ತು ಫಾರ್ಮಸಿ ಅಸಿಸ್ಟೆಂಟ್‌ಗಳಿಗೆ ಉದ್ಯೋಗ ಅವಕಾಶ.
ದಿನಾಂಕ: 24 ನೇ ಜನವರಿ 25
RAMEE STRAND INN, Hosur Main Road, Singasandra, B'lore-68. &
ದಿನಾಂಕ: 25 ನೇ ಜನವರಿ 25
SJES Education Institution Old Madras Road, B'lore-49.
ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ & ಆನ್‌ಲೈನ್‌ನಲ್ಲಿ ಅಪ್ಲೆ ಮಾಡಿ.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, **Feroz Khan S @ Feroz Khan Sultan,** residing at No. E 426/396/2, 17th Cross, C Block, Silk Factory Road, Rashadnagar, Bengaluru-560045, have changed my name to **FEROZ KHAN** Vide affadiavit dated 20.01.2025 before Notary K.N. Ramadevi, Bengaluru

CHANGE OF NAME
I, **VENKATARAVANAPPA MUNICHOWDAPPA,** S/o Munichowdappa Residing at Harapanayakanahalli, H.Gollahalli, Mulbagal, Kolar, Karnataka- 563131 has changed my name from Venkataravanappa Munichowdappa to **VENKATARAVANAPPA MUNICHOWDAPPA** vide affidavit dated 15.01.2025 before Notary P.M. Sadhashivaiah, Mulbagal Taluk, Kolar Dist.

I, SHRINIVAS KAMALAR residing at Bengaluru-61, have changed my name as SHRINIVAS KAMMALAR PONNUSWAMY vide affidavit dated 20/01/2025 before Notary K.S. Bammappanavar, Bengaluru

I, LAKSHMI NARAYAN YELLAPPA have changed my name to LAKSHMI NARAYANA BILEKALLI YELLAPPA vide affidavit dated: 20/1/2025 Before Notary Manohar Jeerige Bangalore.

CHANGE OF NAME
I, **ARCHANA SHIVARAMA REDDY** W/o Ravikumar S, R/at No.622, Fern Embassy Pristine Apartments, Marathahalli, Sarjapura Ring Road, Iblur, Bellandur, Bengaluru-560103, have changed my name to **ARCHANA REDDY** vide affidavit dated:20-01-2025, before notary Sumithra N, Bengaluru. Henceforth I shall be called as **ARCHANA REDDY** only

CHANGE OF NAME
I, **Kripa Shanbhag** W/o Mattar Girish Kini, residing at No. 103, Chamundi Garnet, 17th Cross, 15th Main, J.P. Nagar 5th Phase, Bengaluru-560078, have changed my name to **KRIPA GIRISH KINI** Vide affadiavit dated 18.01.2025 before Notary D.K. Rameshappa, Bengaluru

CHANGE OF NAME
I, **VIKRAM RAMASWAMY VISWANATHAN,** residing at Flat No. 303, Lifestyle Lauret, 80 Feet Road, HBR Layout, 1st Stage, 2nd Block, Bengaluru - 560043, have changed my name to **VIKRAM RAMASWAMY** vide affidavit dated 13-01-2025, before notary S.R. Nanjunda Swamy, Bengaluru. Henceforth I shall be called as **VIKRAM RAMASWAMY** only

CHANGE OF NAME
I, **SHAKUNTALA NAGARAJAN** W/o Nagarajan Srinivasachari R/a #51, 4th Cross, 1st Main, S Annaiah Reddy Layout, Dodda Banaswadi, Bangalore-560043 have changed my Name to **SAKUNTALA NAGARAJAN** vide affidavit dated: 18.1.2025 before Notary Y.R.Chandrasekar, Bangalore

I, MAHANTESHI. B, residing at Bengaluru Rural, have changed my name as MAHANTESH BUDIHAL vide affidavit dated 20/01/2025 before Notary K.S. Bammappanavar, Bengaluru

I, JOYCE RANI JOSEPH, residing at Bengaluru-84, have changed my name as JOYCE RANI, vide affidavit dated 20/01/2025 before Notary K.S. Bammappanavar, Bengaluru

CHANGE OF NAME
I, **MOHAMMED TAHA MATEEN,** residing at no. 105, 17th C Main, 5th Block, Koramangala, Bengaluru-560095, have changed our minor daughter's name from **RUQAYYA MATEEN** to **RUQAYYA QAMAR MATEEN** vide affidavit dated 20.01.2025, before notary Harisha G, Bengaluru. Henceforth she shall be called as **RUQAYYA QAMAR MATEEN** only

I, SURYA ANNIE MARIA, D/o Kutty Parambil Krishnamurthy, W/o Roychan Puthiyadom, I have changed my name SURYA KUMARI K henceforth I shall be known and called as SURYA KUMARI K for all purposes, vide affidavit dated 20/01/2025 sworn before Advocate and Notary ARAVIND PATIL G.G at Bangalore.

I, JAFRY ARMAAN PREM S/o SYED MOHAMMAD ZAKARIA ALIAS J.J PREM residing at Alipur, Gauribidanur taluk, Chikkaballapur district, Karnataka have changed my name to ARMAAN PREM ZAKARIA vide affidavit dated 20.01.2025 before notary MUNISWAMI REDDY, Gauribidanur.

I, NAVYA BP Deb, D/o Prabhudevaa RS, R/o Varthur, Bengaluru, Changed my Name as 'Navya Prabhu' vide affidavit dated 18-01-2025.

I, SMRUTHI C.B. R/o.#7, Sukhi Nivas KHB Colony, 5th Block 1st A Main Koramangala Layout Bangalore 560095 have changed my Minor Son's Name from SUMERU SUMANTH GOWDA alias CHAKRAPANI to SUMERU SMRUTHI (DOB:11.9.2014) vide affidavit dated:20.1.2025 before Notary Sumithra.N. Bangalore

I, NAVEEN SINGH KHATI, residing at Bengaluru-37, have changed my name as NAVEEN SINGH, vide affidavit dated 20/01/2025 before Notary K.S. Bammappanavar, Bengaluru

DH Classifieds | ಪ್ರಜಾವಾಣಿ
More value, more impact
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact:
9901641752
9845114560

ಕಾನೂನು, ಮಾಪನ ಇಲಾಖೆಗೆ ಲೋಕಾಯುಕ್ತ ತಂಡ ಭೇಟಿ

ಸಿಬ್ಬಂದಿ ಗೈರು, ಕೊಠಡಿಗೆ ಬೀಗ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರಗಳ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಬಂದ ಕಾರಣ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ನೇತೃತ್ವದ ತಂಡ ಸೋಮವಾರ ಕಾನೂನು ಹಾಗೂ ಮಾಪನ ಇಲಾಖೆಯ ಪ್ರಧಾನ ಕಚೇರಿ ಸೇರಿದಂತೆ ವಿವಿಧ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ಪರಿಶೀಲನೆ ನಡೆಸಿತು.

ಉಪ ಲೋಕಾಯುಕ್ತರಾದ ಕೆ.ಎನ್. ಫಣೀಂದ್ರ ಹಾಗೂ ಬಿ. ವೀರಪ್ಪ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ 40 ಜನರ ತಂಡವು, ಅಲಿ ಅಸ್ಕರ್ ರಸ್ತೆಯಲ್ಲಿರುವ ಮಾಪನ ಇಲಾಖೆಯ ಪ್ರಧಾನ ಕಚೇರಿ ಹೊಸಕೋಟೆ, ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿಯಲ್ಲಿ ಕಚೇರಿಗಳ ಮೇಲೆ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿತು.

ಕಚೇರಿಯಲ್ಲಿರುವ ಹಾಜರಾತಿ ಪುಸ್ತಕ ಸೇರಿದಂತೆ ವಿವಿಧ ರಿಜಿಸ್ಟರ್‌ಗಳನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು. ಹಾಜರಾತಿ ಪುಸ್ತಕದಲ್ಲಿ ಮಂಗಳವಾರ ಮತ್ತು ಬುಧವಾರದ ಸಹಿಯನ್ನು ಮೊದಲೇ ಮಾಡಿರುವುದನ್ನು ಕಂಡು ಕಿಡಿಕಾರಿದರು.

‘ಜಪ್ತಿ ಮಾಡಿದ ವಸ್ತುಗಳನ್ನು ಇಟ್ಟಿರುವ ಕೊಠಡಿಗಳಿಗೆ ಯಾಕೆ ಬೀಗ ಹಾಕಿದ್ದೀರಾ? ಕಚೇರಿ ಕೆಲಸದ ಮೇಲೆ ಹೊರಗೆ ಹೋಗಿದ್ದರೆ ಕಡತದಲ್ಲಿ ನಮೂದು ಮಾಡಬೇಕಿತ್ತು. ಬೀಗ ಹಾಕಿ ಹೊರಗೆ ಹೋಗುವ ಅಧಿಕಾರಿಗಳಿಗೆ ಅನುಮತಿ ನೀಡಿದ್ದು ಯಾರು?’ ಎಂದು ಅಧಿಕಾರಿಗಳಿಗೆ ಉಪಲೋಕಾಯುಕ್ತರು ತರಾಟೆಗೆ ತೆಗೆದುಕೊಂಡರು.

ಕಚೇರಿ ಬಯೋಮೆಟ್ರಿಕ್ ಹಾಗೂ ಸಿ.ಸಿ.ಟಿ.ವಿ. ಕ್ಯಾಮೆರಾ ಪರಿಶೀಲನೆ ವೇಳೆ ಅಧಿಕಾರಿ ಹಾಗೂ ಸಿಬ್ಬಂದಿ ಸರಿಯಾಗಿ ಕಚೇರಿಗೆ ಬಾರದಿರುವುದು ಕಂಡು ಬಂತು.

ಲೋಕಾಯುಕ್ತ ಬಿ.ಎಸ್. ಪಾಟೀಲ್ ಮಾತನಾಡಿ, ‘ಭ್ರಷ್ಟಾಚಾರ ಹಾಗೂ ಸ್ವಜನಪಾಕ್ಷಪಾತ ಧೋರಣೆಗಳ ಬಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಲೋಕಾಯುಕ್ತಕ್ಕೆ ದೂರುಗಳು ಬಂದಿದ್ದವು. ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದೇವೆ’ ಎಂದು ಹೇಳಿದರು.

‘ಕಚೇರಿಯ ಮೂರು ಮಹಡಿ ಬಾಗಿಲುಗಳಿಗೆ ಬೀಗ ಹಾಕಲಾಗಿತ್ತು. ಸ್ಥಳದಲ್ಲಿ ಒಬ್ಬ ಅಧಿಕಾರಿಯೂ ಇರಲಿಲ್ಲ. ಕಾರಣವಿಲ್ಲದೆ ಅಧಿಕಾರಿಗಳು ಕಚೇರಿಯಿಂದ ಹೊರಹೋಗಿದ್ದಾರೆ. ಹಣ ವರ್ಗಾವಣೆ ಹಾಗೂ ಕಚೇರಿಯಲ್ಲಿರುವ ಹಣದ ಬಗ್ಗೆ ಸೂಕ್ತ ಸಮಜಾಯಿಷಿ ನೀಡಿಲ್ಲ. ಕೆಲವರು ಮೊಬೈಲ್‌ನಲ್ಲಿ ₹1 ಲಕ್ಷದವರೆಗೂ ಹಣ ವರ್ಗಾವಣೆ ಮಾಡಿದ್ದು, ವಿವರ ನೀಡುವಂತೆ ಕೇಳಿದ್ದೇನೆ. ಹಾಜರಾತಿ ಪುಸ್ತಕದಲ್ಲಿ ಮಂಗಳವಾರ ಮತ್ತು ಬುಧವಾರ ಸಹಿಯನ್ನು ಮೊದಲೇ ಹಾಕಿದ್ದಾರೆ. ಸಂಗ್ರಹಿಸಬೇಕಿದ್ದ ಹಣವನ್ನು ಮುಂಗಡವಾಗಿ ರಿಜಿಸ್ಟರ್‌ನಲ್ಲಿ ಬರೆದಿರುವುದು ಕಂಡುಬಂದಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

₹ 3 ಲಕ್ಷಕ್ಕೂ ಅಧಿಕ ಹಣ ವರ್ಗಾವಣೆ

ಕಚೇರಿಯಲ್ಲಿ ಮಹಿಳಾ ಸಿಬ್ಬಂದಿಯೊಬ್ಬರ ಮೊಬೈಲ್ ಫೋನ್ ಪಡೆದು ಫೋನ್ ಪೇ ಪರಿಶೀಲಿಸಿದ ವೇಳೆ ಮೂರು ತಿಂಗಳಲ್ಲಿ ₹3 ಲಕ್ಷಕ್ಕೂ ಹೆಚ್ಚು ಹಣ ವರ್ಗಾವಣೆ ಆಗಿರುವುದು ಕಂಡು ಬಂತು.

ಈ ಬಗ್ಗೆ ಉಪ ಲೋಕಾಯುಕ್ತರು ಪ್ರಶ್ನಿಸಿದಾಗ, ‘ಬೀದರ್‌ನಲ್ಲಿರುವ ಮನೆ ಮಾರಾಟದಿಂದ ಬಂದ ಹಣ. ಪತಿಯ ಬದಲು ನನಗೆ ವರ್ಗಾವಣೆಯಾಗಿದೆ’ ಎಂದು ಸ್ಪಷ್ಟನೆ ನೀಡಿದರು.

‘ಕಚೇರಿಯಲ್ಲಿ ಕೆಲಸದ ವೇಳೆ ಹಣ ವರ್ಗಾವಣೆ ಬಗ್ಗೆ ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡಿದ್ದೀರಾ’ ಎಂಬ ಪ್ರಶ್ನೆಗೆ ಮಹಿಳೆ ಉತ್ತರಿಸಲಿಲ್ಲ.

‘ಸಾಮರಸ್ಯದಿಂದ ಬಲಿಷ್ಠ ರಾಷ್ಟ್ರ ನಿರ್ಮಾಣ’

ಸೌಹಾರ್ದ ಔತಣಕೂಟದಲ್ಲಿ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಮಾಜ ನಿರ್ಮಾಣಕ್ಕೆ ಸಾಮರಸ್ಯ ಅಗತ್ಯ. ಇದರಿಂದ ಬಲಿಷ್ಠ ರಾಷ್ಟ್ರದ ನಿರ್ಮಾಣ ಮಾಡಲು ಸಾಧ್ಯ ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಬಿಜೆಪಿಯ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಅವರು ಈಚೆಗೆ ಹಮ್ಮಿಕೊಂಡಿದ್ದ ಎರಡನೇ ವರ್ಷದ ಸಾಮರಸ್ಯ ಸೌಹಾರ್ದ ಔತಣಕೂಟದಲ್ಲಿ ಮಾತನಾಡಿದರು.

ಸಾಮರಸ್ಯ ಬೆಳೆಸುವ ನಿಟ್ಟಿನಲ್ಲಿ ಲಹರ್ ಸಿಂಗ್ ಅವರ ಪ್ರಯತ್ನ ಶ್ಲಾಘನೀಯ. ಶಾಂತಿಯುತ ಸಮಾಜವೇ ಅಭಿವೃದ್ಧಿಯ ನಿಜವಾದ ಸಂಕೇತ. ಜನರಲ್ಲಿ ಏಕತೆ ಮೂಡಿಸುವುದು ಪ್ರತಿಯೊಬ್ಬ ಜನಪ್ರತಿನಿಧಿಯ ಜವಾಬ್ದಾರಿ ಆಗಿದೆ. ಧರ್ಮ ಅಥವಾ ಸಂಸ್ಕೃತಿಯ ಹೆಸರಿನಲ್ಲಿ ಅಸಮಾನತೆ ಸೃಷ್ಟಿಸುವುದು ಬೇಕಿಲ್ಲ. ದೇವರು ಯಾವುದೇ ರೀತಿಯ ಅಸಮಾನತೆಯನ್ನು ಜನರಿಗೆ ನೀಡಿಲ್ಲ ಎಂದರು.

ಮಾಹಿತಿ ತಂತ್ರಜ್ಞಾನ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ಡಾ.ನಿಶಿಕಾಂತ್ ದುಬೆ ಮಾತನಾಡಿ, ‘ನಾವು ರಾಜಕೀಯವನ್ನು ಮೀರಿ ಸಹೋದರತೆ ಮತ್ತು ಏಕತೆಯನ್ನು ಮೂಡಿಸಬೇಕು. ಸಾಮರಸ್ಯವು ಪ್ರಗತಿಗೆ ಅತಿ ದೊಡ್ಡ ಕಾರಣವಾಗಿದೆ. ಬೆಂಗಳೂರು ಇದಕ್ಕೆ ಉತ್ತಮ ಉದಾಹರಣೆ. ಒಟ್ಟಾಗಿ ನೆಲಸಿ, ಒಂದಾಗಿ ಬೆಳೆಯುವುದು ಎಲ್ಲರ ಉತ್ತಮ ಭವಿಷ್ಯದ ಕೀಲಿ ಕೈಯಾಗಿದೆ’ ಎಂದು ಹೇಳಿದರು.

ಲಹರ್ ಸಿಂಗ್ ಮಾತನಾಡಿ, ‘ನಾನು 50 ವರ್ಷಗಳ ಹಿಂದೆ ರಾಜಸ್ಥಾನದಿಂದ ಕರ್ನಾಟಕಕ್ಕೆ ಬಂದೆ. ಕರ್ನಾಟಕದ ಜನರ ಪ್ರೀತಿ, ಸಹಿಷ್ಣುತೆ ಮತ್ತು ಸಾಮರಸ್ಯವು ನನ್ನ ಜೀವನವನ್ನು ರೂಪಿಸಿ ಯಶಸ್ಸನ್ನು ತಂದು ಕೊಟ್ಟಿದೆ. ಈ ಹೆಮ್ಮೆಯ ರಾಜ್ಯದ ಋಣವನ್ನು ತೀರಿಸಲು ಮತ್ತು ಅದರ ಏಕತೆಯ ಪರಂಪರೆಯನ್ನು ಗೌರವಿಸಲು ಈ ಕಾರ್ಯಕ್ರಮದ ಮೂಲಕ ಸಣ್ಣ ಕೊಡುಗೆ ನೀಡುತ್ತಿದ್ದೇನೆ’ ಎಂದು ಹೇಳಿದರು.

ಸೌಹಾರ್ದ ಔತಣಕೂಟದಲ್ಲಿ ಬೆಂಗಳೂರಿನ ಆರ್ಚ್ ಬಿಷಪ್ ಪೀಟರ್ ಮಚಾಡೊ, ಮುಸ್ಲಿಂ ಧರ್ಮಗುರು ಹಜರತ್ ಇಮ್ರಾನ್, ಗುರುದ್ವಾರದ ಹಿರಿಯ ಪ್ರತಿನಿಧಿಗಳು, ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ರಿಜ್ವಾನ್ ಅರ್ಷದ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಇದ್ದರು.

ಸಾಮರಸ್ಯ ಔತಣ ಕೂಟದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಬಿಡಿಎ ಅಧ್ಯಕ್ಷ ಎನ್.ಹ್ಯಾರಿಸ್, ಮಾಹಿತಿ ತಂತ್ರಜ್ಞಾನ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ನಿಶಿಕಾಂತ್ ದುಬೆ, ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಇದ್ದರು

ಚಿತ್ರಾವಳಿ

ಶಿವಗಂಗೆಯಲ್ಲಿ ಗಿರಿಜಾ ಕಲ್ಯಾಣೋತ್ಸವದ ನಂತರ ಗಂಗಾಧರೇಶ್ವರ– ಪಾರ್ವತಿ ದೇವಿಯ ಶಯನೋತ್ಸವ ಸೋಮವಾರ ನಡೆಯಿತು

ನಗರದ ಕಾಚರಕನಹಳ್ಳಿ ಎಚ್‌ಬಿಆರ್ ಬಡಾವಣೆಯಲ್ಲಿ ಪ್ರತಿಷ್ಠಾಪಿಸಿರುವ 72 ಅಡಿ ಎತ್ತರದ ‘ಶ್ರೀರಾಮಲಕ್ಷ್ಮಣರ ಸಮೇತ ಬೃಹದ್ರೂಪಿ ಹನುಮ’ ಏಕಶಿಲಾ ಮೂರ್ತಿಗೆ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪೂಜೆ ಸಲ್ಲಿಸಿದರು. ರಾಜ್ಯಸಭಾ ಮಾಜಿ ಸದಸ್ಯ ಸಿ.ಕೆ.ರಾಮಮೂರ್ತಿ, ಬೃಹದ್ರೂಪಿ ಹನುಮಾನ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಂ.ಎನ್.ರೆಡ್ಡಿ, ಮುನಿರಾಜು, ಎ.ಎಚ್. ಆನಂದ್, ಆಂಜನೇಯ ರೆಡ್ಡಿ ಮತ್ತು ಪದಾಧಿಕಾರಿಗಳು ಹಾಜರಿದ್ದರು

ವಿಜಯ ಮ್ಯೂಸಿಕ್ ಸ್ಕೂಲ್‌ನ 26ನೇ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಸಪ್ತಸ್ವರ ಸಂಗೀತ ಸಂಜೆ ಕಾರ್ಯಕ್ರಮವನ್ನು ಪೊಲೀಸ್ ಅಧಿಕಾರಿ ಮಂಜುನಾಥ ಬಾಬು ಉದ್ಘಾಟಿಸಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ಚಿತ್ರ ಸಾಹಿತಿ ನಾಗೇಂದ್ರ ಪ್ರಸಾದ್, ವೈದ್ಯ ಡಾ.ರಾಜು, ಸಂಗೀತ ನಿರ್ದೇಶಕರಾದ ಪ್ರಸನ್ನಹರೀಶ್ ಹಾಗೂ ಮ್ಯೂಸಿಕ್ ಸ್ಕೂಲ್‌ನ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ(ಸಂಗೀತ ನಿರ್ದೇಶಕ ದಿ.ನಾಗೇಂದ್ರ ಅವರ ಪತ್ನಿ) ಪಾಲ್ಗೊಂಡಿದ್ದರು

ಚಿಕ್ಕಜಾಲ ಪಿಎಸಿಎಸ್‌ಗೆ ನಿರ್ದೇಶಕರ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಚಿಕ್ಕಜಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ 11 ಮಂದಿ ಜಯ ಗಳಿಸಿದ್ದಾರೆ.

ಸಾಲಗಾರರ ಕ್ಷೇತ್ರದಿಂದ (ಸಾಮಾನ್ಯ) ಎಂ.ಆಂಜಿನಪ್ಪ, ಸಿ.ಎನ್. ತಮ್ಮೇಗೌಡ, ಎಂ.ರಾಮಯ್ಯ, ಎನ್. ವಿಜಯಕುಮಾರ್, ಜಿ.ಶಿವಕುಮಾರ್ ಮತ್ತು ರವಿಕುಮಾರ್(ಬಿಸಿಎಂ-ಬಿ) ಬಿ.ಎಲ್.ಮಂಜುನಾಥ್(ಬಿಸಿಎಂ-ಎ), ಉಷಾ.ಎಸ್, ಮುನಿರತ್ನಮ್ಮ(ಸಾಮಾನ್ಯ ಮಹಿಳೆ), ಡಿ.ನಾರಾಯಣಸ್ವಾಮಿ (ಪರಿಶಿಷ್ಟ ಜಾತಿ) ಹಾಗೂ ಎ.ಸಿ. ಗೋವಿಂದರಾಜು(ಪರಿಶಿಷ್ಟ ಪಂಗಡ) ಗೆಲುವು ಸಾಧಿಸಿದರು. ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಎಂ.ಎನ್. ಜಯಕುಮಾರ್ ಅವರ ಫಲಿತಾಂಶವನ್ನು ನ್ಯಾಯಾಲಯದ ಆದೇಶದ ಮೇರೆಗೆ ತಡೆಹಿಡಿಯಲಾಗಿದೆ.

ಬಾಗಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರ ಆಯ್ಕೆ: ಸಾಲಗಾರರ ಕ್ಷೇತ್ರದಿಂದ ಎ.ವೆಂಕಟರಾಜು(ಪರಿಶಿಷ್ಟ ಜಾತಿ) ಮತ್ತು ಪ್ರಕಾಶ್.ಎನ್, ಎಸ್. ಯಶವಂತ್, ಸಿ.ಶಿವಣ್ಣ, ಬಿ.ಎಸ್.ಹರ್ಷ, ಬಿ.ಆರ್.ಹನುಮಂತಗೌಡ(ಸಾಮಾನ್ಯ ಕೇತ್ರ), ಎಚ್.ಕೆ.ನಾಗರತ್ನ, ಆನಂದಮ್ಮ (ಮಹಿಳಾ ಮೀಸಲು), ಮಹಮದ್ ಮಜಾರ್(ಬಿಸಿಎಂ-ಎ) ಬಿ.ಸಿ.ಶಿವ ಪ್ರಕಾಶ್(ಬಿಸಿಎಂ-ಬಿ) ಹಾಗೂ ನವೀನ್ ಕುಮಾರ್.ಬಿ.ಎನ್(ಸಾಲಗಾರರಲ್ಲದ ಕ್ಷೇತ್ರ)ಜಯ ಗಳಿಸಿದ್ದಾರೆ.

ಫಲಿತಾಂಶಕ್ಕೆ ತಡೆಯಾಜ್ಞೆ: ಬ್ಯಾಟರಾಯನಪುರ, ಬೆಟ್ಟಹಲಸೂರು, ಮಾರೇನಹಳ್ಳಿ, ಸಿಂಗಹಳ್ಳಿ ಹಾಗೂ ಬಂಡಿಕೊಡಿಗೇಹಳ್ಳಿ ಸಂಘಗಳ ನಿರ್ದೇಶಕರ ಸ್ಥಾನಕ್ಕಾಗಿ ಚುನಾವಣೆ ನಡೆದಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ಫಲಿತಾಂಶವನ್ನು ತಡೆಹಿಡಿಯಲಾಗಿದೆ.

ಎಸ್‌ಸಿ–ಎಸ್ಟಿ ಆಯೋಗಕ್ಕೆ ಅಧ್ಯಕ್ಷರ ನೇಮಕ ಕೋರಿ ಅರ್ಜಿ: ನೋಟಿಸ್

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಎಸ್ಸಿ- ಎಸ್ಟಿ) ಆಯೋಗಕ್ಕೆ ತುರ್ತಾಗಿ ಅಧ್ಯಕ್ಷರನ್ನು ನೇಮಕ ಮಾಡಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕೊಳ್ಳೇಗಾಲದ ಸಿ.ಎಲ್. ಶ್ರೀನಿವಾಸ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸದಾನಂದ ಶಾಸ್ತ್ರಿ ಅವರು ‘ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 2002ರ-ಕಾಯ್ದೆ ಅಡಿ ಆಯೋಗ ರಚಿಸಲಾಗಿದ್ದು, ಅದಕ್ಕೆ ಎರಡೂವರೆ ವರ್ಷಗಳಿಂದ ಅಧ್ಯಕ್ಷರ ನೇಮಕವಾಗಿಲ್ಲ. ಇಲ್ಲಿ ಲಕ್ಷಕ್ಕೂ ಅಧಿಕ ಪ್ರಕರಣಗಳು ಬಾಕಿ ಇದ್ದು, ತುಳಿತಕ್ಕೆ ಒಳಗಾದ ಸಮುದಾಯಗಳ ಜನರಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ, ತುರ್ತಾಗಿ ಅಧ್ಯಕ್ಷರ ನೇಮಕ ಮಾಡಬೇಕು’ ಎಂದು ಕೋರಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗಕ್ಕೆ ಕಳೆದ ಎರಡೂವರೆ ವರ್ಷಗಳಿಂದ ಅಧ್ಯಕ್ಷರನ್ನು ನೇಮಿಸಿಲ್ಲ. ಇದರಿಂದ ಲಕ್ಷಾಂತರ ಪ್ರಕರಣಗಳು ಬಾಕಿ ಉಳಿದಿವೆ. ಆದ್ದರಿಂದ ತಕ್ಷಣವೇ ಅಧ್ಯಕ್ಷರನ್ನು ನೇಮಕ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಇದನ್ನು ಆಲಿಸಿದ ನ್ಯಾಯಪೀಠವು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆಬ್ರುವರಿ 17ಕ್ಕೆ ಮುಂದೂಡಿತು.

ಅಂಕಪಟ್ಟಿ ತಿದ್ದುಪಡಿಗೆ ₹1,600 ಶುಲ್ಕ: ಪೋಷಕರ ಆಕ್ಷೇಪ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ದ್ವಿತೀಯ ಪಿಯು ಅಂಕಪಟ್ಟಿಯಲ್ಲಿನ ಲೋಪಗಳ ತಿದ್ದುಪಡಿಗೆ ₹1,600 ಶುಲ್ಕ ನಿಗದಿ ಮಾಡಿದ್ದು, ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿ, ಪೋಷಕರ ಹೆಸರು, ಜನ್ಮ ದಿನಾಂಕ ಮತ್ತು ಇತರ ವಿವರಗಳ ತಿದ್ದುಪಡಿಗಾಗಿ ಈ ಹೆಚ್ಚುವರಿ ಶುಲ್ಕವನ್ನು ಭರಿಸಬೇಕಿದೆ.

‘ಎಸ್‌ಎಸ್‌ಎಲ್‌ಸಿ ತೇರ್ಗಡೆಯಾಗಿ ಪಿಯು ಸೇರುವಾಗಲೇ ದಾಖಲೆಗಳಲ್ಲಿ ಸರಿಯಾದ ಮಾಹಿತಿ ಇರುತ್ತದೆ. ಕಾಲೇಜುಗಳು ಹಾಗೂ ಮಂಡಳಿ ಸಿಬ್ಬಂದಿ ಮಾಡುವ ಲೋಪಗಳಿಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಏಕೆ ಹೆಚ್ಚುವರಿ ಮೊತ್ತ ಪಾವತಿಸಬೇಕು’ ಎಂದು ಹಲವರು ಪ್ರಶ್ನಿಸಿದ್ದಾರೆ.

ರಾಜ್ಯದ ಕಾಂಗ್ರೆಸ್ ಸರ್ಕಾರ ಕಡಿಮೆ ಹಾಜರಾತಿ ಇರುವ ಶಾಲೆಗಳನ್ನು ಇತರ ಶಾಲೆಗಳೊಂದಿಗೆ ಸಂಯೋಜನೆಗೊಳಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ದೂರಿದ್ದಾರೆ.

ಜ.24ಕ್ಕೆ ಸಾ.ರಾ.ಗೋವಿಂದು ಅಭಿನಂದನಾ ಸಮಾರಂಭ

ಗೋವಿಂದು ಕೆಲಸ ಅನನ್ಯ: ಹಂಪನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾ.ರಾ.ಗೋವಿಂದು ಅವರು ಬಹುರೂಪಿ. ಚಲನಚಿತ್ರ ಮಾಧ್ಯಮವನ್ನು ಬಳಸಿಕೊಂಡು ನಾಡು, ನುಡಿಯ ಸರ್ವಾಂಗೀಣ ಪ್ರಗತಿಗೆ ಮಾಡಿದ ಕೆಲಸ ಅನನ್ಯ. ಅದನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ಜ.24ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ’ ಎಂದು ಸಾ.ರಾ.ಗೋವಿಂದು ಅಭಿನಂದನಾ ಸಮಿತಿ ಗೌರವ ಸಲಹೆಗಾರರಾದ ಹಂಪ ನಾಗರಾಜಯ್ಯ ತಿಳಿಸಿದರು.



ಹಂಪ ನಾಗರಾಜಯ್ಯ

ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ‘ಕನ್ನಡವನ್ನು ಶಿಕ್ಷಣದಲ್ಲಿ ಬಹಳ ಪ್ರಬಲವಾಗಿ ಸ್ಥಾಪಿಸಬೇಕು ಎಂಬ ಉದ್ದೇಶವಿಟ್ಟುಕೊಂಡು ನಾಲ್ಕು ದಶಕಗಳ ಹಿಂದೆ ಗೋಕಾಕ ಚಳವಳಿ ಸಣ್ಣ ಪ್ರಮಾಣದಲ್ಲಿ ಆರಂಭವಾಯಿತು. ಈ ಚಳವಳಿಗೆ ಬಹಳ ವ್ಯಾಪಕವಾದ ಸ್ವರೂಪವನ್ನು ಕೊಡುವ ದಿಕ್ಕಿನಲ್ಲಿ ಸಾ.ರಾ. ಗೋವಿಂದು ಮಾಡಿದ ಕೆಲಸ ಪ್ರಮುಖವಾದದು. ಜನರಿಗೆ ಈ ಚಳವಳಿಯ ಮಹತ್ವವನ್ನು ಮನವರಿಕೆ ಮಾಡುವ ಅಗತ್ಯ ಅಂದಿತ್ತು. ಆ ಕೆಲಸವನ್ನು ರಾಜ್‌ಕುಮಾರ್ ಅವರನ್ನು ಕರೆದುಕೊಂಡು ಬರುವ ಮೂಲಕ ಗೋವಿಂದು ಸಾಧಿಸಿದರು’ ಎಂದರು.

‘ರಾಜ್‌ಕುಮಾರ್ ಚಲನಚಿತ್ರ ಕ್ಷೇತ್ರದಲ್ಲೇ ಇದ್ದು ರಾಜಕೀಯ ರಂಪಗಳಿಗೆ ಹೋಗದೆ ವಿಶಿಷ್ಟವಾಗಿದ್ದವರು. ಅಂದು ಹೊರಟಿದ್ದ ಕನ್ನಡದ ದೊಡ್ಡ ಪ್ರವಾಹಕ್ಕೆ ಒಂದು ಶಕ್ತಿಯಾಗಿ ರಾಜ್‌ಕುಮಾರ್ ಪ್ರವೇಶ ಅಗತ್ಯ ಎಂದು ಮೊದಲು ಮನಗಂಡವರು ಗೋವಿಂದು. ಅವರು ರಾಜ್‌ಕುಮಾರ್‌ಗೆ ಬಲಗೈಯಾಗಿದ್ದವರು. ಅವರನ್ನು ಒಪ್ಪಿಸಿ ಈ ಚಳವಳಿಗೆ ಕರೆತಂದರು. ರಾಜ್‌ಕುಮಾರ್ ಬಂದ ಮೊದಲ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನ ಸೇರಿದರು. ರಾಜ್‌ಕುಮಾರ್ ಜೊತೆಯಲ್ಲಿ ರಾಜ್ಯದಾದ್ಯಂತ ಗೋವಿಂದು ಸಂಚರಿಸಿದರು. ಅದರ ಪ್ರತಿಫಲ ನಾಡಿನ ಚರಿತ್ರೆಯಾಗಿದೆ. ಕನ್ನಡಕ್ಕೆ ಒಂದು ಸಿಂಹಬಲ ತಂದು ಕೊಡುವ ನಿಟ್ಟಿನಲ್ಲಿ ಗೋವಿಂದು ಮಾಡಿದ ಕಾರ್ಯಗಳನ್ನು ಮೆಲುಕು ಹಾಕುವ ಕಾರ್ಯಕ್ರಮ ಇದಾಗಿದೆ’ ಎಂದು ಹೇಳಿದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ಕೆ.ರಾಮೇಗೌಡ, ಕಾರ್ಯದರ್ಶಿ, ನಿರ್ಮಾಪಕ ಎ.ಗಣೇಶ್ ಇದ್ದರು.

ದಿನವಿಡೀ ಕಾರ್ಯಕ್ರಮ

ಜ.24ರಂದು ಬೆಳಿಗ್ಗೆ 8.30ಕ್ಕೆ ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಸಾ.ರಾ.ಗೋವಿಂದು ಅವರ ಮೆರವಣಿಗೆ ನಡೆಯಲಿದೆ. ನಟಿ ಉಮಾಶ್ರೀ ಇದನ್ನು ಉದ್ಘಾಟಿಸಲಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ಸಾ.ರಾ. ಗೋವಿಂದು ಅವರ ಅಪರೂಪದ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ. ಬೆಳಿಗ್ಗೆ 11ಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದ ಬಳಿಕ ‘ಕನ್ನಡ ಅಸ್ಮಿತೆ’ ಕುರಿತು ಲೇಖಕ ಜಾಣಗೆರೆ ವೆಂಕಟರಾಮಯ್ಯ, ‘ಡಾ.ರಾಜ್‌ಕುಮಾರ್ ಮತ್ತು ಕನ್ನಡ ಚಿತ್ರರಂಗ’ ಕುರಿತು ಲೇಖಕ ಎನ್.ಎಸ್. ಶ್ರೀಧರಮೂರ್ತಿ ವಿಷಯ ಮಂಡಿಸಲಿದ್ದಾರೆ. ಸಂಜೆ 5ಕ್ಕೆ ಸಾ.ರಾ.ಗೋವಿಂದು ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಲಿದ್ದಾರೆ. ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಅವರು ಗೋವಿಂದು ಅವರು ಅಭಿನಂದನ ಗ್ರಂಥ ಬಿಡುಗಡೆಗೊಳಿಸಲಿದ್ದಾರೆ. ಸಂಜೆ 7ರಿಂದ ಮನರಂಜನಾ ಕಾರ್ಯಕ್ರಮ ನಡೆಯಲಿದೆ.

‘ಗೃಹಲಕ್ಷ್ಮಿ’ ನೆರವು ಸೂರು ನಿರ್ಮಾಣ

ಪ್ರಜಾವಾಣಿ ವಾರ್ತೆ

ಚಡಚಣ: ಸರ್ಕಾರದ ‘ಗೃಹಲಕ್ಷ್ಮಿ’ ಹಣದ ನೆರವಿನಿಂದ ತಾಲ್ಲೂಕಿನ ಕರ್ನಾಟಕ-ಮಹಾರಾಷ್ಟ್ರದ ಗಡಿ ಅಂಚಿನ ಶಿರಾಡೋಣ ಗ್ರಾಮದಲ್ಲಿ ಮಹಿಳೆಯೊಬ್ಬರು ಪತ್ರಾಸ್ ಮನೆ ಕಟ್ಟಿಕೊಂಡಿದ್ದಾರೆ.

ಶಿರಾಡೋಣ ಗ್ರಾಮದ ನೀಲಾಬಾಯಿ ಪಾಂಡ್ರೆ ಗೃಹಲಕ್ಷ್ಮಿ ಹಣ ₹30 ಸಾವಿರದೊಂದಿಗೆ ಇನ್ನಷ್ಟು ಹಣ ಹೊಂದಿಸಿಕೊಂಡು ₹1 ಲಕ್ಷ ವೆಚ್ಚದಲ್ಲಿ ಪತ್ರಾಸ್ ಮನೆ ನಿರ್ಮಿಸಿಕೊಂಡಿದ್ದಾರೆ.

ಮನೆಗೆ ‘ಗೃಹಲಕ್ಷ್ಮಿ ನಿಲಯ’ ಎಂದು ನಾಮಕರಣ ಮಾಡಿದ್ದೂ ಅಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಚಿತ್ರವನ್ನು ಅಂಟಿಸಿ ‘ಸಿದ್ದರಾಮಯ್ಯ ಕೃಪೆ’ ಎಂದು ಬರೆಸಿದ್ದಾರೆ.

‘ನಿತ್ಯ ಕೂಲಿ ಮಾಡಿ ಬದುಕುವ ನಮಗೆ ಸ್ವಂತ ಸೂರು ಹೊಂದುವ ಬಹುದಿನಗಳ ಆಸೆ ಇತ್ತು. ಸರ್ಕಾರದ ಯೋಜನೆಗಳಿಂದ ಕನಸು ನನಸಾಯಿತು’ ಎಂದು ನೀಲಾಬಾಯಿ ‘ಪ್ರಜಾವಾಣಿ’ಗೆ ತಿಳಿಸಿದರು.

ನಗರದಲ್ಲಿ ಇಂದು

2 ದಿನಗಳ ರಾಷ್ಟ್ರೀಯ ತಾಂತ್ರಿಕ ಸಮ್ಮೇಳನ ಉದ್ಘಾಟನೆ, ಜಾನುವಾರು ತಳಿಗಳ ಪ್ರದರ್ಶನ: ಉದ್ಘಾಟನೆ: ಶ್ರೀರೂಪಾ, ಅತಿಥಿಗಳು: ರಾಘವೇಂದ್ರ ಭಟ್ಟ, ಕೆ.ಸಿ. ವೀರಣ್ಣ, ಮಂಜುನಾಥ ಎಸ್. ಪಾಳೆಗಾರ್, ಬಿ.ಪಿ. ಮಿಶ್ರಾ, ಆರ್. ನಾಗರಾಜ್, ಅಧ್ಯಕ್ಷತೆ: ಎನ್. ಕೆ. ಶಿವಕುಮಾರ್, ಆಯೋಜನೆ: ಪಶು ಇಲಾಖೆ, ದೇಶಿಯ ಪ್ರಾಣಿ ಜೀವವೈವಿಧ್ಯ ಸಂರಕ್ಷಣೆ ಸಂಘ, ಸ್ಥಳ: ಪಶುವೈದ್ಯಕೀಯ ಮಹಾವಿದ್ಯಾಲಯದ ಕನ್ನಡ ಸಭಾಂಗಣ, ಹೆಬ್ಬಾಳ, ಬೆಳಿಗ್ಗೆ 9

ವನ್ಯಜೀವಿ ವಿಧಿವಿಜ್ಞಾನ; ಅಪರಾಧ ತಡೆ ಮತ್ತು ಸಂರಕ್ಷಣೆ ಕುರಿತ 2ನೇ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಕಾರ್ಯಾಗಾರ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ಜೈನ್ ಡೀಮ್ಡ್ ವಿಶ್ವವಿದ್ಯಾಲಯ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

ಶಿವಕುಮಾರ ಸ್ವಾಮೀಜಿ 6ನೇ ಪುಣ್ಯ ಸ್ಮರಣೋತ್ಸವ: ಸಾನ್ನಿಧ್ಯ: ಪ್ರಭುಚನ್ನಬಸವ ಸ್ವಾಮೀಜಿ, ಮಾಲಾರ್ಪಣೆ: ಶಂಕರ ಬಿದರಿ, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಎಸ್. ಸುರೇಶ್ ಕುಮಾರ್, ಬಿ.ಆರ್. ನವೀನ್ ಕುಮಾರ್, ಆಯೋಜನೆ: ಶಿವಕುಮಾರಸ್ವಾಮಿ ಚಾರಿಟಬಲ್ ಟ್ರಸ್ಟ್, ಸ್ಥಳ: ರಾಜಾಜಿನಗರ ಶಿವಕುಮಾರ ಸ್ವಾಮೀಜಿ ಪ್ರತಿಮೆ ಮುಂದೆ, ಬೆಳಿಗ್ಗೆ 10.30

ನಿಜಶರಣ ಅಂಬಿಗರ ಚೌಡಯ್ಯ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ, ಅತಿಥಿ: ಶಿವರಾಜ ತಂಗಡಗಿ, ಉದಯ್ ಬಿ. ಆಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಪುರಂದರದಾಸರ ಪುಣ್ಯದಿನ ಮಹೋತ್ಸವ: ವೇಣುಗೋಪಾಲ ಭಂಡಾರಿ ಮತ್ತು ಸಂಗಡಿಗರಿಂದ ಕೊಳಲು ವಾದನ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸುಧೀಂದ್ರನಗರ, ಸಂಜೆ 6.30

ಮಹಾಭಾರತ (ಆದಿಪರ್ವ) ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಪೂರ್ಣಪ್ರಜ್ಞ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ 6.30

ಬೆಂಗಳೂರು ರಂಗಸಂಭ್ರಮದಲ್ಲಿ ಬರ್ಟೋಲ್ ಬ್ರೆಕ್ಟ್‌ನ ‘ಮದರ್ ಕರೇಜ್’ ನಾಟಕ: ಕನ್ನಡಕ್ಕೆ ಅನುವಾದ: ಲಿಂಗದೇವರು ಹಳೆಮನೆ, ನಿರ್ದೇಶನ: ಎಸ್.ವಿ. ಕಶ್ಯಪ್, ಆಯೋಜನೆ: ವಿಜಯನಗರ ಬಿಂಬ: ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಎರಡು ಅಂತಸ್ತಿನ ಮನೆಗಳಿಗೆ ರಿಯಾಯಿತಿ: ಸರ್ಕಾರಕ್ಕೆ ಬಿಬಿಎಂಪಿಯಿಂದ ಪ್ರಸ್ತಾವ

ಚಿಕ್ಕ ನಿವೇಶನ: ಸೆಟ್‌ಬ್ಯಾಕ್‌ಗೆ ವಿನಾಯಿತಿ

• ಆರ್. ಮಂಜುನಾಥ್

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಚಿಕ್ಕ ನಿವೇಶನಗಳಲ್ಲಿ ನಿರ್ಮಿಸುವ ವಸತಿ ಕಟ್ಟಡದ ಸೆಟ್‌ಬ್ಯಾಕ್ ನಿಯಮಗಳಿಗೆ ವಿನಾಯಿತಿ ನೀಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚಿಂತಿಸಿದೆ.

20 ಅಡಿ x 30 ಅಡಿಯಿಂದ 30 ಅಡಿ x 40 ಅಡಿ ನಿವೇಶನಗಳಲ್ಲಿ, ನೆಲ ಮತ್ತು ಎರಡು ಅಂತಸ್ತು ವಸತಿ ಕಟ್ಟಡ ನಿರ್ಮಿಸಿದರೆ ಸುತ್ತಲೂ ಬಿಡಬೇಕಾದ ಜಾಗದ (ಸೆಟ್‌ಬ್ಯಾಕ್) ವಿಸ್ತೀರ್ಣ ಕಡಿಮೆಯಾಗಲಿದೆ.

ರಸ್ತೆ ಬದಿಗೆ 20 ಅಡಿ ಅಗಲ ಹೊಂದಿರುವ ನಿವೇಶನದಲ್ಲಿ ವಸತಿ ಕಟ್ಟಡ ನಿರ್ಮಿಸುವಾಗ ಮುಂಭಾಗದಲ್ಲಿ ಮಾತ್ರ ಮೂರು ಅಡಿ ಜಾಗ (ಸೆಟ್‌ಬ್ಯಾಕ್) ಬಿಡಬೇಕು. 30 ಅಡಿವರೆಗಿನ ನಿವೇಶನದಲ್ಲಿ ಕಟ್ಟಡದ ಹಿಂಬದಿಯಲ್ಲಿ ಜಾಗ ಬಿಡಬೇಕಾದ ಅಗತ್ಯವಿಲ್ಲ. 30 ಅಡಿಯಿಂದ 40 ಅಡಿವರೆಗಿನ ನಿವೇಶನದಲ್ಲಿ ಕಟ್ಟಡ ನಿರ್ಮಿಸುವಾಗ ಅದರ ಅಳತೆಗೆ ಅನುಗುಣವಾಗಿ ಸುತ್ತಲೂ ಜಾಗ ಬಿಡಬೇಕಾಗುತ್ತದೆ. ಈ ಕುರಿತಂತೆ ವಲಯ ನಿಯಮಗಳಿಗೆ ತಿದ್ದುಪಡಿ ತರಬೇಕು ಎಂದು ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವ ಸಲ್ಲಿಸಿದೆ.

ಯಾವ ನಿವೇಶನಕ್ಕೆ ಎಷ್ಟು ಸೆಟ್‌ಬ್ಯಾಕ್ ಪ್ರಸ್ತಾವ?

ನಿವೇಶನಗಳ ಅಗಲ	ಸೆಟ್‌ಬ್ಯಾಕ್			
	ಬಲ	ಎಡ	ಮುಂದೆ	ಹಿಂದೆ
7 ಮೀಟರ್‌ವರೆಗೆ	0 ಮೀ	0 ಮೀ	0.9 ಮೀ	0 ಮೀ
7 ಮೀಟರ್‌ನಿಂದ 10 ಮೀಟರ್	0.9 ಮೀ	0.9 ಮೀ	0.9 ಮೀ	0 ಮೀ
10 ಮೀಟರ್‌ಗೂ ಹೆಚ್ಚು	8%	8%	12%	8%

ಪ್ರಸ್ತುತ ಚಾಲ್ತಿಯಿರುವ ಸೆಟ್‌ಬ್ಯಾಕ್ ನಿಯಮಗಳ ಪ್ರಕಾರ, 20 ಅಡಿ x 30 ಅಡಿ ನಿವೇಶನಗಳಲ್ಲಿ ಕಟ್ಟಡದ ಸುತ್ತಲೂ ಒಂದು ಮೀಟರ್ (3.28 ಅಡಿ) ಜಾಗ ಬಿಡಬೇಕು. 30 ಅಡಿ x 40 ಅಡಿ ನಿವೇಶನಗಳಲ್ಲಿ ಸುತ್ತಲೂ 1.50 ಮೀಟರ್ (5 ಅಡಿ) ಸೆಟ್‌ಬ್ಯಾಕ್ ಇರಬೇಕು.

'ನಾವು ಎಷ್ಟೇ ಪ್ರಯತ್ನಪಟ್ಟರೂ ಚಿಕ್ಕ ನಿವೇಶನಗಳಲ್ಲಿ ಸೆಟ್‌ಬ್ಯಾಕ್ ಉಲ್ಲಂಘನೆಯಾಗುತ್ತಲೇ ಇದೆ. ಬಹುತೇಕ ಬಡವರ್ಗದ ಜನರೇ ಇಂತಹ ನಿವೇಶನಗಳಲ್ಲಿ ಮನೆ ನಿರ್ಮಿಸಿರುತ್ತಾರೆ. ಉಲ್ಲಂಘನೆಗೆ ಕ್ರಮ ಕೈಗೊಳ್ಳಲು ನೋಟಿಸ್ ನೀಡಿದಾಗ ಹಲವು ರೀತಿಯ ಮನವಿ ಮಾಡುತ್ತಾರೆ, ಒತ್ತಡವೂ ಬರುತ್ತದೆ. ನಗರದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಸಾವಿರಾರು ಮನೆಗಳ ಸುತ್ತ ಸೆಟ್‌ಬ್ಯಾಕ್ ಇಲ್ಲ. ಹೀಗಾಗಿ, ಚಿಕ್ಕ ನಿವೇಶನಗಳ ವಸತಿ ಕಟ್ಟಡಗಳಿಗೆ ವಿನಾಯಿತಿ ನೀಡಲು ಪ್ರಸ್ತಾವ ಸಲ್ಲಿಸಲಾಗಿದೆ. ನಗರದಲ್ಲಿ ನಕ್ಷೆ, ಸೆಟ್‌ಬ್ಯಾಕ್ ಇಲ್ಲದೆ ಕಟ್ಟಡ ನಿರ್ಮಾಣವಾಗಲು ಬಿಡದಂತೆ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.



30 ಚದರ ಮೀಟರ್ ನಿವೇಶನಕ್ಕೆ ಅನುಮತಿ ಇಲ್ಲ!

ನಗರದಲ್ಲಿ 30 ಚದರ ಮೀಟರ್‌ಗಿಂತ (323 ಚದರಡಿ) ಕಡಿಮೆ ವಿಸ್ತೀರ್ಣದಲ್ಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡದಂತೆ, ಕಟ್ಟಡ ಉಪವಿಧಿಗಳಲ್ಲಿ ಅವಕಾಶ ಕಲ್ಪಿಸುವಂತೆ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವದಲ್ಲಿ ಬಿಬಿಎಂಪಿ ಮನವಿ ಮಾಡಿಕೊಂಡಿದೆ. ಇಂತಹ ನಿವೇಶನಗಳಲ್ಲಿ ಯಾವುದೇ ರೀತಿಯ ಕಟ್ಟಡ ನಿರ್ಮಾಣಕ್ಕೆ ಅನುವು ಮಾಡಿಕೊಡದಂತೆ ಪಾಲಿಕೆಯ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಲು ಅವಕಾಶ ಮಾಡಿಕೊಡಲೂ ಕೋರಲಾಗಿದೆ.

ಅಪಘಾತದಲ್ಲಿ ಫುಡ್ ಡೆಲಿವರಿ ಬಾಯ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಗುಂಜೂರು ಬಳಿ ಟ್ರಕ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಮೃತಪಟ್ಟಿದ್ದಾರೆ.

ಯಾದಗಿರಿಯ ರಾಜೇಶ್ ಸಾಬ್ (50) ಮೃತಪಟ್ಟವರು.

ರಾಜೇಶ್ ಸಾಬ್ ಅವರು ವರ್ತೂರಿನ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಭಾನುವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಕೆಲಸದ ನಿಮಿತ್ತ ದ್ವಿಚಕ್ರ ವಾಹನದಲ್ಲಿ ಅವರು ತೆರಳುತ್ತಿದ್ದರು. ಗುಂಜೂರು ಬಳಿ ಟ್ರಕ್ ಹಾಗೂ ದ್ವಿಚಕ್ರ ವಾಹನದ ನಡುವೆ ಅಪಘಾತ ಸಂಭವಿಸಿದೆ. ದ್ವಿಚಕ್ರ ವಾಹನದಿಂದ ಕೆಳಕ್ಕೆ ಬಿದ್ದಿದ್ದ ಅವರು, ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ಮಾರ್ಗ ಮಧ್ಯದಲ್ಲಿ ರಾಜೇಶ್ ಸಾಬ್ ಮೃತಪಟ್ಟರು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಅತುಲ್ ತಾಯಿ ವಶಕ್ಕೆ ಮಗು ನೀಡಲು 'ಸುಪ್ರೀಂ' ನಿರಾಕರಣೆ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಟೆಕಿ ಅತುಲ್ ಸುಭಾಷ್ ಅವರ ತಾಯಿ ಅಂಜು ದೇವಿ ಅವರು, ಮೊಮ್ಮಗನನ್ನು ತಮ್ಮ ಸುಪರ್ದಿಗೆ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಅಂಜು ದೇವಿ ಅವರು, ನಾಲ್ಕು ವರ್ಷ ವಯಸ್ಸಿನ ಮೊಮ್ಮಗನನ್ನು ತಮ್ಮ ಸುಪರ್ದಿಗೆ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ನ್ಯಾಯಪೀಠವು ಸೋಮವಾರ ನಡೆಸಿತು.

ಕೋರ್ಟ್ ಸೂಚನೆಯಂತೆ, ಮಗುವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರುಪಡಿಸಲಾಗಿತ್ತು. ಆಗ ಮಗುವಿನೊಂದಿಗೆ ಮಾತುಕತೆ ನಡೆಸಿದ ಪೀಠವು, ಮಗುವು ತನ್ನ ತಾಯಿಯ ಸುಪರ್ದಿಯಲ್ಲಿಯೇ ಇರುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿತು.

'ಮಗುವು ತನ್ನ ಅಜ್ಜಿಯೊಂದಿಗೆ ಅತಿ ಕಡಿಮೆ ಸಮಯ ಕಳೆದಿದೆ. ಹಾಗಾಗಿ, ಮಗುವು ಸದ್ಯ ತನ್ನ ತಾಯಿಯ ಸುಪರ್ದಿಯಲ್ಲಿರುವುದೇ ಉತ್ತಮ' ಎಂದು ಸೂಚ್ಯವಾಗಿ ಹೇಳಿತು.

ಜ.7ರಂದು ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅರ್ಜಿದಾರರಾದ ಅಂಜು ದೇವಿ ಅವರು ಮಗುವಿಗೆ ಅಪರಿಚಿತರು ಎಂದು ಹೇಳಿ ಮನವಿಯನ್ನು ತಿರಸ್ಕರಿಸಿತ್ತು.

ವಕ್ಫ್ ಆಸ್ತಿ: ಶ್ರೀರಂಗಪಟ್ಟಣ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಶ್ರೀರಂಗಪಟ್ಟಣ: ಪಟ್ಟಣ ಹಾಗೂ ತಾಲ್ಲೂಕಿನ ವಿವಿಧೆಡೆ ಕೃಷಿ ಜಮೀನು, ಸರ್ಕಾರಿ ಶಾಲೆ, ಗ್ರಂಥಾಲಯ ಕಟ್ಟಡ ಮತ್ತು ಸ್ಮಾರಕಗಳ ಪಹಣಿಗಳಲ್ಲಿ ವಕ್ಫ್ ಎಂದು ನಮೂದಾಗಿರುವುದನ್ನು ಖಂಡಿಸಿ ವಿವಿಧ ಸಂಘಟನೆಗಳು ಸೋಮವಾರ ಕರೆ ನೀಡಿದ್ದ 'ಶ್ರೀರಂಗಪಟ್ಟಣ ಬಂದ್' ಗೆ ಉತ್ತಮ ಪ್ರತಿಕ್ರಿಯೆ ದೊರಕಿತು.

ಪಟ್ಟಣದಲ್ಲಿ ಅಂಗಡಿ, ಹೋಟೆಲ್ ಬೆಳಿಗ್ಗೆಯಿಂದ ಸಂಜೆವರೆಗೂ ಮುಚ್ಚಿದ್ದವು. ಬ್ಯಾಂಕ್ ಶಾಖೆಗಳೂ ಬಂದ್ ಆಗಿದ್ದು, ಪೇಟೆ ಬೀದಿ ಬಿಕೋ ಎನ್ನುತ್ತಿತ್ತು. ರಾಜ್ಯ ಮತ್ತು ಕೇಂದ್ರ ಸರ್ಕಾರಿ ಕಚೇರಿಗಳು ತೆರೆದಿದ್ದವಾದರೂ ಜನ ವಿರಳವಾಗಿದ್ದರು. ಆಸ್ಪತ್ರೆ, ಔಷಧಿ ಅಂಗಡಿ ಹಾಗೂ ಹಾಪ್‌ಕಾಮ್ಸ್ ಮಳಿಗೆಗಳು ತೆರೆದಿದ್ದವು. ವಕೀಲರು ನ್ಯಾಯಾಲಯ ಕಲಾಪದಿಂದ ದೂರ ಉಳಿದು ಬೆಂಬಲ ವ್ಯಕ್ತಪಡಿಸಿದರು.

ಮದ್ಯ ಸೇವಿಸಿ ಚಾಲನೆ: 693 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ವಿಭಾಗದ ಪೊಲೀಸರು, 693 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಜ.13ರಿಂದ 19ರ ವರೆಗೆ ನಗರದ 50 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿವಿಧ ಮಾದರಿಯ 61,660 ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಯಿತು. ತಪಾಸಣೆ ವೇಳೆ ಮದ್ಯಪಾನ ಮಾಡಿ ವಾಹನ ಚಲಾಯಿಸುತ್ತಿದ್ದ ವಾಹನಗಳ ಚಾಲಕರು ಹಾಗೂ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲಿಸಿಕೊಳ್ಳಲಾಯಿತು ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಅತಿವೇಗದಿಂದ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಜ.19ರಂದು ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು, 52 ಪ್ರಕರಣ ದಾಖಲಿಸಿಕೊಂಡು ₹26 ಸಾವಿರ ದಂಡ ಸಂಗ್ರಹಿಸಿದ್ದಾರೆ. ಅಲ್ಲದೇ ದೋಷಪೂರಿತ ಸೈಲೆನ್ಸರ್ ಅಳವಡಿಕೆ ಮಾಡಿಕೊಂಡಿದ್ದವರ ವಿರುದ್ಧ 22 ಪ್ರಕರಣ ದಾಖಲಿಸಿಕೊಂಡು, ₹11 ಸಾವಿರ ದಂಡ ಸಂಗ್ರಹಿಸಿದ್ದಾರೆ.

ಪ್ರಾಣಾಪಾಯದಿಂದ ಪಾರು: ಅಶೋಕಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಈಜಿಪುರದಲ್ಲಿ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಅಪಾಯದಿಂದ ಪಾರಾಗಿದ್ದಾರೆ. ಜ.18ರ ಬೆಳಿಗ್ಗೆ 10.30ಕ್ಕೆ ಸಂಭವಿಸಿದ ಅಪಘಾತದ ದೃಶ್ಯವು ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಅಜಾಗರೂಕತೆ ಹಾಗೂ ಅತಿವೇಗದಿಂದ ಬಂದ ಬೈಕ್ ಸವಾರ, ಕಾರಿನ ಎಡಭಾಗದಿಂದ ಮುಂದಕ್ಕೆ ಹೋಗಲು ಪ್ರಯತ್ನಿಸಿ ಬಲಭಾಗಕ್ಕೆ ಬಂದಿದ್ದರು. ಈ ವೇಳೆ ಕಾರಿನ ಬಲಭಾಗದಿಂದ ಬರುತ್ತಿದ್ದ ಇನ್ನೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಈ ವೇಳೆ ರಸ್ತೆಯಲ್ಲಿ ಬೈಕ್ ಸವಾರ ಬಿದ್ದರೂ ಸಹ ತನ್ನ ಬೈಕ್ ನಿಲ್ಲಿಸದೇ ಮುಂದೆ ಸಾಗಿದ್ದಾರೆ. ಇದೇ ವೇಳೆ, ಬೈಕ್ ಹಿಂದಿದ್ದ ಚಾಲಕ ಸಮಯ ಪ್ರಜ್ಞೆ ತೋರಿ ಕಾರನ್ನು ನಿಲುಗಡೆ ಮಾಡಿದ್ದಾರೆ. ಇದರಿಂದ ಸವಾರ ಪಾರಾಗಿದ್ದಾರೆ.

ಅಧಿಕಾರಿ ವಿರುದ್ಧ ಎಫ್‌ಐಆರ್

ವಕೀಲೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ವಾಣಿಜ್ಯ ತೆರಿಗೆ ಇಲಾಖೆ ನೌಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕೀಲೆಯೊಬ್ಬರಿಗೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಅಡಿ ವಾಣಿಜ್ಯ ತೆರಿಗೆ ಅಧಿಕಾರಿಯ ವಿರುದ್ಧ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲೆ ನೀಡಿದ ದೂರಿನ ಮೇರೆಗೆ ಅಧಿಕಾರಿ ವರುಣ್ ಮಲ್ಲಿಕ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯ ವಿರುದ್ಧ ಹಲ್ಲೆ, ಮಹಿಳೆ ಮೇಲೆ ದೌರ್ಜನ್ಯ ಮತ್ತು ಲೈಂಗಿಕ ಕಿರುಕುಳ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ಆರೋಪಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

'ಪತ್ನಿಗೆ ವಿಚ್ಛೇದನ ಕೊಡುವ ವಿಚಾರವಾಗಿ 2024ರ ಸೆಪ್ಟೆಂಬರ್‌ನಲ್ಲಿ ಆರೋಪಿ ಸಂತ್ರಸ್ತೆಯನ್ನು ಭೇಟಿಯಾಗಿದ್ದ. ಪ್ರಕರಣದ ಸಂಬಂಧ ಚರ್ಚಿಸಲು ಆರೋಪಿ ಕಚೇರಿಗೆ ಬರುತ್ತಿದ್ದ. ಕಚೇರಿಗೆ ಬಂದಾಗ ಗೋಡೆಗೆ ತಳ್ಳಿ ದೌರ್ಜನ್ಯ ಎಸಗಿದ್ದಾನೆ. ದೈಹಿಕ ಸಂಪರ್ಕ ಬೆಳೆಸುವಂತೆ ಒತ್ತಾಯಿಸಿದ್ದಾನೆ. ನನ್ನೊಂದಿಗೆ ಅನೈತಿಕ ಸಂಬಂಧ ಇದೆ ಎಂದು ಪತಿಗೆ ಹೇಳುವುದಾಗಿಯೂ ಆರೋಪಿ ಹೆದರಿಸಿದ್ದ. ಇದರಿಂದ ಹೆದರಿ ನಾನು ಸುಮ್ಮನಾಗಿದ್ದೆ. ಈ ಮಧ್ಯೆ ಆರೋಪಿ ತುರ್ತು ಕೆಲಸದ ನಿಮಿತ್ತ ಹಣ ಪಡೆದುಕೊಂಡಿದ್ದ' ಎಂಬುದಾಗಿ ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

'2024ರ ಡಿ.20ರಂದು ಹಣ ವಾಪಸ್ ಕೊಡುವಂತೆ ಕೇಳಿದಾಗ, ಆರೋಪಿ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದ. ಅಲ್ಲದೇ ನನ್ನ ಮೇಲೆ ಹಲ್ಲೆ ನಡೆಸಿದ್ದ. ತಳ್ಳಿದ್ದರಿಂದ ಕೆಳಕ್ಕೆ ಬಿದ್ದು ಕಾಲಿಗೆ ಗಾಯವಾಗಿದೆ' ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬಾಲಕನ ಮೇಲೆ ವೃದ್ಧನಿಂದ ಲೈಂಗಿಕ ದೌರ್ಜನ್ಯ

ಹನ್ನೊಂದು ವರ್ಷದ ಬಾಲಕನ ಮೇಲೆ 70 ವರ್ಷದ ವೃದ್ಧನೊಬ್ಬ ಲೈಂಗಿಕ ದೌರ್ಜನ್ಯ ಎಸಗಿದ್ದು, ಆರೋಪಿಯನ್ನು ವಿದ್ಯಾರಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಮ್ ಮನೋಹರ್ ಬಂಧಿತ ಆರೋಪಿ.

ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ದೇವಸ್ಥಾನವೊಂದರ ಎದುರು ಆರೋಪಿ ತಳ್ಳು ಗಾಡಿಯಲ್ಲಿ ಪೂಜಾ ಸಾಮಗ್ರಿ ಮಾರಾಟ ಮಾಡುತ್ತಿದ್ದ. ಆ ಸ್ಥಳದ ಸಮೀಪವೇ ಬಾಲಕನ ಮನೆಯಿತ್ತು. ಬಾಲಕನನ್ನು ಪರಿಚಯಿಸಿಕೊಂಡಿದ್ದ ಆರೋಪಿ, ಪುಸಲಾಯಿಸಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಬಾಲಕ ಮನೆಗೆ ಬಂದು ವಿಷಯ ತಿಳಿಸಿದ್ದಾನೆ. ಬಳಿಕ ಮನೆಯವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪೋಕ್ಸೊ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಬಾಲಕಿ ಮೇಲೆ ಲೈಂಗಿಕ ಕಿರುಕುಳ: ವೃದ್ಧ ಸೆರೆ

ಆನೇಕಲ್ : ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಸ್ಥಳೀಯ ಕಲ್ಯಾಣ ಮಂಟಪವೊಂದರ 76 ವರ್ಷದ ವೃದ್ಧ ಸೆಕ್ಯೂರಿಟಿ ಗಾರ್ಡ್‌ನನ್ನು ಸೂರ್ಯಸಿಟಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ತಮಿಳುನಾಡಿನ ಸೇಲಂ ನಿವಾಸಿ ಮುತ್ತಪ್ಪ(76) ಎಂಬ ಆರೋಪಿ ವಿರುದ್ಧ ಪೋಕ್ಸೊ ಅಡಿ ಪ್ರಕರಣ ದಾಖಲಿಸಿದ್ದಾರೆ. ಸ್ಥಳೀಯ ಕಲ್ಯಾಣ ಮಂಟಪವೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮುತ್ತಪ್ಪ, ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಆರೋಪಿಯನ್ನು ಪತ್ತೆ ಹಚ್ಚಿದ ಸ್ಥಳೀಯರು ಆತನನ್ನು ಥಳಿಸಿದ್ದರು.

ಸಂತ್ರಸ್ತ ಬಾಲಕಿಯ ಸ್ನೇಹಿತೆಯ ತಾಯಿ ನೀಡಿದ ದೂರು ಆಧರಿಸಿ ಸೂರ್ಯಸಿಟಿ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ಪೋಕ್ಸೊ ಪ್ರಕರಣದ ಅಡಿ ಪ್ರಕರಣ ದಾಖಲಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ: ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಆರ್ ಮಾರುಕಟ್ಟೆ ಬಳಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಗಿದ್ದು ಈ ಸಂಬಂಧ ಎಸ್.ಜೆ. ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳುನಾಡು ಮೂಲದ ಮಹಿಳೆಯ ಮೇಲೆ ಇಬ್ಬರು ಅತ್ಯಾಚಾರ ಎಸಗಿ ಮೊಬೈಲ್ ಹಾಗೂ ಚಿನ್ನದ ಸರ ದೋಚಿದ್ದಾರೆ.

ಕೆ.ಆರ್. ಮಾರುಕಟ್ಟೆ ಗೋಡೌನ್ ಸ್ಟ್ರೀಟ್‌ನಲ್ಲಿ ಘಟನೆ ನಡೆದಿದೆ. ಮನೆಯಲ್ಲಿ ಪತಿ ಜತೆಗೆ ಗಲಾಟೆ ಮಾಡಿಕೊಂಡಿದ್ದ ಮಹಿಳೆ ತಮಿಳುನಾಡಿನಿಂದ ಬೆಂಗಳೂರಿಗೆ ಬಂದಿದ್ದರು. ಕೆಆರ್ ಮಾರುಕಟ್ಟೆಯಲ್ಲಿ ಬಸ್‌ಗಾಗಿ ಕಾಯುತ್ತಿದ್ದರು. ಆಗ ಇಬ್ಬರು ಆರೋಪಿಗಳು ಮಹಿಳೆಯನ್ನು ಎಳೆದೊಯ್ದು ಅತ್ಯಾಚಾರ ಎಸಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಸ್–ಟಿಪ್ಪರ್ ಡಿಕ್ಕಿ: 70ಕ್ಕೂ ಹೆಚ್ಚು ಮಂದಿಗೆ ಗಾಯ

ಮಾಗಡಿ: ಚೋಳನಾಯಕನಹಳ್ಳಿ ಬಳಿ ಸೋಮವಾರ ಸಂಜೆ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಜಲ್ಲಿ ತುಂಬಿದ ಟಿಪ್ಪರ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ 70ಕ್ಕೂ ಹೆಚ್ಚು ಬಸ್ ಪ್ರಯಾಣಿಕರು ಗಾಯಗೊಂಡಿದ್ದಾರೆ. ಬಸ್ ಮತ್ತು ಟಿಪ್ಪರ್ ಚಾಲಕರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಸ್ ಚಾಲಕ ದೇವರಾಜೇಗೌಡ ಅವರಿಗೆ ಹೊಟ್ಟೆ, ಕಾಲಿಗೆ ತೀವ್ರ ಗಾಯವಾಗಿದೆ. ಟಿಪ್ಪರ್ ಚಾಲಕ ಲಕ್ಷ್ಮಣ್‌ಗೆ ಗಂಭೀರ ಗಾಯವಾಗಿದ್ದು, ಇಬ್ಬರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಣ್ಣಪುಟ್ಟ ಗಾಯಗಳಾಗಿರುವ ಪ್ರಯಾಣಿಕರಿಗೆ ತಾವರೆಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ ಬೆಂಗಳೂರಿನಿಂದ ಮಾಗಡಿ ಮಾರ್ಗವಾಗಿ ಸಂಜೆ 5.30ರ ಸುಮಾರು ಕೊಪ್ಪ ಗ್ರಾಮಕ್ಕೆ ತೆರಳುತ್ತಿತ್ತು. ಚೋಳನಾಯಕನಹಳ್ಳಿ ಬಳಿ ಜಲ್ಲಿ ತುಂಬಿಕೊಂಡ ಟಿಪ್ಪರ್ ಮಾಗಡಿ- ಬೆಂಗಳೂರು ಮುಖ್ಯರಸ್ತೆಯಲ್ಲಿ ಹೊರಟಿತ್ತು. ಮುಖಾಮುಖಿ ಡಿಕ್ಕಿಯಿಂದ ಎರಡೂ ವಾಹನಗಳ ಮುಂಭಾಗ ಜಖಂಗೊಂಡಿವೆ.

ನುಜ್ಜುಗುಜ್ಜಾಗಿರುವ ಕಾರು

ಸರಣಿ ಅಪಘಾತ

ದಾಬಸ್ ಪೇಟೆ: ಇಲ್ಲಿನ ರಾಷ್ಟ್ರೀಯ ಹೆದ್ದಾರಿ 48ರ ಗುಂಡೇನಹಳ್ಳಿ ಬಳಿ ಸೋಮವಾರ ಬೆಳಿಗ್ಗೆ ಲಾರಿ, ಕಾರು ಮತ್ತು ಬಸ್ ನಡುವೆ ಸರಣಿ ಅಪಘಾತವಾಗಿದ್ದು ಕಾರು ನುಜ್ಜು ಗುಜ್ಜಾಗಿದೆ. ಕಾರಿನ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತುಮಕೂರಿನಿಂದ ಬೆಂಗಳೂರು ಕಡೆಗೆ ಚಲಿಸುತ್ತಿದ್ದ ಮಹಾರಾಷ್ಟ್ರದ ಲಾರಿಗೆ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ಕಾರಿನ ಹಿಂದೆ ಬರುತ್ತಿದ್ದ ಬಸ್ಸು ಕಾರಿಗೆ ಡಿಕ್ಕಿ ಹೊಡೆದಿದೆ. ಕಾರನ್ನು ಕ್ರೇನ್ ಮೂಲಕ ಹೊರಗೆ ತೆಗೆಯಲಾಯಿತು.

'ಕುಸಿದ ಕಾನೂನು ಸುವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಾನೂನು-ಸುವ್ಯವಸ್ಥೆ ಕುಸಿದಿದೆ. ಪೊಲೀಸರ ಮೇಲೆ ಜನರು ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ಆರ್. ಅಶೋಕ

'ಹೊನ್ನಾವರದಲ್ಲಿ ಗೋವಿನ ರುಂಡ ಕತ್ತರಿಸಿ, ಅಮಾನವೀಯವಾಗಿ ನಡೆದುಕೊಂಡಿದ್ದಾರೆ. ಬಿಜಾಪುರದಲ್ಲಿ ವ್ಯಕ್ತಿಯನ್ನು ಥಳಿಸಿದ್ದಾರೆ. ಈಚೆಗೆ ಚಾಮರಾಜಪೇಟೆಯಲ್ಲೂ ಹಸುವಿನ ಕೆಚ್ಚಲು ಕತ್ತರಿಸಿದ ಘಟನೆ ನಡೆದಿತ್ತು. ಆದರೂ, ಕಾನೂನು- ಸುವ್ಯವಸ್ಥೆ ಸರಿಯಾಗಿದೆ ಎಂಬಂತೆ ರಾಜ್ಯದ ಗೃಹ ಸಚಿವರು ಬಿಂಬಿಸುತ್ತಿದ್ದಾರೆ. ರಾಜ್ಯ ಸರ್ಕಾರ ಆರೋಪಿಗಳ ವಿಚಾರದಲ್ಲಿ ಮೃದು ಧೋರಣೆ ಅನುಸರಿಸುತ್ತಿದೆ. ಇದು ರಾಜ್ಯದ ಕೋಮು ಸೌಹಾರ್ದಕ್ಕೆ ಧಕ್ಕೆ ತರುತ್ತಿದೆ ಎಂದು ವಿಜಯೇಂದ್ರ ಆರೋಪಿಸಿದರು.

ವಿಜಯೇಂದ್ರ

'ವಿಜಯಪುರಲ್ಲಿ ಕಾರ್ಮಿಕರನ್ನು ರಸ್ತೆಯಲ್ಲಿಯೇ ಥಳಿಸಲಾಗಿದೆ. ದರೋಡೆಕೋರರಿಗೆ, ರೌಡಿಗಳಿಗೆ ಪೊಲೀಸರ ಬಗ್ಗೆ ಏನು ಸಂದೇಶ ಹೋಗುತ್ತಿದೆ? ಇಷ್ಟೆಲ್ಲಾ ಆದರೂ, ರಾಜ್ಯ ಸರ್ಕಾರ ಸುಮ್ಮನೆ ಕುಳಿತಿದೆ. ಗೃಹ ಇಲಾಖೆಯನ್ನು ಎಲ್ಲ ಸಚಿವರೂ ನಿಯಂತ್ರಿಸುತ್ತಿದ್ದಾರೆ. ಇದು ಕುಂಭಕರ್ಣ ಸರ್ಕಾರ ಎಂದು ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

'ಸೋನಿಯಾ, ರಾಹುಲ್ ನಕಲಿ'

'ದೇಶಕ್ಕೆ ಸ್ವಾತ್ರಂತ್ಯ ತಂದುಕೊಟ್ಟಿದ್ದು ಮಹಾತ್ಮ ಗಾಂಧಿ. ಅವರೇ ನಿಜವಾದ ಗಾಂಧಿ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಇವರೆಲ್ಲಾ ನಕಲಿ ಗಾಂಧಿಗಳು' ಎಂದು ಆರ್. ಅಶೋಕ ಟೀಕಿಸಿದರು.

'ಹೊನ್ನಾವರದಲ್ಲಿ ಗರ್ಭಿಣಿ ಹಸುವನ್ನು ಭೀಕರವಾಗಿ ಕೊಲ್ಲಲಾಗಿದೆ. ಕರ್ನಾಟಕದಲ್ಲಿ ಗೋವುಗಳಿಗೆ ರಕ್ಷಣೆ ಇಲ್ಲ. ಸರ್ಕಾರ ಸಮಾವೇಶ ಮಾಡುತ್ತಿದೆ. ಈಗಿನ ಗಾಂಧಿಗಳೆಲ್ಲ ಸ್ವಾತಂತ್ರ್ಯ ಹೋರಾಟ ಮಾಡಿದ್ದಾರಾ? ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರೂ ಬೆಳಗಾವಿ ಸಮಾವೇಶದಲ್ಲೇ ಎಲ್ಲರೂ ತಲ್ಲೀನರಾಗಿದ್ದಾರೆ' ಎಂದು ದೂರಿದರು.

'ಗೋಹತ್ಯೆ ಪ್ರಕರಣ ಹೆಚ್ಚಳ ಗಂಭೀರವಾಗಿ ಪರಿಗಣನೆ'

ಬೆಂಗಳೂರು: 'ರಾಜ್ಯದಲ್ಲಿ ಗೋಹತ್ಯೆ ಪ್ರಕರಣ ಹೆಚ್ಚಳವನ್ನು ಗಂಭೀರವಾಗಿ ಪರಿಗಣಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಇಂತಹ ಮನಃಸ್ಥಿತಿ ಇರುವವರನ್ನು ಗುರುತಿಸಬೇಕು. ಇದರ ಹಿಂದೆ ಯಾವುದಾದರೂ ಸಂಘಟನೆ ಇದೆಯೇ ಎಂದೂ ಪತ್ತೆ ಮಾಡುವಂತೆ ನಿರ್ದೇಶನ ನೀಡಿದ್ದೇನೆ' ಎಂದರು.

ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದ ಸಿಬ್ಬಂದಿ: ಸೇನೆ ನಿವೃತ್ತ ಅಧಿಕಾರಿಯ ರಕ್ಷಣೆ

ಮೆಟ್ರೊ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಸೇನೆಯ ನಿವೃತ್ತ ಅಧಿಕಾರಿಯೊಬ್ಬರು ಸೋಮವಾರ ಬೆಳಿಗ್ಗೆ ಮೆಟ್ರೊ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದು, ಅವರನ್ನು ಜಾಲಹಳ್ಳಿ ಮೆಟ್ರೊ ನಿಲ್ದಾಣದ ಸಿಬ್ಬಂದಿ ರಕ್ಷಿಸಿದರು.

ಉತ್ತರ ಪ್ರದೇಶದ ಅನಿಲ್ ಕುಮಾರ್ ಪಾಂಡೆ (50) ಅವರು ಆತ್ಮಹತ್ಯೆಗೆ ಯತ್ನಿಸಿದವರು. ಇವರು ಜಾಲಹಳ್ಳಿಯಲ್ಲಿ ನೆಲಸಿದ್ದಾರೆ.

ಮೆಟ್ರೊ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ಅನಿಲ್ ಕುಮಾರ್ ಪಾಂಡೆ ಅವರು ಪಾರಾಗಿದ್ದಾರೆ.

ಅನಿಲ್ ಕುಮಾರ್ ಅವರು ಮೆಟ್ರೊ ಹಳಿಗೆ ಹಾರುತ್ತಿದ್ದನ್ನು ಗಮನಿಸಿದ ಮೆಟ್ರೊ ಸಿಬ್ಬಂದಿ, ತಕ್ಷಣವೇ ಇಟಿಎಸ್ (ಎಮರ್ಜನ್ಸಿ ಟ್ರಿಪ್ ಸಿಸ್ಟಮ್) ಆಫ್ ಮಾಡಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಿದರು. ಇದೇ ಮಾರ್ಗವಾಗಿ ಬರುತ್ತಿದ್ದ ಮೆಟ್ರೊ ರೈಲು ಮಾರ್ಗ ಮಧ್ಯದಲ್ಲೇ ಸ್ಥಗಿತಗೊಂಡಿತ್ತು. ನಂತರ ಹಳಿಗೆ ಹಾರಿದ್ದ ಅನಿಲ್ ಕುಮಾರ್ ಅವರನ್ನು ರಕ್ಷಿಸಿದ ಸಿಬ್ಬಂದಿ, ಪೀಣ್ಯ ಪೊಲೀಸರ ವಶಕ್ಕೆ ಒಪ್ಪಿಸಿದರು. ಅವರನ್ನು ಪೊಲೀಸ್ ವಿಚಾರಣೆ ನಡೆಸಿ ಕುಟುಂಬದವರಿಗೆ ಒಪ್ಪಿಸಿದರು.

ಮೆಟ್ರೊ ಸಂಚಾರದಲ್ಲಿ ವ್ಯತ್ಯಯ: ಜಾಲಹಳ್ಳಿ ನಿಲ್ದಾಣದಲ್ಲಿ ನಡೆದ ಈ ಘಟನೆಯಿಂದ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಈ ಮಾರ್ಗದಲ್ಲಿ ಬೆಳಿಗ್ಗೆ 10.25ರಿಂದ 10.50ರ ವರೆಗೆ ಮಾದಾವರ ಮೆಟ್ರೊ ನಿಲ್ದಾಣದ ಬದಲಾಗಿ ಯಶವಂತಪುರ–ರೇಷ್ಮೆ ಸಂಸ್ಥೆಯ ನಡುವೆ ಸಣ್ಣ ಲೂಪ್‌ನಲ್ಲಿ ಮೆಟ್ರೊ ರೈಲುಗಳು ಸಂಚಾರ ನಡೆಸಿದವು. 10.50ರ ಬಳಿಕ ಮೆಟ್ರೊ ಸಂಚಾರ ಯಥಾಸ್ಥಿತಿಗೆ ಮರಳಿತು.

ಎರಡು ಬಾರಿ ಯತ್ನ

ಅನಿಲ್ ಕುಮಾರ್ ಪಾಂಡೆ ಅವರು ಮಾನಸಿಕವಾಗಿ ನೊಂದಿದ್ದಾರೆ. ಹತ್ತು ದಿನಗಳ ಹಿಂದೆ ಬ್ಲೇಡ್‌ನಿಂದ ಕೈ ಕೊಯ್ದುಕೊಂಡು ಅಸ್ವಸ್ಥರಾಗಿದ್ದರು. ನಂತರ, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದರು. ಈಗ ಎರಡನೇ ಬಾರಿ ಆತ್ಮಹತ್ಯೆ ಯತ್ನಿಸಿದ್ದಾರೆ ಎಂದು ಗೊತ್ತಾಗಿದೆ.

ಒಂದು ವರ್ಷದ ಘಟನೆಗಳು

2024 ಜನವರಿ 1: ಇಂದಿರಾನಗರ ಮೆಟ್ರೊ ನಿಲ್ದಾಣದಲ್ಲಿ ಮೊಬೈಲ್ ಕೆಳಗೆ ಬಿದ್ದಿದ್ದರಿಂದ ಅದನ್ನು ಎತ್ತಿಕೊಳ್ಳಲು ಮಹಿಳೆಯೊಬ್ಬರು ಹಳಿಗೆ ಇಳಿದಿದ್ದರು. ಅವರನ್ನು ಸಿಬ್ಬಂದಿ ರಕ್ಷಿಸಿದ್ದರು

ಜ.5ರಂದು ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಗಂಭೀರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಚೇತರಿಸಿಕೊಂಡಿದ್ದರು

ಮಾರ್ಚ್ 21: ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ವಿದ್ಯಾರ್ಥಿ ಧ್ರುವ್ ಕಕ್ಕರ್ ಹಳಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು

ಜೂನ್ 10: ಹೊಸಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಯುವಕ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದರು, ಅವರನ್ನು ಮೆಟ್ರೊ ನಿಲ್ದಾಣದ ಸಿಬ್ಬಂದಿ ರಕ್ಷಿಸಿದ್ದರು

ಆಗಸ್ಟ್ 1: ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ನಾಲ್ಕು ವರ್ಷದ ಬಾಲಕನೊಬ್ಬ ಆಯತಪ್ಪಿ ಹಳಿಗೆ ಬಿದ್ದಿದ್ದು, ಬಿಎಂಆರ್‌ಸಿಎಲ್ ಸಿಬ್ಬಂದಿ ರಕ್ಷಿಸಿದ್ದರು

ಆಗಸ್ಟ್ 3: ದೊಡ್ಡಕಲ್ಲಸಂದ್ರ ನಿಲ್ದಾಣದಲ್ಲಿ ಬನಶಂಕರಿ ಕೆ.ಎಸ್.ಬಡಾವಣೆ ನಿವಾಸಿ ನವೀನ್ ಕುಮಾರ್ ಅರೋರ ಹಳಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು

ಆಗಸ್ಟ್ 19: ಮೆಜೆಸ್ಟಿಕ್ ನಿಲ್ದಾಣದಲ್ಲಿ ಅಂಧ ಪ್ರಯಾಣಿಕರೊಬ್ಬರು ಆಯತಪ್ಪಿ ಹಳಿ ಕೆಳಗೆ ಬಿದ್ದಿದ್ದರು, ಸಿಬ್ಬಂದಿ ರಕ್ಷಿಸಿದ್ದರು

ನಿಯಮ ಉಲ್ಲಂಘನೆ ಆಗಿಲ್ಲ: ಅರಣ್ಯ ಇಲಾಖೆ

'ಕಾಂತಾರ ಚಿತ್ರತಂಡದಿಂದ ಸ್ಫೋಟ'

ಪ್ರಜಾವಾಣಿ ವಾರ್ತೆ

ಹಾಸನ: 'ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆರೂರು ಅರಣ್ಯ ಪ್ರದೇಶದಲ್ಲಿ ಚಿತ್ರೀಕರಣ ನಡೆಸುತ್ತಿ ರುವ 'ಕಾಂತಾರ ಪ್ರೀಕ್ವೆಲ್' ಸಿನಿಮಾ ತಂಡವು ಅರಣ್ಯ ನಿಯಮ ಉಲ್ಲಂಘಿಸಿದ್ದು, ಬೆಂಕಿ ಹಚ್ಚಲಾಗಿದೆ ಮತ್ತು ಪಟಾಕಿ ಸಿಡಿಸಲಾಗಿದೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಆದರೆ, ಅರಣ್ಯಾಧಿಕಾರಿಗಳು ಆರೋಪವನ್ನು ತಳ್ಳಿ ಹಾಕಿದ್ದಾರೆ.

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸುತ್ತಿರುವ ಚಿತ್ರದ ತಂಡ, ಅನುಮತಿ ಪಡೆಯದೇ ಜ.2ರಂದು ಅರಣ್ಯ ಪ್ರದೇಶದಲ್ಲಿ ಸಾಮಗ್ರಿಗಳನ್ನು ತಂದಿಟ್ಟಿತ್ತು. ಪರಿಶೀಲಿಸಿದ್ದ ಅಧಿಕಾರಿಗಳು ಜ. 4ರಂದು ₹50 ಸಾವಿರ ದಂಡ ವಿಧಿಸಿದ್ದು, ಜ. 5ರಿಂದ 25ರವರೆಗೆ ಚಿತ್ರೀಕರಣ ನಡೆಸಲು ಅನುಮತಿ ನೀಡಿದ್ದರು.

'ಚಿತ್ರೀಕರಣದ ವೇಳೆ ಪಟಾಕಿ ಸಿಡಿಸಿ, ಬೆಂಕಿ ಹಚ್ಚಿರುವುದರಿಂದ ಕಾಡುಪ್ರಾಣಿಗಳು ಗ್ರಾಮಗಳಿಗೆ ಬರುತ್ತಿವೆ. ಅದನ್ನು ಪ್ರಶ್ನಿಸಿದವರ ಮೇಲೆ ತಂಡ ಹಲ್ಲೆ ಮಾಡಿದೆ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

'ಚಿತ್ರೀಕರಣಕ್ಕೆ ಅನುಮತಿ ಪಡೆದಿರುವ ಗೋಮಾಳ ಜಾಗದಲ್ಲಿ ಸ್ವಲ್ಪ ಬೆಂಕಿ ಹಾಕಲಾಗಿತ್ತು. ಆದರೆ, ಡೀಮ್ಡ್ ಅರಣ್ಯ ಪ್ರದೇಶದಲ್ಲಿ ನಿಯಮ ಉಲ್ಲಂಘನೆಯಾಗಿಲ್ಲ' ಎಂದು ಯಸಳೂರು ಉಪ ವಲಯ ಅರಣ್ಯಾಧಿಕಾರಿ ಸೋಮಶೇಖರ್ ತಿಳಿಸಿದ್ದಾರೆ.

ಗೋಮಾಳ ಜಾಗದಲ್ಲಿ ಬೆಂಕಿ ಹಾಕಲಾಗಿತ್ತು

ಈ ಕುರಿತು ಪ್ರತಿಕ್ರಿಯಿಸಿರುವ ಡಿಸಿಎಫ್ ಡಾ.ಸೌರಭ್ ಕುಮಾರ್, 'ತಂಡವು ಅನುಮತಿ ಪಡೆದೇ ಚಿತ್ರೀಕರಣ ನಡೆಸುತ್ತಿದೆ. ನಿಯಮ ಉಲ್ಲಂಘನೆಯ ಕುರಿತು ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದು, ಅವರ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

ಸ್ಫೋಟಕ ಬಳಸಿದ್ದರೆ ಅನುಮತಿ ರದ್ದು: ಖಂಡ್ರೆ

ಬೆಂಗಳೂರು: 'ಕಾಂತಾರ– ಪ್ರೀಕ್ವೆಲ್' ಚಿತ್ರತಂಡ ಗವಿಬೆಟ್ಟ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಚಿತ್ರೀಕರಣದ ಸಂದರ್ಭದಲ್ಲಿ ಸ್ಫೋಟಕಗಳನ್ನು ಬಳಸಿದ್ದರೆ, ಚಿತ್ರೀಕರಣವನ್ನು ಸ್ಥಗಿತಗೊಳಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಪ್ರದೇಶದಲ್ಲಿ 23 ದಿನಗಳ ಚಿತ್ರೀಕರಣಕ್ಕೆ ಷರತ್ತುಬದ್ಧ ಅನುಮತಿ ನೀಡಲಾಗಿತ್ತು. ಚಿತ್ರೀಕರಣದ ವೇಳೆ ಸ್ಫೋಟಕಗಳನ್ನು ಬಳಸಿದ್ದರಿಂದ ವನ್ಯಜೀವಿಗಳು ವಿಚಲಿತವಾಗಿರುವ ವಿಚಾರ ಮಾಧ್ಯಮಗಳಿಂದ ಗೊತ್ತಾಗಿದೆ. ಅದು ನಿಜವೇ ಆಗಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಶಾ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಸಂಸತ್ ಅಧಿವೇಶನದಲ್ಲಿ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಸಚಿವ ಅಮಿತ್ ಶಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅಮಿತ್ ಶಾ ಹೇಳಿಕೆ ಖಂಡಿಸಿ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಉರಿಲಿಂಗಪೆದ್ದಿಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿ, 'ಜ.26ರ ಒಳಗಾಗಿ ಅಮಿತ್ ಶಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ರಾಜೀನಾಮೆ ನೀಡದಿದ್ದರೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಚೇರಿಗಳ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು.

'ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದಿಂದ ಅಮಿತ್ ಶಾ ಅವರಿಗೆ ಗೃಹ ಮಂತ್ರಿಯಾಗುವ ಅವಕಾಶ ಲಭಿಸಿದೆ. ಆದರೆ, ಅಮಿತ್ ಶಾ ಅವರು ಅಂಬೇಡ್ಕರ್ ಅವರ ಕುರಿತು ಅವಹೇಳನಕಾರಿ ಆಗಿ ಮಾತನಾಡಿದ್ದಾರೆ. ಶಾ ಹೇಳಿಕೆ ಖಂಡಿಸಿ ಪಕ್ಷಾತೀತವಾಗಿ ಹೋರಾಟಗಳು ನಡೆಯಬೇಕು. ಸಮುದಾಯದ ಜನರಲ್ಲೂ ಜಾಗೃತಿ ಮೂಡಬೇಕು' ಎಂದು ಕರೆ ನೀಡಿದರು.

ಮುಖಂಡರಾದ ಬಿ.ಗೋಪಾಲ್, ಹೆಣ್ಣೂರು ಶ್ರೀನಿವಾಸ್, ಬಸವರಾಜ್ ಕೌತಾಳ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೇಂದ್ರ ಸಚಿವ ಅಮಿತ್ ಶಾ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ



ಮೆಟ್ರೊ ಹಳಿಗಳ ಕೆಳಗೆ ಬೆಳೆಯಲಿದೆ ಬಿದಿರು • ಪಾಟರಿ ಟೌನ್‌ನಲ್ಲಿ ನಿಲ್ದಾಣ ಒಳವಿನ್ಯಾಸಕ್ಕೂ ಬಿದಿರು ಬಳಕೆ

ಗರಿಗೆದರಿದ ಬಿದಿರು ನಗರ ಕನಸು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹುಟ್ಟುತ್ತಾ ಹುಲ್ಲಾದ, ಬೆಳೆಯುತ್ತಾ ಮರವಾದ, ಕಜ್ಜಾಯದ ಬುಟ್ಟಿಯಾದ, ಹತ್ತುವವರಿಗೆ ಏಣಿಯಾದ, ಸತ್ತವರಿಗೆ ಚಟ್ಟವಾದ ಬಿದಿರನ್ನು ಬೆಂಗಳೂರಿನಲ್ಲಿಯೂ ನಳನಳಿಸುವಂತೆ ಮಾಡುವ ಕನಸು ಗರಿಗೆದರಿದೆ. ಬಿದಿರು ಬೆಳೆಸುವ ಮತ್ತು ಬಳಸುವ ಪ್ರಕ್ರಿಯೆಗಳು ಹೆಚ್ಚಾಗುತ್ತಿವೆ.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್ ಅನ್ನು ಬಿದಿರಿನಿಂದ ಆಕರ್ಷಕವಾಗಿ ಒಳವಿನ್ಯಾಸ ಮಾಡಿರುವುದು ವಿಶ್ವಮಟ್ಟದಲ್ಲಿ ಗಮನಸೆಳೆಯಿತು. ಅತಿ ಭದ್ರತೆಯ, ಅತಿ ಸೂಕ್ಷ್ಮ ಪ್ರದೇಶವಾಗಿರುವ ವಿಮಾನ ನಿಲ್ದಾಣದಲ್ಲಿಯೇ ಬಿದಿರು ಬಳಸಬಹುದಾದರೆ, ಮೆಟ್ರೊ ನಿಲ್ದಾಣಗಳಲ್ಲಿ, ಕಚೇರಿಗಳಲ್ಲಿ ಯಾಕೆ ಬಳಸಬಾರದು ಎಂಬ ಪ್ರಶ್ನೆ ಯನ್ನು ಬಿದಿರು ಸೊಸೈಟಿ ಆಫ್ ಇಂಡಿಯಾ (ಬಿಎಸ್‌ಐ), ಬಿಬಿಎಂಪಿ ಮತ್ತು ಬಿಎಂಆರ್‌ಸಿಎಲ್ ಎದುರು ಇಟ್ಟಿತು. ಬಿಎಸ್‌ಐ ಮಾತಿಗೆ ಎರಡೂ ಸಂಸ್ಥೆಗಳು ಸಕಾರಾತ್ಮಕವಾಗಿ ಸ್ಪಂದಿಸಿದವು. ಈಗ 'ಮೆಟ್ರೊ ವ್ಯಾಪ್ತಿ'ಯಲ್ಲಿ ಬಿದಿರು ನೆಡುವ, ಬಿದಿರಿನಿಂದ ಬಿಬಿಎಂಪಿ ಕಚೇರಿ, ಮೆಟ್ರೊ ನಿಲ್ದಾಣಗಳನ್ನು ವಿನ್ಯಾಸಗೊಳಿಸುವ ಯೋಜನೆಗಳು ರೂಪುಗೊಂಡಿವೆ.

ಪ್ರಾಥಮಿಕವಾಗಿ, ಬಿಬಿಎಂಪಿಯ ಅರಣ್ಯ ವಿಭಾಗದ ಕಚೇರಿಯ ಒಳಾಂಗಣ ವಿನ್ಯಾಸವನ್ನು ಬಿದಿರಿನಿಂದ ಮಾಡಲು ಯೋಜಿಸಲಾಗಿದೆ. 'ನಮ್ಮ ಮೆಟ್ರೊ'ದ ಪಾಟರಿ ಟೌನ್ ಮತ್ತು ಗೊಟ್ಟಿಗೆರೆ ನಿಲ್ದಾಣಗಳನ್ನು ಬಿದಿರಿನಿಂದ ವಿನ್ಯಾಸಗೊಳಿಸಬೇಕು ಎಂದು ಬಿದಿರು ಸೊಸೈಟಿ ಬೇಡಿಕೆ ಇಟ್ಟಿದೆ. ಮೊದಲ ಹಂತದಲ್ಲಿ ಬಿಎಂಆರ್‌ಸಿಎಲ್, ಪಾಟರಿ ಟೌನ್ ಮೆಟ್ರೊ ನಿಲ್ದಾಣವನ್ನು ಬಿದಿರಿನ ಅಲಂಕಾರದೊಂದಿಗೆ ನಿರ್ಮಿಸಲು ನಿರ್ಧರಿಸಿದೆ.

ಮೆಟ್ರೊ ಮಾರ್ಗದಲ್ಲಿ ಅವಕಾಶ ಇರುವಲ್ಲೆಲ್ಲ ಬಿದಿರು ಬೆಳೆಯಲು ಬಿದಿರು ಸೊಸೈಟಿ ಕೇಳಿಕೊಂಡಿದೆ. ಕೇಂದ್ರೀಯ ರೇಷ್ಮೆ ಮಂಡಳಿಯಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದಲ್ಲಿ ಮಾರತ್‌ಹಳ್ಳಿಯಲ್ಲಿ ಎರಡು ಕಿಲೋ ಮೀಟರ್‌ನಷ್ಟು ಉದ್ದಕ್ಕೆ ಮೆಟ್ರೊ ಮಾರ್ಗದ ಅಡಿಯಲ್ಲಿ ಬಿದಿರು ಬೆಳೆಸುವ ಯೋಜನೆ ರೂಪಿಸಲಾಗಿದೆ. ಇಲ್ಲಿ 650 ಬಿದಿರಿನ ಗಿಡಗಳು ಬೆಳೆಯಲಿವೆ. ಬನ್ನೇರುಘಟ್ಟ ರಸ್ತೆಯಲ್ಲಿ ಜಯದೇವ ಆಸ್ಪತ್ರೆಯಿಂದ ಮುಂದಕ್ಕೆ ಮೀನಾಕ್ಷಿ ದೇವಸ್ಥಾನದವರೆಗೆ ಮೆಟ್ರೊ ಮಾರ್ಗದ ಅಡಿಯಲ್ಲಿ ಬಿದಿರು ಬೆಳೆಸುವ ಪ್ರಸ್ತಾವ ಕೂಡ ಇದೆ.

30 ಸಾವಿರ ಗಿಡ: ನಗರದ ಪಾರ್ಕ್‌ಗಳಲ್ಲಿ, ಕೆರೆಗಳ ಸುತ್ತ ಇರುವ ನಡಿಗೆ ಪಥದ ಇಕ್ಕೆಲಗಳಲ್ಲಿ ಮುಂದಿನ ಮಳೆಗಾಲದಲ್ಲಿ 30 ಸಾವಿರ ಬಿದಿರು ಗಿಡ ನೆಡುವ ಯೋಜನೆಯನ್ನು ಬಿದಿರು ಸೊಸೈಟಿ ಹಾಕಿಕೊಂಡಿದೆ. ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ವಿದ್ಯಾರ್ಥಿಗಳು, ಗ್ರೀನ್ ಸ್ಕೂಲ್‌ನ ವಿದ್ಯಾರ್ಥಿಗಳು ಗಿಡಗಳನ್ನು ನೆಡಲಿದ್ದಾರೆ ಎಂದು ಸೊಸೈಟಿ ಅಧ್ಯಕ್ಷ ಪುನತಿ ಶ್ರೀಧರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನಗರದ ಕೆ.ಆರ್‌. ರಸ್ತೆಯಲ್ಲಿ ಬಿದಿರಿನ ಪರಿಕರಗಳ ಮಾರಾಟದಲ್ಲಿ ನಿರತರಾಗಿದ್ದ ಮಹಿಳೆ
ಪ್ರಜಾವಾಣಿ ಚಿತ್ರ: ರಂಜು ಪಿ

ನಗರದಲ್ಲಿ ಯಾವ ಬಿದಿರು?

ಮುಳ್ಳುಬಿದಿರು ಉಳಿದವುಗಳಿಗಿಂತ ಬಲಿಷ್ಠವಾಗಿದೆ ಮತ್ತು ಎತ್ತರಕ್ಕೆ ಬೆಳೆಯುತ್ತದೆ. ಆದರೆ, ಅದನ್ನು ನೆಟ್ಟು ಬೆಳೆಸುವುದು ಕಷ್ಟ. ಹಾಗಾಗಿ ನಗರಗಳಲ್ಲಿ ಮುಳ್ಳು ಬಿದಿರು ಬೆಳೆಸುವುದಿಲ್ಲ. 6 ರಿಂದ 7 ಅಡಿ ಹಾಗೂ 15ರಿಂದ 20 ಅಡಿ ಬೆಳೆಯುವ ಬಿದಿರು ಪ್ರಭೇದಗಳನ್ನು ಮಾತ್ರ ಮೆಟ್ರೊ ಎತ್ತರಿಸಿದ ಮಾರ್ಗಗಳ ಅಡಿಯಲ್ಲಿ ಬೆಳೆಸಲಾಗುತ್ತದೆ.

ಪರಿಸರಕ್ಕೆ ಪೂರಕವಾದ ಬಿದಿರು, ಅಂದವನ್ನು ಹೆಚ್ಚಿಸುವ ಬಿದಿರು ನಗರದಲ್ಲಿ ಹೆಚ್ಚುತ್ತಿರುವುದು, ಮನೆಗಳ ಬಳಕೆಯಲ್ಲಿಯೂ ಉಪಯೋಗವಾಗುತ್ತಿರುವುದು ಉತ್ತಮ ಬೆಳವಣಿಗೆ. ಕಟ್ಟಡ ನಿರ್ಮಾಣ ಮಾಡುವಾಗ ಅಟ್ಟಣಿಗೆಯಾಗಿ ಬಿದಿರನ್ನು ಬಳಕೆ ಮಾಡುವುದನ್ನು ಹೆಚ್ಚಿಸಬೇಕು. ಚರಂಡಿ ನಿರ್ಮಾಣದ ವೇಳೆ ಸಿಮೆಂಟ್ ಹಾಕುವಾಗ ಬಿದಿರು ಬಳಕೆ ಮಾಡಬಹುದು. ನಿರ್ಮಾಣ ಕಾರ್ಯಗಳಲ್ಲಿ ಬಿದಿರು ಬಳಕೆಗೆ ಹೆಚ್ಚಿನ ಅವಕಾಶವಿದೆ ಎಂದು ಬಿದಿರು ಪ್ರೇಮಿ ಎಲೆಕ್ಟ್ರಾನಿಕ್ ಸಿಟಿಯ ಸೃಜನ್ ಪಿ. ತಿಳಿಸಿದರು.

550	136	40
ಜಗತ್ತಿನಲ್ಲಿರುವ ಬಿದಿರು ಪ್ರಭೇದಗಳು	ಭಾರತದಲ್ಲಿರುವ ಬಿದಿರು ಪ್ರಭೇದಗಳು	ಕರ್ನಾಟಕದಲ್ಲಿರುವ ಬಿದಿರು ಪ್ರಭೇದಗಳು

ಬೆಂಗಳೂರು ವಿಮಾನ ನಿಲ್ದಾಣದ ಟರ್ಮಿನಲ್–2ರ ಒಳಾಂಗಣ ಬಿದಿರಿನಿಂದ ಅಲಂಕಾರಗೊಂಡಿರುವುದು ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಬಿದಿರಿನ ಬೈಸಿಕಲ್

ವರ್ತೂರಿನ ದಿ ಗ್ರೀನ್ ಸ್ಕೂಲ್-ಬೆಂಗಳೂರು (ಟಿಜಿಎಸ್- ಬಿ) ಶಾಲೆ ತನ್ನ 'ಬ್ಯಾಂಬೂ 4 ಬೆಂಗಳೂರು' ಕಾರ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳಿಗಾಗಿ ಬಿದಿರಿನ ಬೈಸಿಕಲ್‌ಗಳನ್ನು ತಯಾರಿಸಿದೆ. ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯವರೇ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು.

ಬಿದಿರಿನ ಬೈಸಿಕಲ್‌ಗಳು 20 ರಿಂದ 30 ವರ್ಷಗಳವರೆಗೆ ಬಾಳಿಕೆ ಬರುತ್ತವೆ. 'ಜೀರೊ ಕಾರ್ಬನ್(ತಟಸ್ಥ ಇಂಗಾಲ)' ಶಾಲೆಯಾಗಿ ಮಾಡುವ ಯೋಜನೆಯ ಭಾಗವಾಗಿ ಪ್ರಾಚಾರ್ಯೆ ಉಷಾ ಅಯ್ಯರ್ ನೇತೃತ್ವದಲ್ಲಿ ಆರು ಬೈಸಿಕಲ್‌ಗಳನ್ನು ತಯಾರಿಸಲಾಗಿದೆ.

ಕರಕುಶಲ ವಸ್ತುಗಳಿಗೆ ಬೇಡಿಕೆ

ಪೀಠೋಪಕರಣಗಳು, ನೆಲಹಾಸು, ಗೋಡೆ ಅಲಂಕಾರ ವಸ್ತುಗಳು, ಗಿಫ್ಟ್‌ಗಳು, ದೀಪದ ಕಂಬ, ಏಣಿ, ತೊಟ್ಟಿಲು, ಕೊಳಲು, ಕುರ್ಚಿ, ಮೇಜು, ಚಾಪೆ, ಬುಟ್ಟಿ, ಶಾಮಿಯಾನ, ಮೊರ, ಮಂಕರಿ, ಬೀಸಣಿಗೆ ಸಹಿತ ಬಿದಿರಿನ ಅನೇಕ ವಸ್ತುಗಳಿಗೆ ನಗರದಲ್ಲಿ ಬೇಡಿಕೆ ಹೆಚ್ಚಿದೆ.

ಇದನ್ನು ಗಮನದಲ್ಲಿಟ್ಟುಕೊಂಡು 'ಹಸಿರು ಕಟ್ಟಡ ಸಾಮಗ್ರಿ ಮತ್ತು ತಂತ್ರಜ್ಞಾನ ಕೇಂದ್ರ-ಸಿಜಿಬಿಎಂಟಿ'ಯು ಬಿದಿರಿನಿಂದ ಕರಕುಶಲ ಮತ್ತು ನಿರ್ಮಾಣ ಸಾಮಗ್ರಿಗಳ ವಿನ್ಯಾಸ ಕಾರ್ಯಾಗಾರವನ್ನು ಆಗಾಗ ನಡೆಸಿ ಕೌಶಲ ಹೆಚ್ಚಿಸುವ ಕೆಲಸ ಮಾಡುತ್ತಿದೆ.

₹6 ಕೋಟಿ ವೆಚ್ಚದಲ್ಲಿ ನಿರ್ಮಾಣ

₹ 6 ಕೋಟಿ ವೆಚ್ಚದಲ್ಲಿ ನಮ್ಮ ಮೆಟ್ರೊ ಕಾಳೇನ ಅಗ್ರಹಾರ–ನಾಗವಾರ (ಗುಲಾಬಿ) ಮಾರ್ಗದಲ್ಲಿ ಬಂಬೂಬಜಾರ್ ಸಮೀಪದ ನಿಲ್ದಾಣವನ್ನು (ಪಾಟರಿ ಟೌನ್) ಬಿದಿರಿನ ಅಲಂಕಾರದಲ್ಲಿ ನಿರ್ಮಿಸಲಿದೆ. ಇದು ದೇಶದ ಮೊದಲ ಬಿದಿರು ಅಲಂಕಾರದ ಮೆಟ್ರೊ ನಿಲ್ದಾಣ ಎಂಬ ಹಿರಿಮೆಗೆ ಪಾತ್ರವಾಗಲಿದೆ.

'ಬಿದಿರು ಎಷ್ಟು ಬೆಳೆಯುತ್ತದೆ? ಮೆಟ್ರೊದ ಹಳಿಗಳನ್ನು ಮೀರಿ ಬೆಳೆಯುತ್ತದೆಯೇ ? ಎಂಬುದನ್ನೆಲ್ಲ ಚರ್ಚೆ ನಡೆಸಿ, ಗಿಡ್ಡ ಬಿದಿರು ಬೆಳೆಸಲು ಅವಕಾಶ ನೀಡಲಾಗುವುದು. ಪಾಟರಿ ಟೌನ್ ಮೆಟ್ರೊ ನಿಲ್ದಾಣವನ್ನು ಬೆಂಕಿ ನಿರೋಧಕ ಬಿದಿರು ಬಳಸಿ ವಿನ್ಯಾಸಗೊಳಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಸ್. ಮಹೇಶ್ವರ ರಾವ್ ತಿಳಿಸಿದರು.

'ನಮ್ಮ ಮೆಟ್ರೊ ಮತ್ತು ಮುಖ್ಯ ವಾಸ್ತುಶಿಲ್ಪಿಗಳೊಂದಿಗೆ ಸಮಾಲೋಚನೆ ನಡೆಯುತ್ತಿದೆ. ಅವರು ವಿನ್ಯಾಸ ಅಂತಿಮಗೊಳಿಸಲಿದ್ದಾರೆ' ಎಂದು ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಮುಖ್ಯ ಎಂಜಿನಿಯರ್ ದಯಾನಂದ ಶೆಟ್ಟಿ ಮಾಹಿತಿ ನೀಡಿದರು.

ಉತ್ತಮ ಪ್ರಭೇದ; ಬಾಳಿಕೆ ದೀರ್ಘ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ ಬಿದಿರು ಬಳಸಿ ಒಳಾಂಗಣ ವಿನ್ಯಾಸವನ್ನು ಆಕರ್ಷಕಗೊಳಿಸಲಾಗಿದೆ. ದೆಹಲಿಯ ನೂತನ ಸಂಸತ್ತಿನ ಗೋಡೆ ಮತ್ತು ನೆಲಹಾಸು ಗಳಿಗೆ ಬಿದಿರು ಬಳಸಲಾಗಿದೆ. ಉತ್ತಮ ಪ್ರಭೇದವಾದ 'ತ್ರಿಪುರನ್ ಬಂಬುಸಾ ತುಲ್ಡಾ' ಬಿದಿರು ಬಳಸಿದರೆ ದೀರ್ಘ ಕಾಲ ಬಾಳಿಕೆ ಬರುತ್ತದೆ ಎಂದು ಬಿಎಸ್‌ಐ ಅಧ್ಯಕ್ಷ ಪುನತಿ ಶ್ರೀಧರ್ ತಿಳಿಸಿದರು.

ಯಾವುದೇ ಬಿದಿರು ಬಳಕೆ ಮಾಡುವ ಮೊದಲು ರಾಸಾಯನಿಕ ಬಳಸಿ ಬಿದಿರು ಸ್ಟಾರ್‌ಗಳನ್ನು ತೆಗೆದು ಹುಳ ಬೀಳದಂತೆ ಮಾಡಿದರೆ 40–50 ವರ್ಷ ಹಾಳಾಗುವುದಿಲ್ಲ ಎಂದು ವಿವರ ನೀಡಿದರು.

ಬಿದಿರು ಬೆಳೆದರೆ, ಮರಗಳಿಗಿಂತ ಹೆಚ್ಚು ಆಮ್ಲಜನಕವನ್ನು ವಾತಾವರಣಕ್ಕೆ ಬಿಡುತ್ತದೆ. ತುಂಬಾ ಕಡಿಮೆ ನೀರಿನಲ್ಲಿ ಬಿದಿರು ಬೆಳೆಸಬಹುದು. ಹಾಗೆಯೇ, ಬಿದಿರು, ಮಳೆ ನೀರನ್ನು ಭೂಮಿಗೆ ಇಂಗಿಸುತ್ತದೆ ಎಂದು ವಿವರಿಸಿದರು.

ವಾಷಿಂಗ್ಟನ್‌ನ ಸಂಸತ್ ಸಭಾಂಗಣದಲ್ಲಿ ಡೊನಾಲ್ಡ್ ಟ್ರಂಪ್ ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾತನಾಡಿದರು– ಎಪಿ/ಪಿಟಿಐ ಚಿತ್ರ

ಟ್ರಂಪ್ ಎರಡನೇ ಅವಧಿ ಶುರು

ಒಂದನೇ ಪುಟದಿಂದ...

'ಮೊದಲು ನಮ್ಮ ದಕ್ಷಿಣದ ಗಡಿಯಲ್ಲಿ ನಾನು ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸುತ್ತೇನೆ. ಅಮೆರಿಕಕ್ಕೆ ಎಲ್ಲ ರೀತಿಯ ಅಕ್ರಮ ಪ್ರವೇಶವನ್ನು ನಿಲ್ಲಿಸಲಾಗುವುದು. ನಮ್ಮ ದೇಶದಲ್ಲಿರುವ ಲಕ್ಷಾಂತರ 'ಕ್ರಿಮಿನಲ್' ವಿದೇಶಿಯರನ್ನು ಅವರ ದೇಶಕ್ಕೆ ಕಳುಹಿಸುವ ಪ್ರಕ್ರಿಯೆ ಪ್ರಾರಂಭಿಸುತ್ತೇವೆ' ಎಂದು ಹೇಳಿದರು.

'ನಮ್ಮ ದೇಶವನ್ನು ಅಕ್ರಮಿಸಲು ನಡೆಯುತ್ತಿರುವ ಪ್ರಯತ್ನ ತಡೆಯಲು ದಕ್ಷಿಣದ ಗಡಿಗೆ ಸೈನ್ಯವನ್ನು ಕಳುಹಿಸುತ್ತೇನೆ' ಎಂದರು. ಟ್ರಂಪ್ ಅವರಿಗೂ ಮುನ್ನ ಜೆ.ಡಿ. ವೇನ್ಸ್ ಅವರು ಉಪಾಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಅವರು ಪ್ರಮಾಣವಚನ ಬೋಧಿಸಿದರು.

ಸಂಪ್ರದಾಯದ ಪ್ರಕಾರ ಅಮೆರಿಕದ ಅಧ್ಯಕ್ಷರ ಪ್ರಮಾಣವಚನ ಸಮಾರಂಭವು ಸಂಸತ್‌ನ ಮುಂಭಾಗದಲ್ಲಿ ನಡೆಯುತ್ತದೆ. ಆದರೆ ತೀವ್ರ ಚಳಿಯ ಕಾರಣ ಟ್ರಂಪ್ ಅವರ ಪ್ರಮಾಣ ವಚನ ಸಮಾರಂಭವು ಒಳಾಂಗಣದಲ್ಲಿ ನೆರವೇರಿತು. ಕಳೆದ ವರ್ಷ ನವೆಂಬರ್ 5ರಂದು ನಡೆದ ನಡೆದ ಚುನಾವಣೆಯಲ್ಲಿ 78 ವರ್ಷದ ಟ್ರಂಪ್ ಅವರು ಡೆಮಾಕ್ರಟಿಕ್ ಪಕ್ಷದ ಎದುರಾಳಿ ಕಮಲಾ ಹ್ಯಾರಿಸ್ ವಿರುದ್ಧ ಅದ್ಭುತ ವಿಜಯ ಸಾಧಿಸಿದ್ದರು. ಟ್ರಂಪ್ ಅವರ ಈ ಗೆಲುವನ್ನು ಅಮೆರಿಕದ ಇತಿಹಾಸದಲ್ಲಿ ಅತಿದೊಡ್ಡ ರಾಜಕೀಯ ಪುನರಾಗಮನವೆಂದು ವಿಶ್ಲೇಷಿಸಲಾಗಿತ್ತು.

ವಿವಿಧ ದೇಶಗಳ ಗಣ್ಯರು ಭಾಗಿ: ವಿಶ್ವದ ಹಲವು ದೇಶಗಳ ನಾಯಕರು ಮತ್ತು ಗಣ್ಯರು, ಟ್ರಂಪ್ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಾಕ್ಷಿಯಾದರು. ಪ್ರಧಾನಿ ನರೇಂದ್ರ ಮೋದಿ ಅವರ ವಿಶೇಷ ಪ್ರತಿನಿಧಿಯಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಪಾಲ್ಗೊಂಡರು. ಟ್ರಂಪ್ ಪತ್ನಿ ಮೆಲಾನಿಯಾ, ಪುತ್ರಿ ಇವಾಂಕಾ ಮತ್ತು ಅವರ ಪತಿ ಜರೆಡ್ ಕುಶ್ನರ್, ಉದ್ಯಮಿಗಳಾದ ಎಲಾನ್ ಮಸ್ಕ್, ಜೆಫ್ ಬೆಜೋಸ್ ಮತ್ತು ಟಿಮ್ ಕುಕ್ ಭಾಗವಹಿಸಿದ್ದರು.

ಟ್ರಂಪ್ ಭಾಷಣದ ಪ್ರಮುಖಾಂಶಗಳು...

- ನಾನು ಹಲವು ಕಾರ್ಯಕಾರಿ ಅದೇಶಗಳಿಗೆ ಸಹಿ ಹಾಕುತ್ತೇನೆ. ಅದರೊಂದಿಗೆ ಅಮೆರಿಕದ ಸಂಪೂರ್ಣ ಪುನಃಸ್ಥಾಪನೆ ಪ್ರಕ್ರಿಯೆ ಶುರುವಾಗಲಿದೆ.
- ಒಬ್ಬ ಕಮಾಂಡರ್ ಇನ್ ಚೀಫ್ ಆಗಿದ್ದುಕೊಂಡು ನಮ್ಮ ದೇಶವನ್ನು ಬೆದರಿಕೆಗಳು ಮತ್ತು ಆಕ್ರಮಣಗಳಿಂದ ರಕ್ಷಿಸುವುದೇ ನನ್ನ ಮೊದಲ ಜವಾಬ್ದಾರಿ.
- ತಯಾರಿಕಾ ವಲಯದಲ್ಲಿ ಅಮೆರಿಕವು ಮತ್ತೆ ಮುಂಚೂಣಿಯ ರಾಷ್ಟ್ರವಾಗಲಿದೆ. ನಮ್ಮಲ್ಲೇ ಇನ್ನಷ್ಟು ಕಚ್ಚಾತೈಲ ಮತ್ತು ಅನಿಲ ಉತ್ಪಾದನೆಗೆ ಆದ್ಯತೆ ನೀಡುತ್ತೇವೆ
- 2017ರಲ್ಲಿ ಇದ್ದಂತೆಯೇ, ಜಗತ್ತು ಕಂಡ ಅತ್ಯಂತ ಬಲಿಷ್ಠ ಮಿಲಿಟರಿಯನ್ನು ನಾವು ಹೊಂದಲಿದ್ದೇವೆ.
- ಲಿಂಗ ಆಧಾರಿತ ನೀತಿಯನ್ನು ಕೊನೆಗೊಳಿಸಿ, ಅರ್ಹತೆ ಆಧಾರಿತ ಸಮಾಜವನ್ನು ನಿರ್ಮಿಸುತ್ತೇವೆ.

ಟ್ರಂಪ್ ಅವರು ಪತ್ನಿ ಮೆಲಾನಿಯಾಗೆ ಮುತ್ತಿಕ್ಕಿದ ಕ್ಷಣ– ಎಪಿ/ಪಿಟಿಐ ಚಿತ್ರ

ಆಮದು ಸುಂಕ ಹೆಚ್ಚಳಕ್ಕೆ ನಿರ್ಧಾರ

ವಿವಿಧ ದೇಶಗಳಿಂದ ಆಮದಾಗುವ ವಸ್ತುಗಳ ಮೇಲೆ ವಿಧಿಸಲಾಗುವ ಸುಂಕವನ್ನು ಹೆಚ್ಚಿಸಲಾಗುವುದು ಎಂದು ಟ್ರಂಪ್ ಘೋಷಿಸಿದರು.

'ಅಮೆರಿಕದ ಕಾರ್ಮಿಕರು ಮತ್ತು ಇಲ್ಲಿನ ಜನರ ಹಿತಾಸಕ್ತಿ ಕಾಪಾಡಲು ನಮ್ಮ ವ್ಯಾಪಾರ ನೀತಿಯಲ್ಲಿ ಬದಲಾವಣೆಯನ್ನು ನಾನು ತಕ್ಷಣ ಪ್ರಾರಂಭಿಸುತ್ತೇನೆ' ಎಂದರು.

'ಇತರ ದೇಶಗಳನ್ನು ಶ್ರೀಮಂತಗೊಳಿಸಲು ನಮ್ಮ ನಾಗರಿಕರಿಗೆ ತೆರಿಗೆ ವಿಧಿಸುವ ಬದಲು, ನಮ್ಮ ನಾಗರಿಕರನ್ನು ಶ್ರೀಮಂತಗೊಳಿಸಲು ನಾವು ಇತರ ದೇಶಗಳಿಗೆ ಸುಂಕ ಮತ್ತು ತೆರಿಗೆ ವಿಧಿಸುತ್ತೇವೆ' ಎಂದು ಪ್ರಕಟಿಸಿದರು.

'ಪ್ಯಾರಿಸ್ ಒಪ್ಪಂದದಿಂದ ನಿರ್ಗಮನ'

ಪ್ಯಾರಿಸ್ ಹವಾಮಾನ ಒಡಂಬಡಿಕೆಯಿಂದ ಅಮೆರಿಕವು ಹೊರನಡೆಯಲಿದೆ ಎಂದು ಟ್ರಂಪ್ ಅವರ ಆಡಳಿತವು ಸೋಮವಾರ ಹೇಳಿದೆ. 'ಅಧ್ಯಕ್ಷ ಟ್ರಂಪ್ ಅವರು ಪ್ಯಾರಿಸ್ ಒಪ್ಪಂದದಿಂದ ಹೊರನಡೆಯಲಿದ್ದಾರೆ' ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ. ಆದರೆ ಯಾವಾಗ ಹೊರನಡೆಯಲಿದೆ ಎಂಬ ಬಗ್ಗೆ ಹೇಳಿಲ್ಲ. ಟ್ರಂಪ್ ಅವರ ಮೊದಲ ಅವಧಿಯ ಆಡಳಿತದಲ್ಲೂ ಅಮೆರಿಕವು ಈ ಒಪ್ಪಂದದಿಂದ ನಿರ್ಗಮಿಸಿತ್ತು.

2015ರ ಪ್ಯಾರಿಸ್ ಒಪ್ಪಂದದ ಪ್ರಕಾರ, ಜಾಗತಿಕ ತಾಪಮಾನವನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳುವ ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ಅಮೆರಿಕವೂ ಸೇರಿದಂತೆ ಎಲ್ಲಾ ಅಭಿವೃದ್ಧಿ ರಾಷ್ಟ್ರಗಳು ದೇಣಿಗೆ ನೀಡಲು ಒಪ್ಪಿಕೊಂಡಿದ್ದವು.

ಅಖಿಲ ಕರ್ನಾಟಕ ರೈತ ಮತ್ತು ವ್ಯಾಪಾರಿಗಳ ಒಕ್ಕೂಟ ಆರೋಪ

ವ್ಯಾಪ್ತಿ ಮೀರಿ ಸುಂಕ ವಸೂಲಿ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ ಕೆ.ಆರ್.ಪುರ ಸಂತೆ ಮೈದಾನದಿಂದ ಬಿಬಿಎಂಪಿ ಕಚೇರಿವರೆಗೆ ಗುತ್ತಿಗೆದಾರರು ಅಕ್ರಮವಾಗಿ ಸುಂಕ ವಸೂಲು ಮಾಡುತ್ತಿದ್ದಾರೆ' ಎಂದು ಆರೋಪಿಸಿ ಅಖಿಲ ಕರ್ನಾಟಕ ರೈತ ಮತ್ತು ವ್ಯಾಪಾರಿಗಳ ಒಕ್ಕೂಟದ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಮೂರು ತಿಂಗಳ ಹಿಂದೆ ಕೆ.ಆರ್.ಪುರ ಮಾರುಕಟ್ಟೆಗೆ 1 ಎಕರೆ 14 ಗುಂಟೆಗೆ ಮಾತ್ರ ಇ- ಟೆಂಡರ್ ಆಗಿದೆ. ಆದರೆ ಗುತ್ತಿಗೆದಾರರು 1 ಎಕರೆ 14 ಗುಂಟೆ ಜೊತೆಗೆ ಸಂತೆ ಮೈದಾನದಿಂದ ಬಿಬಿಎಂಪಿ ಕಚೇರಿವರೆಗೆ ಅಕ್ರಮವಾಗಿ ಸುಂಕ ವಸೂಲು ಮಾಡುತ್ತಿದ್ದಾರೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಪ್ರತಿಭಟನಕಾರರು ದೂರಿದರು.

'ಕೆ.ಆರ್.ಪುರ ಮಾರುಕಟ್ಟೆ ಒಟ್ಟು 5 ಎಕರೆ 20 ಗುಂಟೆಗಳಿದ್ದು, ಗುತ್ತಿಗೆದಾರರು 1 ಎಕರೆ 14 ಗುಂಟೆಯಲ್ಲಿ ಮಾತ್ರ ಸುಂಕ ವಸೂಲಿ ಮಾಡಬೇಕು. ಆದರೆ, ಅವರು ಹೆಚ್ಚುವರಿ ಪ್ರದೇಶದಲ್ಲಿ ಸುಂಕ ವಸೂಲಿ ಮಾಡುತ್ತಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಗುತ್ತಿಗೆದಾರರರೊಂದಿಗೆ ಶಾಮೀಲಾಗಿದ್ದಾರೆ' ಎಂದು ಅಖಿಲ ಕರ್ನಾಟಕ ರೈತ ಮತ್ತು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್ ಆರೋಪಿಸಿದರು

ಅಖಿಲ ಕರ್ನಾಟಕ ರೈತ ಮತ್ತು ವ್ಯಾಪಾರಿಗಳ ಒಕ್ಕೂಟದ ಕಾರ್ಯಕರ್ತರು ಬಿಬಿಎಂಪಿಯ ಕೆ.ಆರ್‌. ಪುರದ ಕಚೇರಿ ಎದುರು ಪ್ರತಿಭಟನೆ ನಡೆಸಿದರು

'ಬಾಂಗ್ಲಾಕ್ಕೆ ಪಲಾಯನ ಮಾಡಲು ಯೋಜಿಸಿದ್ದ ಆರೋಪಿ'

ಮುಂಬೈ (ಪಿಟಿಐ): ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಮೇಲೆ ನಡೆದ ಹಲ್ಲೆ ಪ್ರಕರಣದ ಆರೋಪಿ, ತಾಯ್ನಾಡು ಬಾಂಗ್ಲಾದೇಶಕ್ಕೆ ಪಲಾಯನ ಮಾಡಲು ಯೋಜನೆ ಹಾಕಿಕೊಂಡಿದ್ದ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಹಲ್ಲೆ ನಡೆಸಿದ ಆರೋಪಿ 30 ವರ್ಷದ ಮೊಹಮ್ಮದ್ ಶರೀಫುಲ್ ಇಸ್ಲಾಂ ಶೆಹಜಾದ್, ಸುದ್ದಿ ವಾಹಿನಿಗಳಲ್ಲಿ ತನ್ನ ಫೋಟೊ ಪ್ರಸಾರವಾಗುತ್ತಿರುವುದನ್ನು ಕಂಡು ಗಾಬರಿಗೊಂಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಶೆಹಜಾದ್

ತವರು ದೇಶ ಬಾಂಗ್ಲಾಕ್ಕೆ ಪಲಾಯನ ಮಾಡುವ ಉದ್ದೇಶದಿಂದ ಅಲ್ಲಿರುವ ತನ್ನ ಸಹೋದರನಿಗೆ ಕರೆ ಮಾಡಿ ಕೆಲವೊಂದು ದಾಖಲೆಗಳನ್ನು ಕಳುಹಿಸಿಕೊಡುವಂತೆಯೂ ಸೂಚಿಸಿದ್ದಾನೆ. ಇದು ಆರೋಪಿಯು ಬಾಂಗ್ಲಾದ ಪ್ರಜೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪೊಲೀಸರಿಗೆ ನೆರವಾಗಿದೆ.

ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದ ಆರೋಪಿಯು ತನ್ನ ಹೆಸರನ್ನು ವಿಜಯ್ ದಾಸ್ ಎಂದು ಬದಲಿಸಿಕೊಂಡಿದ್ದ.

ಕಳ್ಳತನದ ಉದ್ದೇಶದಿಂದ ಜನವರಿ 16ರ ನಸುಕಿನಲ್ಲಿ ಸೈಫ್ ಅವರ ನಿವಾಸವನ್ನು ಪ್ರವೇಶಿಸಿದ್ದ ಆರೋಪಿಯು, ನಟನಿಗೆ ಹಲವು ಬಾರಿ ಇರಿದು ಪರಾರಿಯಾಗಿದ್ದ. ಪೊಲೀಸರು ಈತನನ್ನು ಮಹಾರಾಷ್ಟ್ರದ ಠಾಣೆಯಲ್ಲಿ ಭಾನುವಾರ ವಶಕ್ಕೆ ಪಡೆದಿದ್ದರು.

ವಿಜಯ ಅಕಾಡೆಮಿ ಆನ್ ಎಜುಕೇಷನ್ 30ನೇ ವಾರ್ಷಿಕೋತ್ಸವ

ಸಂಭ್ರಮದ ಕರ್ನಾಟಕ ಸಂಸ್ಕೃತಿ ಉತ್ಸವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ದುಬಾರಿ ಡೊನೇಷನ್ ಪಡೆದು ಶಿಕ್ಷಣ ನೀಡುವ ಕಾಲಘಟ್ಟದಲ್ಲಿ ಕಡಿಮೆ ಶುಲ್ಕದೊಂದಿಗೆ ವಿದ್ಯೆ, ಸಂಸ್ಕಾರ, ಮಾನವೀಯ ಗುಣಗಳನ್ನು ಕಲಿಸುವ ಕೆಲಸವನ್ನು ಪಟ್ಟಣಗೆರೆಯ ಕರ್ನಾಟಕ ಸಂಸ್ಕೃತಿ ವಿದ್ಯಾಪೀಠ ಮಾಡುತ್ತಿದೆ' ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ವೆಂಕಟೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸಂಸ್ಕೃತಿ ಉತ್ಸವ-7 ಮತ್ತು ವಿಜಯ ಅಕಾಡೆಮಿ ಆನ್ ಎಜುಕೇಷನ್ 30ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ಪಾಲಿಕೆ ಮಾಜಿ ಸದಸ್ಯ ಜಿ.ಎಚ್. ರಾಮಚಂದ್ರ ಮಾತನಾಡಿ, 'ಶಿಕ್ಷಣ ಸಂಸ್ಥೆಯ ಬಹುತೇಕ ವಿದ್ಯಾರ್ಥಿಗಳು, ಆಡಳಿತ ಮಂಡಳಿಯವರು ಜನ್ಮದಿನ ಆಚರಿಸಿಕೊಳ್ಳದೆ, ಅದಕ್ಕೆ ಖರ್ಚಾಗುವ ಹಣದಲ್ಲಿ ದವಸಧಾನ್ಯ, ಹೊಸಬಟ್ಟೆ, ಹಣವನ್ನು ಅಂಧ ಮಕ್ಕಳು, ಅನಾಥಾಶ್ರಮ, ವೃದ್ಧಾಶ್ರಮ, ಸಿದ್ದಗಂಗಾಮಠಕ್ಕೆ ನೀಡುತ್ತಾ ಬಂದಿದ್ದಾರೆ' ಎಂದು ಪ್ರಶಂಸಿದರು.

ಕರ್ನಾಟಕ ಸಂಸ್ಕೃತಿ ವಿದ್ಯಾಪೀಠದ ಅಧ್ಯಕ್ಷ ಡಿ.ಎಸ್. ಬಸವಾನಂದ ಪ್ರಕಾಶ್ ಮಾತನಾಡಿ, 'ಜಾತಿ-ಧರ್ಮಗಳ ನಡುವೆ ಸೇತುವೆ ನಿರ್ಮಾಣವಾಗಬೇಕೇ ಹೊರತು, ಗೋಡೆಕಟ್ಟುವ ಕೆಲಸವಾಗಬಾರದು. ಹಣಕ್ಕೋಸ್ಕರ ಶಿಕ್ಷಣಸಂಸ್ಥೆ ಪ್ರಾರಂಭಿಸದೆ, ಮಾನವೀಯತೆ, ಸಂಸ್ಕಾರ ಜ್ಞಾನಸಂಪಾದನೆಗಾಗಿ ವಿದ್ಯೆ ನೀಡಲಾಗುತ್ತಿದೆ' ಎಂದರು.

ನಿವೃತ್ತ ಶಿಕ್ಷಕಿ ಡಿ.ಎಸ್. ಜಯಶೀಲ, ನೃತ್ಯಶಿಕ್ಷಕಿ ವೀಣಾ ಶೇಷಾದ್ರಿ ಅವರಿಗೆ ಜ್ಞಾನದಾಸೋಹಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್ಸೆಸ್ಸೆಲ್ಸಿ ಪರೀಕ್ಷಾ ಕೈಪಿಡಿ ಪರೀಕ್ಷಾಮಿತ್ರ ಪುಸ್ತಕ ವನ್ನು ಬಿಡುಗಡೆ ಮಾಡಲಾಯಿತು. ಪ್ರಾಂಶುಪಾಲ ಡಿ.ಎಸ್.ವಿವೇಕಾನಂದ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಸಂಸ್ಕೃತಿ ಉತ್ಸವದಲ್ಲಿ ಮಕ್ಕಳು ನೃತ್ಯ ಪ್ರದರ್ಶನ ನೀಡಿದರು

ಕ್ಷೇಮ ಕುಶಲ

ಬದುಕನು ಬೆಳಗಲಿ ಉತ್ಸಾಹದ ಹಣತೆ

ರಘು ವಿ.

ನಮ್ಮ ಸುತ್ತಲಿನವರ ಜೀವನವನ್ನು ಅವಲೋಕಿಸಿ ನೋಡಿ, ಎಲ್ಲರೂ ಯಾವುದಾದರೂ ಒಂದು ತುಡಿತಕ್ಕೆ ಒಳಗಾಗಿ ನಡೆಯುತ್ತಿರುವುದು ಕಂಡುಬರುತ್ತದೆ. ಆದರೆ ಆ ನಡಿಗೆಯಲ್ಲಿ ಎಲ್ಲರದ್ದೂ ಒಂದೇ ವೇಗವಲ್ಲ. ಏಕೆಂದರೆ ಅವರವರೊಳಗಿನ ಉತ್ಸಾಹದ ಮಟ್ಟಕ್ಕೆ ತಕ್ಕ ಹಾಗೆ ಹೆಜ್ಜೆ ಹಾಕುತ್ತಾರೆ. ನನ್ನ ವಿದ್ಯಾರ್ಥಿಗಳು ತಮ್ಮ ಇಷ್ಟದ ತರಗತಿಗಳಿಗೆ ಬರುವಾಗ ಹಾಕುವ ಹೆಜ್ಜೆಗೂ, ತಮಗಿಷ್ಟವಿಲ್ಲದೆ ಕೇವಲ ಹಾಜರಾತಿಗಾಗಿ ಬರುವ ತರಗತಿಗಳಿಗೆ ಹಾಕುವ ಹೆಜ್ಜೆಗೂ ವ್ಯತ್ಯಾಸ ಕಂಡಿದ್ದೇನೆ. ಅಷ್ಟೇ ಅಲ್ಲ, ಮಗುವೊಂದು ಮನೆಯಿಂದ ಶಾಲೆಗೆ ಬರುವಾಗ, ಶಾಲೆಯಿಂದ ಮನೆಗೆ ಹೋಗುವಾಗ ಅದರ ನಡಿಗೆಯ ವೇಗವನ್ನು ಗಮನಿಸಿದಾಗ ಉತ್ಸಾಹ ಎಂಬುದು ಹೇಗೆ ನಮ್ಮ ಜೀವನದಲ್ಲಿ ವ್ಯಕ್ತವಾಗುತ್ತದೆ ಎಂಬುದು ವಿದಿತವಾಗುತ್ತದೆ. ಇದು ಜೀವನದ ಎಲ್ಲ ಕ್ರಿಯೆಗಳಿಗೂ ಅನ್ವಯವಾಗುತ್ತದೆ.

ಯಾರೂ ಸೋಲಬೇಕೆಂದು ಹುಟ್ಟಿಲ್ಲ; ಸೋಲಬೇಕೆಂದು ಜೀವಿಸುವುದೂ ಇಲ್ಲ. ಭೂಮಿಯ ಗುರುತ್ವಾಕರ್ಷದಂತೆ ವಿಷಾದವು ಮನಸ್ಸನ್ನು ಕೆಳಗೆಳೆಯಲು ಸದಾ ಸಿದ್ಧವಿರುತ್ತದೆ. ಆದರೆ ಉತ್ಸಾಹವು ರಾಕೆಟ್ಟಿನ ಇಂಧನದಂತೆ ವ್ಯಕ್ತಿಯನ್ನು ಮೇಲೆತ್ತಲು ಆಂತರ್ಯದಲ್ಲಿ ಇದ್ದೇ ಇರುತ್ತದೆ. ಪ್ರೋತ್ಸಾಹದ ಕಿಡಿ ತಗುಲಿಸಿಬಿಟ್ಟರೆ ಬದುಕು ಸರ್ರನೆ ಮೇಲೇರುತ್ತದೆ. ಉತ್ಸಾಹವಿಲ್ಲದ ಬದುಕು ಬಹಳ ಹಿಂಜರಿಕೆಗಳಿಂದ ಕೂಡಿರುತ್ತದೆ. 'ಉತ್ಸಾಹವೆಂಬ ಅಗ್ನಿಪರ್ವತದ ಶಿಖರದಲ್ಲಿ ಹಿಂಜರಿಕೆಯ ಹುಲ್ಲುಗರಿಕೆ ಬೆಳೆಯುವುದಿಲ್ಲ' ಎನ್ನುತ್ತಾನೆ, ಖಲೀಲ್ ಗಿಬ್ರಾನ್. 'ನಿಮ್ಮ ಮೊಗದಲ್ಲಿ ನಿರುತ್ಸಾಹದ ಮೋಡ ಕವಿದಿದ್ದರೆ, ಆ ದಿನ ನೀವು ಕೋಣೆಯೊಳಗೇ ಇದ್ದುಬಿಡಿ. ನಿಮ್ಮ ದುಗುಡದ ಕಾಯಿಲೆಯನ್ನು ಜಗತ್ತಿಗೆ ಹಂಚಲು ನಿಮಗಾವ ಅಧಿಕಾರವಿದೆ?' ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ವಿಷಾದದ ಸ್ಥಾಯಿಭಾವವನ್ನು ಬದುಕಿನ ಕೇಂದ್ರವಾಗಿಸಿಕೊಂಡು ತನ್ನ ಬಗ್ಗೆಯೇ ಮರುಕಪಡುತ್ತ ಅಥವಾ ಜಗತ್ತಿನ ಅಂಕುಡೊಂಕುಗಳ ಬಗ್ಗೆ ಬೇಸರಿಸಿಕೊಳ್ಳುತ್ತ ಜೀವ ಸವೆಸುವುದನ್ನು ನಿವಾರಿಸಿಕೊಳ್ಳಬೇಕೆಂಬುದೇ ಈ ಲೇಖನದ ಆಶಯ.

ಬದುಕಿನಲ್ಲಿ ಗುರಿಯ ಜೊತೆಗೆ ಅದನ್ನು ಸಾಧಿಸಲು ಉತ್ಸಾಹವನ್ನು ಮೈಗೂಡಿಸಿಕೊಳ್ಳಬೇಕು. ಇದು ಕೇವಲ ಸಕಾರಾತ್ಮಕ ಚಿಂತನೆಯಾಗಿ ಉಳಿಯದೆ ಜೀವನದ ದೈನಂದಿನ ಕಾರ್ಯಗಳಲ್ಲಿ ಪುಟಿಯುವ ಕ್ಷಮತೆಯಾಗಿ ತೋರಿಕೊಳ್ಳಬೇಕು. ಉತ್ಸಾಹವನ್ನು ಹೊರಗಿನಿಂದ ತುಂಬುವುದಾಗದು, ಅದು ಒಳಗಿನಿಂದಲೇ ಚಿಮ್ಮುವಂತಹದ್ದು. ಮಕ್ಕಳಲ್ಲಿ ಸಹಜವಾಗಿಯೇ ಉತ್ಸಾಹ ಕಂಡುಬರುತ್ತದೆ. ಅವರ ಅಬ್ಬರ, ಅರಚಾಟ, ಕಿರಿಚಾಟ – ಇವೆಲ್ಲ ಉತ್ಸಾಹದ ದ್ಯೋತಕವೇ. ಆದರೆ ಕ್ರಮೇಣ ಸುತ್ತಲಿನ ಒತ್ತಡವು ಪದೇ ಪದೇ ಅದನ್ನು ಮೊಟಕುಗೊಳಿಸುವ ಕಾರಣದಿಂದ ಈ ಉತ್ಸಾಹದ ಬತ್ತಿ ಹೋಗಿ ಬದುಕು ಯಾಂತ್ರಿಕ ಕ್ರಿಯೆಯಾಗಿ ಪರಿವರ್ತಿತವಾಗಿಬಿಡುತ್ತದೆ. ಮಕ್ಕಳ ಈ ಉತ್ಸಾಹವನ್ನು ರಚನಾತ್ಮಕ ಕ್ರಿಯೆಗಳತ್ತ ತಿರುಗಿಸಬೇಕಾದ್ದು ಶಿಕ್ಷಣದ ಉದ್ದೇಶ. ಅದನ್ನು ಹೊರತುಪಡಿಸಿ ಶಿಸ್ತಿನ ಹೆಸರಿನಲ್ಲಿ ಉತ್ಸಾಹವನ್ನು ಹತ್ತಿಕ್ಕಿ ಅವರನ್ನು ಮೆತ್ತಗಾಗಿಸುವುದು ಆ ಜೀವವನ್ನು ಕೊಂದಂತೆಯೇ.

> ಬದುಕಿನ ಸವಾಲುಗಳಿಗೆ ಉತ್ಸಾಹದಿಂದ ಎದೆಯೊಡ್ಡಿ ನಿಲ್ಲದಾದರೆ ಅದೊಂದು ಬದುಕೇ?. ಉತ್ಸಾಹವೆಂಬುದು ನೆನೆದ ಅವಲಕ್ಕಿಯಂತಾಗದೆ ಚಟಪಟನೆ ಸಿಡಿಯುವ ಸಾಸಿವೆಯ ಒಗ್ಗರಣೆಯಾದಾಗ ಬದುಕಿನ ಘಮಲು, ಗಮ್ಮತ್ತುಗಳು ಹೆಚ್ಚುತ್ತವೆ

ಮನುಷ್ಯನೊಳಗಣ 'ಮಾಧವ' ಸುಮ್ಮನಿರುವುದಿಲ್ಲ; ಅದನ್ನು ಎಷ್ಟೇ ಎಷ್ಟೇ ಅದುಮಿದರೂ ಉತ್ಸಾಹವನ್ನು ಕಂಡುಕೊಳ್ಳುವ ಮನುಷ್ಯನ ಆಂತರ್ಯದ ಬಯಕೆ ಮುಂದುವರೆಯುತ್ತದೆ. ಉತ್ಸಾಹವು ಸಹಜವಾಗಿ ನಮ್ಮೊಳಗೆ ಇರುವಂತಹದ್ದು. ಅದನ್ನು ಬತ್ತಿಹೋಗದಂತೆ ಸರಿಯಾಗಿ ಪೋಷಿಸಿಕೊಂಡು ಬೆಳೆಸಬೇಕು. ಅದನ್ನೇ ಬಂಡವಾಳವಾಗಿಸಿಕೊಂಡು ಜೀವನವನ್ನು ಕಟ್ಟಿಕೊಳ್ಳಬೇಕು, ಜಗತ್ತಿನ ಎಲ್ಲ ಯಶಸ್ವೀ ವ್ಯಕ್ತಿಗಳು ತಪ್ಪದೆ ಹೊಂದಿರುವ ಒಂದು ಗುಣವೆಂದರೆ ಈ ಉತ್ಸಾಹಶೀಲತೆ. ಬಾಗದ, ಬಾಡದ ಉತ್ಸಾಹದ ಪುಷ್ಪವೊಂದು ಎದೆಯೊಳಗೆ ಸತತವಾಗಿ ಸ್ಥಾಪಿತವಾಗಿರಬೇಕು. ಹಿರಿಯರ ವ್ಯಕ್ತಿಚಿತ್ರಗಳು ಸುಗಂಧಭರಿತ ಮಂದಾನಿಲದಂತೆ ನಮ್ಮ ಉತ್ಸಾಹವನ್ನು ಉರುಬಿ ಹೆಚ್ಚಿಸಬಲ್ಲದು. ಡಿವಿಜಿಯವರ 'ಜ್ಞಾಪಕ ಚಿತ್ರಶಾಲೆ', ಎಂ. ಆರ್. ಶ್ರೀನಿವಾಸಮೂರ್ತಿ ಅವರ 'ರಂಗಣ್ಣನ ಕನಸಿನ ದಿನಗಳು', ಟಿ. ವಿ. ವೆಂಕಟಾಚಲಶಾಸ್ತ್ರಿಯವರ 'ಮೆಲುಗಾಳಿಯ ಮಾತುಗಳು' ಮತ್ತು 'ಉದಾರ ಚರಿತರು ಉದಾತ್ತ ಪ್ರಸಂಗಗಳು' ಮೊದಲಾದ ವ್ಯಕ್ತಿಚಿತ್ರ ಕೃತಿಗಳಲ್ಲಿನ ವ್ಯಕ್ತಿತ್ವಗಳನ್ನು ಗಮನಿಸಿದಾಗ ಇದರ ಮಹತ್ವ ಅರಿವಾಗುತ್ತದೆ.

ಉತ್ಸಾಹವೆಂಬುದು ನೆನೆದ ಅವಲಕ್ಕಿಯಂತಾಗದೆ ಚಟಪಟನೆ ಸಿಡಿಯುವ ಸಾಸಿವೆಯ ಒಗ್ಗರಣೆಯಾದಾಗ ಬದುಕಿನ ಘಮಲು, ಗಮ್ಮತ್ತುಗಳು ಹೆಚ್ಚುತ್ತವೆ. ಎಲ್ಲರ ಬದುಕಿಗೂ ಅಂತ್ಯವಿದೆ. ಹಾಗೆಂದು ನಿರಾಶರಾಗದೆ ಅಳಿಸದ ಛಾಪೊಂದನ್ನು ಮೂಡಿಸಲು ದೊರೆತ ಜೀವಿತಾವಧಿಯನ್ನು ಬಳಸಿಕೊಳ್ಳಬೇಕು. ಮಹಾಭಾರತದ ಯುದ್ಧದ ಸಂದರ್ಭವನ್ನೇ ಗಮನಿಸಿ. ಯುದ್ಧವೆಂದರೆ ಒಬ್ಬರಲ್ಲ ಒಬ್ಬರಿಗೆ ಸೋಲೋ ಸಾವೋ ಖಚಿತವೇ. ಆದರೆ ವೃದ್ಧನಾದ ಭೀಷ್ಮನೂ ಸೆಣೆಸಲು ಸಿದ್ಧ. ಏಕೆಂದರೆ ಅದು ಕ್ಷತ್ರಿಯಧರ್ಮ. ಹಾಗೆಯೇ ಯುವಕನಾದ ಅಭಿಮನ್ಯುವೂ ಚಕ್ರವ್ಯೂಹ ಭೇದಿಸಲು ಸಿದ್ಧ. ಇವರಾರೂ ಅರೆಮನಸ್ಕರಾಗಿ ಯುದ್ಧದಲ್ಲಿ ತೊಡಗಲಿಲ್ಲ. ಅದನ್ನು ತಪ್ಪಿಸಬೇಕೆಂದು ಪ್ರಯತ್ನಿಸಿದವರೂ ಅದು ಅನಿವಾರ್ಯವಾದಾಗ ಅಷ್ಟೇ ಉತ್ಸಾಹದಿಂದ ತೊಡೆತಟ್ಟಿ ನಿಂತರು. ಬದುಕಿನ ಸವಾಲುಗಳಿಗೆ ಉತ್ಸಾಹದಿಂದ ಎದೆಯೊಡ್ಡಿ ನಿಲ್ಲದಾದರೆ ಅದೊಂದು ಬದುಕೇ? ಯಾವ ಧರ್ಮದ ದೇವತೆಯನ್ನಾದರೂ ನೋಡಿ. ಆ ಮೊಗದಲ್ಲಿ ಮಂದಹಾಸ–ಉತ್ಸಾಹಗಳು ಕಾಣುತ್ತವೆ. ರೌದ್ರದೇವತೆಗಳ ಪಟವನ್ನೂ ಕಾಣಬಹುದು, ಕರುಣೆಯ ಮೂರ್ತಿಗಳನ್ನೂ ನೋಡಬಹುದು. ಆದರೆ ದಯನೀಯ ಮೊಗದ, ನಿರುತ್ಸಾಹಿಯಾದ ದೇವತೆಯನ್ನು ಎಲ್ಲಿಯೂ ಕಾಣೆವು. ಏಕೆಂದರೆ ಉತ್ಸಾಹವೇ ಬದುಕಿನ ಬಂಡವಾಳ. ❖

ಲಸಿಕೆ ಎಂಬ ರಕ್ಷಾಕವಚ

ಡಾ. ಕುಶ್ವಂತ್ ಕೋಳಿಬೈಲು

ರೋಗನಿರೋಧಕ ಶಕ್ತಿಯು ಯಾವುದೇ ಮಾರಣಾಂತಿಕ ಕಾಯಿಲೆಗಳನ್ನು ಎದುರಿಸುವಲ್ಲಿ ದೇಹಕ್ಕೆ ಅತ್ಯಗತ್ಯವಾಗಿರುತ್ತದೆ. ಶಿಶುಗಳ ಅಂಗಾಂಗಗಳು ನಾಜೂಕಾಗಿರುವ ಕಾರಣದಿಂದ ಮತ್ತು ಅವರಲ್ಲಿ ರೋಗನಿರೋಧಕ ಶಕ್ತಿಯು ಕಡಿಮೆಯಿರುವ ಕಾರಣದಿಂದ ಅವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸುವುದು ಅತ್ಯಗತ್ಯ.

ನವಜಾತಶಿಶುಗಳು, ಅವು ಹುಟ್ಟಿದ ಒಂದು ತಿಂಗಳಲ್ಲಿ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಕಾರಣದಿಂದಾಗಿ ಶಿಶುಗಳ ಜೀವನದ ಮೊದಲಿನ ಕೆಲವು ವಾರಗಳಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸಬೇಕು. ನವಜಾತಶಿಶುವಿಗೆ ಹುಟ್ಟಿದ ದಿನದಂದೇ ಪೋಲಿಯೋ ಲಸಿಕೆ, ಹೆಪಟೈಟಿಸ್ ಬಿ ಲಸಿಕೆ ಮತ್ತು ಬಿಸಿಜಿ ಲಸಿಕೆಗಳನ್ನು ನೀಡಲಾಗುತ್ತದೆ. ವಯಸ್ಕರು ತಮ್ಮ ದೇಹಕ್ಕೆ ಬೇಕಾದ ವಿಟಮಿನ್ ಕೆ ಪದಾರ್ಥವನ್ನು ನಮ್ಮ ಕರುಳಿನಲ್ಲಿರುವ ಸೂಕ್ಷ್ಮಾಣುಜೀವಿಗಳ ಮೂಲಕವೇ ತಯಾರಿಸಲು ಸಶಕ್ತರಾಗಿರುತ್ತಾರೆ. ಆದರೆ ನವಜಾತಶಿಶುಗಳಿಗೆ ಆ ಸಾಮರ್ಥ್ಯವಿಲ್ಲದಿರುವ ಕಾರಣದಿಂದಾಗಿ ಅವರಿಗೆ ಹುಟ್ಟಿದ ತಕ್ಷಣ ವಿಟಮಿನ್ ಕೆ ಚುಚ್ಚುಮದ್ದನ್ನು ನೀಡುತ್ತೇವೆ.

ಶಿಶುಗಳಿಗೆ ಆಯಾ ವಯಸ್ಸಿಗೆ ಅನುಗುಣವಾಗಿ ವಿವಿಧ ಲಸಿಕೆಗಳನ್ನು ನೀಡಬೇಕಾಗಿರುತ್ತದೆ. ಹುಟ್ಟಿದ ದಿನದಂದು ಲಸಿಕೆ ಪಡೆದ ನಂತರ ಆರನೇ ವಾರದಂದು, ಹತ್ತನೇ ವಾರದಂದು ಮತ್ತು ಹದಿನಾಲ್ಕನೆಯ ವಾರದಂದು ಕ್ರಮವಾಗಿ ಹಲವು ಲಸಿಕೆಗಳನ್ನು ಭಾರತದಲ್ಲಿ ನೀಡಲಾಗುತ್ತದೆ. ಡಿಫ್ತೀರಿಯಾ, ಟೆಟನಸ್, ಪರ್ಟುಸಿಸ್, ಪೋಲಿಯೊಮೈಲೈಟಿಸ್, ಹಿಮೋಫೀಲಸ್ ಬಿ, ಹಿಪಟೈಟಿಸ್ ಬಿ ಸೋಂಕಿನಿಂದ ರಕ್ಷಿಸಲು ಕೊಡಬೇಕಾದ ಲಸಿಕೆಯನ್ನು ಒಂದೇ ಚುಚ್ಚುಮದ್ದಿನ ಮೂಲಕ ನೀಡಬಹುದು. ಹುಟ್ಟಿದ ಮಕ್ಕಳಿಗೆ ಸುಮಾರು ಒಂದೂವರೆ ವರ್ಷಗಳಾಗುವ ತನಕ ಮಾರಣಾಂತಿಕ ಅತಿಸಾರವನ್ನು ಉಂಟುಮಾಡುವ ರೋಟಾವೈರಸ್ ಸೋಂಕನ್ನು ತಡೆಯುವ ಲಸಿಕೆಯನ್ನು ಇದರ ಜೊತೆಗೆ ಕೊಡಿಸಲಾಗುತ್ತದೆ. 'ಸ್ಟ್ರೆಪ್ಟೊಕಾಕಲ್ ನ್ಯೂಮೋನಿಯೆ' ಎಂಬ ಬ್ಯಾಕ್ಟೀರಿಯಾವು ಮಕ್ಕಳಲ್ಲಿ ನ್ಯುಮೋನಿಯಾದ ಜೊತೆಗೆ ಮಿದುಳಿನಲ್ಲಿ ಮತ್ತು ಕಿವಿಯೊಳಗೆ ಗಂಭೀರವಾದ ಸೋಂಕನ್ನು ಉಂಟುಮಾಡಬಲ್ಲದು. ಹಾಗಾಗಿ ಇದರ ಲಸಿಕೆಯನ್ನೂ ಮೇಲೆ ಉಲ್ಲೇಖಿಸಿದ ಮೂರು ವಾರಗಳಲ್ಲಿ ನೀಡಲಾಗುತ್ತದೆ. ಶ್ವಾಸಕೋಶದ ಸೋಂಕು ಮತ್ತು ಅತಿಸಾರದಿಂದ ಹೆಚ್ಚು ಶಿಶುಗಳು ಮರಣಹೊಂದುವುದರಿಂದ ಈ ಮೇಲಿನ ಲಸಿಕೆಗಳನ್ನು ರಾಷ್ಟ್ರೀಯ ಲಸಿಕಾ ಕಾರಣದ ವೇಳಾಪಟ್ಟಿಯಲ್ಲಿ ಸೇರಿಸಲಾಗಿದೆ. ಮಕ್ಕಳಿಗೆ ಅನಂತರದಲ್ಲಿ ಬಹಳಷ್ಟು ಲಸಿಕೆಗಳನ್ನು ನೀಡಬೇಕಾಗುತ್ತದೆ ಎನ್ನುವುದನ್ನು ಮರೆಯುವಂತಿಲ್ಲ.

ಮಕ್ಕಳಿಗೆ ಶೀತ, ಜ್ವರ ಮತ್ತು ಸೋಂಕನ್ನು ಹಲವು ಬ್ಯಾಕ್ಟೀರಿಯಾ, ವೈರಸ್ ಮತ್ತು ಇತರ ಸೂಕ್ಷ್ಮಾಣು ಜೀವಿಗಳು ಉಂಟುಮಾಡುತ್ತವೆ. ಆದರೆ ಪ್ರತಿಯೊಂದು ಸೋಂಕು ಮಾರಣಾಂತಿಕವಾಗಿರುವುದಿಲ್ಲದ ಕಾರಣ ಎಲ್ಲಾ ಸೋಂಕುಗಳಿಗೆ ಲಸಿಕೆಗಳು ಲಭ್ಯವಿರುವುದಿಲ್ಲ. ಅಂಕಿ–ಅಂಶಗಳ ಆಧಾರದ ಮೇಲೆ ಮಾರಣಾಂತಿಕ ಕಾಯಿಲೆಗಳಿಗೆ ಮಾತ್ರ ಲಸಿಕೆಯನ್ನು ತಯಾರು ಮಾಡಲಾಗುತ್ತದೆ ಮತ್ತು ಅದನ್ನು ಮಕ್ಕಳಿಗೆ ನೀಡುವ ಕಾರ್ಯಕ್ರಮವನ್ನು ನಿಗದಿಪಡಿಸಲಾಗುತ್ತದೆ.

ಮೊದಲ ಆರು ವಾರಗಳ ಕಾಲ ಮಗುವಿಗೆ ಮೇಲಿನ ಲಸಿಕೆಗಳನ್ನು ನೀಡದಿದ್ದಾಗ, ಅಂಥ ಮಗುವನ್ನು ಸಾರ್ವಜನಿಕ ಸ್ಥಳಗಳಿಗೆ ಕರೆದುಕೊಂಡು ಹೋಗುವುದು ಸೂಕ್ತವಲ್ಲ. ಆರನೇ ವಾರದ ಲಸಿಕೆಯನ್ನು ಕೊಡಿಸಿದ ನಂತರವೇ, ಅಗತ್ಯಬಿದ್ದಲ್ಲಿ ಮಾತ್ರ, ಜನಸಂದಣಿ ಜಾಸ್ತಿಯಿರುವ ಕಡೆ ಪ್ರಯಾಣ ಬೆಳೆಸಬಹುದು. ಆರನೇ ವಾರದ ಲಸಿಕೆಗೆ ಮೊದಲು ಮಗುವಿನ ರೋಗನಿರೋಧಕ ಶಕ್ತಿಯು ತಾಯಿಯ ಹಾಲಿನ ಮೂಲಕ ಮಗುವಿಗೆ ದೊರಕುವ 'ಇಮ್ಯುನೊಗ್ಲಾಬ್ಯುಲಿನ್ಸ್' ಮುಂತಾದ ರೋಗನಿರೋಧಕ ಕಣಗಳ ಮೇಲೆ ಅವಲಂಬಿತವಾಗಿರುತ್ತದೆ. ಎದೆಹಾಲನ್ನು ಕುಡಿಸದೆ ಕೇವಲ ಪೌಡರ್ ಹಾಲಿನ ಮೇಲೆ ಅವಲಂಬಿತವಾಗಿರುವ ಮಗುವಿನ ರೋಗನಿರೋಧಕ ಶಕ್ತಿಯು ಬಹಳ ಕಡಿಮೆ ಮಟ್ಟದಲ್ಲಿರುತ್ತದೆ.

ಲಸಿಕೆಯನ್ನು ಬಾಯಿಯ ಮೂಲಕ ಅಥವಾ ಚುಚ್ಚುಮದ್ದಿನ ಮೂಲಕ ದೇಹಕ್ಕೆ ನೀಡಬಹುದು. ರೋಟಾ ಮತ್ತು ಪೋಲಿಯೋ ಲಸಿಕೆಯನ್ನು ಬಾಯಿಯ ಮೂಲಕ ನೀಡಲಾಗುತ್ತದೆ; ನ್ಯುಮೋನಿಯಾ, ಟೈಫಾಯ್ಡ್ ಮುಂತಾದ ಲಸಿಕೆಯನ್ನು ಚುಚ್ಚುಮದ್ದಿನ ಮೂಲಕ ನೀಡಲಾಗುತ್ತದೆ. ಲಸಿಕೆಯಲ್ಲಿ ನಿಷ್ಕ್ರಿಯಗೊಳಿಸಿದ ಸೂಕ್ಷ್ಮಾಣು ಅಥವಾ ಸೂಕ್ಷ್ಮಾಣುವಿನ ಭಾಗವಿರುತ್ತದೆ. ದೇಹವು ಆ ಸೂಕ್ಷ್ಮಾಣುವಿನ ವಿರುದ್ಧ ಆ್ಯಂಟಿಬಾಡಿಗಳನ್ನು ಉತ್ಪಾದಿಸಲು ಪ್ರಾರಂಭಿಸುತ್ತದೆ; ಆಗ ದೇಹದೊಳಗಡೆ ಆ್ಯಂಟಿಬಾಡಿಗಳ ಸಂಗ್ರಹವಾಗುತ್ತದೆ. ಕಾಯಿಲೆಯನ್ನು ಉಂಟುಮಾಡುವ ಸೂಕ್ಷ್ಮಾಣುಗಳು ಮುಂದೆ ದೇಹದೊಳಗೆ ಪ್ರವೇಶಿಸಿದಾಗ ದೇಹದೊಳಗೆ ಈಗಾಗಲೇ ಲಭ್ಯವಿರುವ ಆ್ಯಂಟಿಬಾಡಿಗಳು ಸೂಕ್ಷ್ಮಾಣುಜೀವಿಗಳನ್ನು ನಿಷ್ಕ್ರಿಯಗೊಳಿಸುತ್ತವೆ. ಹೀಗಾಗಿ ಸೂಕ್ಷ್ಮಾಣುಜೀವಿಗಳಿಗೆ ಸೋಂಕನ್ನು ಉಂಟುಮಾಡಲು ಆಗುವುದಿಲ್ಲ.

ಲಸಿಕೆಯನ್ನು ಪಡೆದಾಗ ಸಣ್ಣಪುಟ್ಟ ಅಡ್ಡಪರಿಣಾಮಗಳಾಗಿ ನೋವು ಮತ್ತು ಜ್ವರ ಕೆಲವೊಮ್ಮೆ ಕಾಣಿಸಿಕೊಳ್ಳಬಹುದು. ಆದರೆ ಲಸಿಕೆಯು ನೀಡುವ ಸುರಕ್ಷತಾ ದೃಷ್ಟಿಯಿಂದ ಈ ಸಣ್ಣ ಅಡ್ಡಪರಿಣಾಮಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಆಯಾ ದೇಶಗಳಲ್ಲಿ ಅಲ್ಲಿ ಪ್ರಚಲಿತವಿರುವ ಕಾಯಿಲೆಗಳ ಅನುಗುಣವಾಗಿ ಲಸಿಕೆಗಳನ್ನು ನೀಡುತ್ತಾರೆ. ವಿದೇಶಗಳಿಗೆ ಪ್ರಯಾಣಿಸುವವರು ಅಲ್ಲಿ ಪ್ರಚಲಿತವಿರುವ ಕಾಯಿಲೆಗಳಿಗೆ ಲಸಿಕೆಯನ್ನು ಪಡೆದು ವಿದೇಶಪ್ರಯಾಣವನ್ನು ಆರಂಭಿಸಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

17) ಒಬ್ಬ ಜೀವ ವಿಮಾ ಏಜೆಂಟರು ಪಡೆದ 100 ಪಾಲಿಸಿದಾರರ ವಯಸ್ಸುಗಳ ವಿವರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಪಾಲಿಸಿಗಳನ್ನು 18 ವರ್ಷ ದಾಟಿದ ಮತ್ತು 60 ವರ್ಷಕ್ಕಿಂತ ಕಡಿಮೆ ವಯಸ್ಸಿರುವ ಜನರಿಗೆ ಮಾತ್ರ ನೀಡಿದ್ದರೆ ವಯಸ್ಸುಗಳ ಮಧ್ಯಾಂಕವನ್ನು ಲೆಕ್ಕಾಚಾರ ಮಾಡಿ

ವಯಸ್ಸು (ವರ್ಷಗಳಲ್ಲಿ)	ಪಾಲಿಸಿದಾರರ ಸಂಖ್ಯೆ
Below 20	2
Below 25	6
Below 30	24
Below 35	45
Below 40	78
Below 45	89
Below 50	92
Below 55	98
Below 60	100

ಪರಿಹಾರ:–

ವರ್ಗಾಂತರ	ಆವೃತ್ತಿ	ಸಂಚಿತ ಆವೃತ್ತಿ
15-20	2	2
20-25	4	6
25-30	18	24
30-35	21	45
35-40	33	78
40-45	11	89
45-50	3	92
50-55	6	98
55-60	2	100

N = 100 ಮತ್ತು N/2 = 50

ಮಧ್ಯಾಂಕದ ವರ್ಗ(Median class) = 35-40

ಈಗ l = 35, cf = 45, f = 33 ಮತ್ತು h = 5

ಮಧ್ಯಾಂಕ(Median) = 35 + [(50 – 45)/33] × 5

= 35 + (25/33)

= 35.76

ವಯಸ್ಸುಗಳ ಮಧ್ಯಾಂಕ = 35.76 ವರ್ಷಗಳು

18) ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಎಂಬುದನ್ನು ಕಂಡುಹಿಡಿಯಲು ಬಯಸುತ್ತೇವೆ. ಇದರ ವರ್ಗ ಸಮೀಕರಣ ಕಂಡುಹಿಡಿಯಿರಿ

ಪರಿಹಾರ:– ಜಾನ್ ಬಳಿ ಇರುವ ಗೋಲಿ x ಆಗಿರಲಿ

ಆಗ ಜೀವಂತಿ ಬಳಿ ಇರುವ ಗೋಲಿ $45 - x$

5 ಗೋಲಿಗಳನ್ನು ಕಳೆದುಕೊಂಡಾಗ, ಜಾನ್‌ನ ಬಳಿ ಉಳಿದ ಗೋಲಿಗಳ ಸಂಖ್ಯೆ = $x - 5$

5 ಗೋಲಿಗಳನ್ನು ಕಳೆದುಕೊಂಡಾಗ, ಜೀವಂತಿಯ ಬಳಿ ಉಳಿದ ಗೋಲಿಗಳ ಸಂಖ್ಯೆ = $45 - x - 5 = 40 - x$

∴ ಅವುಗಳ ಗುಣಲಬ್ಧ = $(x-5)(40-x)$

$= 40x - x^2 - 200 + 5x$

$= -x^2 + 45x - 200$

ಹೀಗೆ, $-x^2 + 45x - 200 = 124$

ಅಂದರೆ, $-x^2 + 45x - 324 = 0$

ಅಂದರೆ, $x^2 - 45x + 324 = 0$

ಆದ್ದರಿಂದ, ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣ $x^2 - 45x + 324 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿದೆ.

19) $800 m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯವೇ? ಹೌದು ಎಂದಾದರೆ, ಅದರ ಉದ್ದ ಮತ್ತು ಅಗಲಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಆಯತಾಕಾರದ ಮಾವಿನ ತೋಪ ಅಗಲ x m ಆಗಿರಲಿ

ಒಂದು ಆಯತಾಕಾರದ ಮಾವಿನ ತೋಪ ಉದ್ದ $2x$ m ಆಗಿರಲಿ

ಆದ್ದರಿಂದ ಒಂದು ಆಯತಾಕಾರದ ಮಾವಿನ ತೋಪಿನ ವಿಸ್ತೀರ್ಣ= ಉದ್ದ x ಅಗಲ

$= 2x \times x$ m

ಸಮಸ್ಯೆಯ ಪ್ರಕಾರ

$2x^2 = 800$

$x^2 = 800/2 = 400$

$x = \pm\sqrt{400}$

$x = \pm 20$

$x = +20, \quad x = -20,$

x ನ ಬೆಲೆ ನಕಾರಾತ್ಮಕವಾಗಿರಲು ಸಾಧ್ಯವಿಲ್ಲ ಹಿಗಾಗಿ $x = 20$

$2x = 2(20) = 40$

$800 m^2$ ವಿಸ್ತೀರ್ಣವುಳ್ಳ ಮತ್ತು ಉದ್ದವು ಅಗಲದ ಎರಡರಷ್ಟಿರುವ ಒಂದು ಆಯತಾಕಾರದ ಮಾವಿನ ತೋಪನ್ನು ನಿರ್ಮಿಸಲು ಸಾಧ್ಯ ಅದರ ಉದ್ದ = 20 m ಮತ್ತು ಅಗಲ = 40 m

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

REVISION: MODEL QUESTIONS

13. Derive lens maker's formula for convex lens placed in an optical medium

Ans:- Assumptions made to derive Lens maker's formula: (..........Contd)

iv] The angle made by incident ray and refracted ray with the principal axis are small.

Sign Conventions:

i] All the distances are measured from the optical centre of the lens.

ii] Distances measured in the direction opposite to the direction of propagation of incident light are taken as negative.

Lens Maker's Formula for convex lens placed in an optical medium -

Consider a lens made of a material of absolute refractive index n_2. This lens is placed in a medium of absolute refractive index n_1 ($n_1 < n_2$). The lens is bounded by two spherical refracting surfaces XP_1Y and XP_2Y. C_1 and C_2 be their centres of curvature and R_1 and R_2 be their radii of curvature respectively. C is the optical centre of the lens as shown in the figure below -



Step- 1: Refraction at Surface XP_1Y: Let O be a point object lying in the rarer medium on the principal axis of the refracting surface XP_1Y. The incident ray OA after refraction at A bends towards the normal AC_1 and meets the principal axis at I_1 if the second surface XP_2Y were not present. So I_1 is the real image of the object O.

Since object lies in the rarer medium, so we have

$$-\frac{n_2}{u} + \frac{n_1}{v_1} = \frac{n_2 - n_1}{R_1}$$



Step- 2: Refraction at Surface XP_2Y: In fact, the ray AB refracted by the first surface XP_1Y is refracted at B by the second surface XP_2Y and it finally meets the principal axis at I. The point I acts as a virtual object placed in the denser medium for the spherical surface XP_2Y. Now it is the situation, when object is placed in the denser medium and image is formed in the rarer medium.

$$\therefore -\frac{n_2}{v_1} + \frac{n_1}{v} = \frac{n_2 - n_2}{R_2}$$



$$\therefore -\frac{n_2}{v_1} + \frac{n_1}{v} = \frac{n_1 - n_2}{R_2}$$

$$\Rightarrow -\frac{n_2}{v_1} + \frac{n_1}{v} = -\frac{(n_2 - n_1)}{R_2} \Rightarrow -\frac{n_1}{u} + \frac{n_1}{v} = (n_2 - n_1)\left(\frac{1}{R_1} - \frac{1}{R_2}\right)$$

$$\Rightarrow -\frac{1}{u} + \frac{1}{v} = \left(\frac{n_2}{n_1} - 1\right)\left(\frac{1}{R_1} - \frac{1}{R_2}\right)$$

But $\frac{n_2}{n_1}$ = n, relative refractive index of the lens w.r.t. the rarer medium.

$$\therefore -\frac{1}{u} + \frac{1}{v} = (n-1)\left(\frac{1}{R_1} - \frac{1}{R_2}\right) ....(i)$$

If objects is at infinity, the image is formed at the principal focus of the lens i.e., if $u = \infty$, $v = f$. Hence eqn. (i) becomes

$$-\frac{1}{\infty} + \frac{1}{f} = (n-1)\left(\frac{1}{R_1} - \frac{1}{R_2}\right)$$

$$\text{(or) } \frac{1}{f} = (n-1)\left(\frac{1}{R_1} - \frac{1}{R_2}\right) \quad \left(\because \frac{1}{\infty} = 0\right) ....(ii)$$

Eqn.(ii) represents Lens maker's formula.

14. Using Brewster's law, to show that reflected and refracted rays are mutually perpendicular to each other at Brewster's angle.

Ans:- Brewster's law - states that when light is incident at polarizing angle at the interface of a refracting medium, the refractive index of the medium is equal to the tangent of the polarizing angle. If p is polarizing angle and μ, the refractive index of the refracting medium, then according to Brewster's law,

$$\mu = \tan p \quad ....(1)$$

When light is incident at polarizing angle, the reflected light is found to be completely plane polarized.



(Contd)

ಪಕ್ಷಕ್ಕಾಗಿ ಉಸಿರು ಬಿಗಿ ಹಿಡಿದುಕೊಂಡು ತ್ಯಾಗ ಮಾಡಿದ್ದೇನೆ • ಪಕ್ಷವೇ ಮುಖ್ಯ – ಶಿವಕುಮಾರ್

‘ಯಾರೊಂದಿಗೂ ಭಿನ್ನಾಭಿಪ್ರಾಯವಿಲ್ಲ’

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಳಗಾವಿ: ‘ನನಗೆ ಯಾರೊಂದಿಗೂ ವೈಯಕ್ತಿಕ ಭಿನ್ನಾಭಿಪ್ರಾಯ ಇಲ್ಲ. ಯಾವ ಬಂಡಾಯವೂ ಇಲ್ಲ. ಪ್ರತಿಯೊಬ್ಬರನ್ನೂ ಸಮಾನವಾಗಿ ಕಾಣುವ ನನಗೆ ಎಲ್ಲರೂ ಒಂದೇ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಕಾಂಗ್ರೆಸ್‌ನಲ್ಲಿ ಬಂಡಾಯ ಇಲ್ಲವೇ’ ಎಂಬ ಪ್ರಶ್ನೆಗೆ ಇಲ್ಲಿ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಪಕ್ಷ ಸಂಘಟಿಸುವುದು, ಸರ್ಕಾರ ಭದ್ರವಾಗಿಡುವುದು ಮತ್ತು ಕಾರ್ಯಕರ್ತರನ್ನು ರಕ್ಷಿಸುವುದಷ್ಟೇ ನನ್ನ ಕೆಲಸ. ಬೇರೆ ಯಾವ ಸಂಗತಿಗೂ ನನ್ನ ಹೆಸರನ್ನು ಬಳಸಬೇಡಿ. ಯಾರೋ ಹೇಳಿದ ಸುಳ್ಳನ್ನು ಪತ್ರಕರ್ತರು ನಂಬಬಾರದು’ ಎಂದರು.

‘ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಬದಲಿಸುವಂತೆ ಕೆಲ ಸಚಿವರು ರಾಹುಲ್ ಗಾಂಧಿ ಅವರಿಗೆ ದೂರು ಕೊಡುತ್ತಿದ್ದಾರಾ’ ಎಂಬ ಪ್ರಶ್ನೆಗೆ, ‘ಸುಳ್ಳು ಮಾಹಿತಿ ನೀಡುತ್ತಿರುವ ಕೆಲವರು, ಮಾಧ್ಯಮದ ಘನತೆ ಹಾಳು ಮಾಡುತ್ತಿದ್ದಾರೆ. ಪಕ್ಷ ಸಂಘಟನೆ ದೃಷ್ಟಿಯಿಂದ ಈ ಸಮಾವೇಶದ ಸಮಿತಿ ಸದಸ್ಯರಾದ ಮಾಜಿ ಶಾಸಕ ಫಿರೋಜ್ ಸೇಠ್ ಅವರ ಮನೆಗೆ ಭಾನುವಾರ ಹೋಗಿದ್ದೆ. ಆದರೆ, ಕೆಲ ಮಾಧ್ಯಮದವರು ತಮಗೆ ತಿಳಿದಂತೆ ವರದಿ ಮಾಡಿದ್ದು ಸರಿಯಲ್ಲ’ ಎಂದರು.

‘ಕಾಂಗ್ರೆಸ್‌ನ 60 ಶಾಸಕರು ಬಿಜೆಪಿಗೆ ಬರುತ್ತಾರೆ’ ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಇಂಥ ನೀಚ ರಾಜಕಾರಣದ ಬಗ್ಗೆ ನೀವು ಪ್ರಶ್ನಿಸಿದರೆ ಹೇಗೆ? ಇದಕ್ಕೆಲ್ಲ ನಾನು ಉತ್ತರಿಸುವುದಿಲ್ಲ. ನಿಮಗೆ ಯಾರು ಏನೇ ಹೇಳಿದ್ದರೂ ಅದು ಸುಳ್ಳಿನ ಕಂತೆ’ ಎಂದರು.

ಉಸಿರು ಬಿಗಿ ಹಿಡಿದು ತ್ಯಾಗ ಮಾಡಿದ್ದೇನೆ: ‘ಪಕ್ಷಕ್ಕಾಗಿ ನಾನು ಈ ಹಿಂದಿನಿಂದಲೂ ಹಲವು ತ್ಯಾಗ ಮಾಡಿದ್ದೇನೆ. ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ ಹಾಗೂ ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರ್ಕಾರದಲ್ಲೂ ಉಸಿರು ಬಿಗಿ ಹಿಡಿದುಕೊಂಡು ತ್ಯಾಗ ಮಾಡಿದ್ದೇನೆ. ನನಗೆ ಪಕ್ಷವೇ ಮುಖ್ಯ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ಕೆಲಸ ಮಾಡುವವರ ಎದುರು ತಲೆಬಾಗಿ ಅವರ ಸೇವೆ ಮಾಡುತ್ತೇನೆ’ ಎಂದರು.

‘ನಿಮ್ಮ ತ್ಯಾಗಕ್ಕೆ ಯಾವಾಗ ಫಲ ಸಿಗುತ್ತದೆ’ ಎಂಬ ಪ್ರಶ್ನೆಗೆ, ‘ನಾನು ಹೀಗೆಯೇ ಮುಂದುವರಿಯುತ್ತೇನೆ. ನನಗೆ ಫಲದ ಅಗತ್ಯವಿಲ್ಲ’ ಎಂದರು.

‘ದೆಹಲಿ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ’ ಎಂದು ಕೇಳಿದಾಗ, ‘ನಾನೇ ಖುದ್ದಾಗಿ ದೆಹಲಿಗೆ ಹೋಗಿ ಮಹಿಳೆಯರಿಗೆ ತಿಂಗಳಿಗೆ ₹2,500 ನೀಡುವ ಪ್ಯಾರಿ ದೀದಿ ಯೋಜನೆ ಪ್ರಕಟಿಸಿದ್ದೆ’ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರನ್ನು ಈ ಪಟ್ಟಿಯಿಂದ ಕೈಬಿಟ್ಟಿರುವ ಕುರಿತ ಪ್ರಶ್ನೆಗೆ, ‘ಅವರು ಬಜೆಟ್ ತಯಾರಿ ನಡೆಸಿದ್ದಾರೆ. ಸಚಿವರು, ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಬೇಕಿದೆ. ಹೀಗಾಗಿ ಅವರಿಗೆ ಎಐಸಿಸಿ ಸಮಯ ನೀಡಿದೆ’ ಎಂದರು.

‘ಸುರ್ಜೇವಾಲಾ ವಿರುದ್ಧ ದೂರು ಕೊಡುವ ಪ್ರಶ್ನೆಯೇ ಇಲ್ಲ’

ಸತೀಶ್ ಜಾರಕಿಹೊಳಿ

‘ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಜತೆ ನಮ್ಮ ಸಂಬಂಧ ಚೆನ್ನಾಗಿದೆ. ಅವರ ವಿರುದ್ಧ ಪಕ್ಷದ ವರಿಷ್ಠರಿಗೆ ನಾವು ಯಾವುದೇ ದೂರು ಕೊಡುವ ಪ್ರಶ್ನೆಯೇ ಇಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಉದ್ಯಾನ ಕಾಶಿಯಲ್ಲಿ ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸುರ್ಜೇವಾಲಾ ಅವರ ವಿರುದ್ಧ ದೂರು ಕೊಟ್ಟಿರುವ ವಿಚಾರ ತಿಳಿದಿಲ್ಲ’ ಎಂದರು.

ಡಿ.ಕೆ.ಶಿವಕುಮಾರ್ ಮತ್ತು ತಮ್ಮ ಮಧ್ಯೆ ಆಂತರಿಕ ತಿಕ್ಕಾಟ ನಡೆದಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಸತೀಶ, ‘ಇದೂ ನನಗೆ ಗೊತ್ತಿಲ್ಲ. ಎಲ್ಲಿ ತಿಕ್ಕಾಟ ನಡೆದಿದೆ ಎಂಬುದನ್ನು ನೀವೇ ತೋರಿಸಿ’ ಎಂದರು.

‘ಅಂಬೇಡ್ಕರ್ ಅವರಿಗೆ ಗೌರವ ನೀಡದ ಕಾಂಗ್ರೆಸ್‌ನವರು, ಅಂಬೇಡ್ಕರ್ ಹೆಸರಿನಲ್ಲಿ ಕಾರ್ಯಕ್ರಮ ಮಾಡುತ್ತಿದ್ದಾರೆ’ ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಕ್ಕೆ ಉತ್ತರಿಸಿದ ಅವರು, ‘ಆಕ್ಷೇಪಾರ್ಹ ಹೇಳಿಕೆ ಮೂಲಕ ಕೇಂದ್ರ ಸಚಿವ ಅಮಿತ್ ಶಾ ಅವರು, ಅಂಬೇಡ್ಕರ್ ಅವರಿಗೆ ಅವಮಾನಿಸಿದ ವಿಷಯ ಎಲ್ಲರಿಗೂ ತಿಳಿದಿದೆ. ಹೀಗಾಗಿ ಇದರ ಬಗ್ಗೆ ಮಾತನಾಡುವ ನೈತಿಕತೆ ಯತ್ನಾಳ ಅವರಿಗಿಲ್ಲ’ ಎಂದರು.

ನಮ್ಮ ಬಣದಿಂದ ಅಭ್ಯರ್ಥಿ: ಯತ್ನಾಳ

ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬದಲಾವಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬಸನಗೌಡ ಪಾಟೀಲ ಯತ್ನಾಳ

ಹುಬ್ಬಳ್ಳಿ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬದಲಾವಣೆ ಆಗಲೇಬೇಕು. ಅಧ್ಯಕ್ಷರ ಚುನಾವಣೆಗೆ ನಮ್ಮ ಬಣದಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಶಾಸಕ ರಮೇಶ ಜಾರಕಿಹೊಳಿ ಅವರ ಜೊತೆ ಚರ್ಚಿಸಿ, ನಮ್ಮ ಅಭ್ಯರ್ಥಿಯನ್ನು ಅಂತಿಮಗೊಳಿಸಲಾಗುವುದು. ಈ ನಿಟ್ಟಿನಲ್ಲಿ ನಾವು ಸ್ಪಷ್ಟವಿದ್ದೇವೆ’ ಎಂದು ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

‘ಹಿಂದೂ ಕಾರ್ಯಕರ್ತರ ರಕ್ಷಣೆ ಮಾಡಿದ್ದರೆ ಬಿಜೆಪಿಯವರು ವಿಧಾನ ಸಭಾ ಚುನಾವಣೆಯಲ್ಲಿ ಸೋಲುತ್ತಿರಲಿಲ್ಲ. ಬಿಜೆಪಿಯಲ್ಲೂ ಸಾಕಷ್ಟು ತಪ್ಪುಗಳಿವೆ’ ಎಂದು ಅವರು ತಿಳಿಸಿದರು.

ತನಿಖೆ ಆಗಲಿ: 'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಹಲವು ಕಡತಗಳಿಗೆ ವಿಜಯೇಂದ್ರ ಅವರೇ ಯಡಿಯೂರಪ್ಪ ಅವರ ನಕಲಿ ಸಹಿ ಮಾಡಿದ್ದಾರೆ. ಇದರ ಬಗ್ಗೆ ತನಿಖೆಯಾಗಲಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಾಕತ್ತು ಇದ್ದರೆ ತನಿಖೆ ಮಾಡಿಸಲಿ' ಎಂದು ಒತ್ತಾಯಿಸಿದರು.

‘ನಕಲಿ ಸಹಿ ಮಾಡಿದ ವ್ಯಕ್ತಿಯನ್ನು ಪಕ್ಷದ ಅಧ್ಯಕ್ಷ ಅಥವಾ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಮಾಡಬಹುದೇ? ಅದಕ್ಕಾಗಿ ಅವರ ವಿರುದ್ಧ ಸಮರ್ಥ ಅಭ್ಯರ್ಥಿಯನ್ನು ನಮ್ಮ ಬಣದಿಂದ ಕಣಕ್ಕಿಳಿಸಲಾಗುವುದು’ ಎಂದು ಹೇಳಿದರು.

‘ಚುನಾವಣಾ ಅಖಾಡಕ್ಕೆ ನಾವೂ ಸಿದ್ಧ’

ಪ್ರಜಾವಾಣಿ ವಾರ್ತೆ

ರೇಣುಕಾಚಾರ್ಯ

ದಾವಣಗೆರೆ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಸಂಬಂಧ ಚುನಾವಣಾ ಅಖಾಡಕ್ಕೆ ನಾವೂ ಸಿದ್ಧರಿದ್ದೇವೆ. ತಾಕತ್ತಿದ್ದರೆ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಸ್ಪರ್ಧೆ ಮಾಡಲಿ’ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಸವಾಲು ಹಾಕಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಬಿ.ಎಸ್. ಯಡಿಯೂರಪ್ಪ ಅವರ ಕೈಕಾಲು ಹಿಡಿದು ಪಕ್ಷಕ್ಕೆ ಬಂದಿರುವ ನೀನು (ಯತ್ನಾಳ) ನನಗೆ ಲೆಕ್ಕವೇ ಅಲ್ಲ. ನೀನೊಬ್ಬ 420. ನಿನ್ನಂತ ವಿಕೃತ ಮನಸ್ಸು ನನಗಿಲ್ಲ. ನೀನು ಒಂದು ಹೆಜ್ಜೆ ಮುಂದಿಟ್ಟರೆ, ನಾನು 10 ಹೆಜ್ಜೆ ಮುಂದಿಡುತ್ತೇನೆ’ ಎಂದು ಏಕವಚನದಲ್ಲಿ ಟೀಕಿಸಿದರು.

‘ಅಲ್ಲಿರುವುದೇ (ಯತ್ನಾಳ ಬಣ) ಮೂರು ಮತ್ತೊಂದು. ಅವರೆಲ್ಲ ಕೆಲಸಕ್ಕೆ ಬಾರದವರು. ರಮೇಶ ಜಾರಕಿಹೊಳಿ ಅವರನ್ನೂ ಯತ್ನಾಳ ಕೆಡಿಸುತ್ತಿದ್ದಾರೆ’ ಎಂದು ದೂರಿದರು.

ವಿಜಯೇಂದ್ರಗೆ ಅನುಭವದ ಕೊರತೆ: ‘ಬಿ.ವೈ. ವಿಜಯೇಂದ್ರ ಅವರಿಗೆ ಅನುಭವದ ಕೊರತೆಯಿದೆ. ಎಲ್ಲರನ್ನೂ ಒಳಗೊಳ್ಳುವ, ಕಾಂಗ್ರೆಸ್ ನಾಯಕರನ್ನು ಸಮರ್ಥವಾಗಿ ಎದುರಿಸುವಂತಹ ನಾಯಕರನ್ನು ರಾಜ್ಯ ಅಧ್ಯಕ್ಷರನ್ನಾಗಿ ಮಾಡಬೇಕಿದೆ. ಈ ವಿಚಾರದಲ್ಲಿ ಪಕ್ಷದ ತೀರ್ಮಾನಕ್ಕೆ ಬದ್ಧ’ ಎಂದು ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಹೇಳಿದರು.

‘ಬಸನಗೌಡ ಪಾಟೀಲ ಯತ್ನಾಳ ಅಂಥವರು ಅಧ್ಯಕ್ಷರಾಗಬೇಕು. ಆದರೆ, ಅವರು ವಿರೋಧ ಪಕ್ಷದ ನಾಯಕರಾಗುವ ಸಾಧ್ಯತೆ ಇದೆ. ಪಕ್ಷದ ರಾಷ್ಟ್ರೀಯ ನಾಯಕರಿಗೆ ರಾಜ್ಯದ ವಿಚಾರಗಳು ತಿಳಿದಿವೆ. ಬಿಜೆಪಿಯಲ್ಲಿನ ಸಮಸ್ಯೆ ಬಗೆಹರಿಯುವ ವಿಶ್ವಾಸವಿದೆ. ಇನ್ನು 2-3 ತಿಂಗಳಲ್ಲಿ ಬದಲಾವಣೆ ಆಗಲಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಾಗೋಡುಗೆ ಎರಡು ವಿ.ವಿ ಗೌರವ ಡಾಕ್ಟರೇಟ್



ಶಿವಮೊಗ್ಗ: ಹಿರಿಯ ರಾಜಕಾರಣಿ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರಿಗೆ ಜಿಲ್ಲೆಯ ಎರಡು ವಿಶ್ವವಿದ್ಯಾಲಯಗಳಿಂದ ಡಾಕ್ಟರೇಟ್ ಗೌರವ ಘೋಷಿಸಿದ್ದು, ಒಂದೇ ದಿನ ಪ್ರದಾನ ಮಾಡಲಾಗುತ್ತದೆ.

ಕುವೆಂಪು ವಿಶ್ವವಿದ್ಯಾಲಯ ಹಾಗೂ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ಘೋಷಿಸಿದ್ದು, ಇದೇ 22ರಂದು ಪ್ರತ್ಯೇಕವಾಗಿ ನಡೆಯಲಿರುವ ಘಟಿಕೋತ್ಸವಗಳಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ತಿಮ್ಮಪ್ಪ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ. ಕುವೆಂಪು ವಿ.ವಿ.ಯಲ್ಲಿ ಬುಧವಾರ ಬೆಳಿಗ್ಗೆ 10.30ಕ್ಕೆ ಘಟಿಕೋತ್ಸವ ಆಯೋಜನೆಗೊಂಡಿದ್ದರೆ, ಮಧ್ಯಾಹ್ನ 2ಕ್ಕೆ ಇರುವಕ್ಕಿ ಕ್ಯಾಂಪಸ್‌ನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಘಟಿಕೋತ್ಸವ ನಡೆಯಲಿದೆ.

ಮನುಷ್ಯ ಆಸೆ ಪಡುವುದು ತಪ್ಪೇನೂ ಅಲ್ವಲ್ಲ– ಶಿವಲಿಂಗೇಗೌಡ ಅಭಿಮತ

ಪಕ್ಷ ಹೇಳಿದರೆ ತ್ಯಾಗ ಮಾಡಬೇಕು: ದಿನೇಶ್

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಬೆಂಗಳೂರು: ‘ತ್ಯಾಗ ಮತ್ತು ಅಧಿಕಾರ ಎರಡೂ ಜೊತೆಯಲ್ಲೇ ಬರುತ್ತದೆ. ಪಕ್ಷ ನಮಗೆ ಅಧಿಕಾರ ಕೊಟ್ಟಿದೆ. ಅಧಿಕಾರ ಬಳಸಿಕೊಂಡು ಒಳ್ಳೆಯ ಕೆಲಸ ಮಾಡಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ತ್ಯಾಗ ಮಾಡಿದ್ದೇನೆ’ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪಕ್ಷ ಹೇಳಿದರೆ ತ್ಯಾಗ ಮಾಡಬೇಕು’ ಎಂದರು.

‘ನಮ್ಮಲ್ಲಿ ಸ್ವಲ್ಪ ಮಟ್ಟಿನ ಆಂತರಿಕ ಸಂಘರ್ಷ ಇರಬಹುದು. ಆದರೆ, ಬಿಜೆಪಿಯಲ್ಲಿನ ಆಂತರಿಕ ಕಿತ್ತಾಟ ವಿಕೋಪಕ್ಕೆ ಹೋಗಿದೆ. ಬಿಜೆಪಿಯವರು ಹಣ, ಜಾತಿ ಮೇಲೆ ರಾಜಕೀಯ ಮಾಡುತ್ತಿದ್ದಾರೆ’ ಎಂದರು.

ಕಾಂಗ್ರೆಸ್‌ನವರು ‘ನಕಲಿ ಗಾಂಧಿಗಳು’ ಎಂಬ ಆರ್. ಅಶೋಕ ಟೀಕೆಗೆ ಪ್ರತಿಕ್ರಿಯಿಸಿದ ದಿನೇಶ್, ‘ಈ ರೀತಿ ಹೇಳಿಕೆ ಕೊಡುವುದು ಸರಿಯಲ್ಲ. ಅವರು ಸ್ವಲ್ಪ ಗಾಂಭೀರ್ಯದಿಂದ ನಡೆದುಕೊಳ್ಳಲಿ’ ಎಂದರು.

ಪವರ್ ಶೇರಿಂಗ್ ಏನೂ ಇಲ್ಲ– ಶಿವಲಿಂಗೇಗೌಡ: ‘ಪವರ್ ಶೇರಿಂಗ್ ಏನೂ ಇಲ್ಲ. ಪಕ್ಷ ಪ್ರಬಲವಾಗಿದೆ, ಗಟ್ಟಿಯಾಗಿದೆ. ಹೈಕಮಾಂಡ್ ಕೊಡುವ ನಿರ್ದೇಶನಕ್ಕೆ ಎಲ್ಲರೂ ಬದ್ಧರಾಗಿ ಇರಬೇಕಾಗುತ್ತದೆ. ನಾನೂ ಬದ್ಧ ಎಂದು ಮುಖ್ಯಮಂತ್ರಿಯೂ ಹೇಳಿದ್ದಾರೆ’ ಎಂದು ಕಾಂಗ್ರೆಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

‘ಎಲ್ಲಿಯವರೆಗೆ ಹೈಕಮಾಂಡ್ ಹೇಳುತ್ತೋ ಅಲ್ಲಿಯವರೆಗೆ ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಇರುತ್ತಾರೆ’ ಎಂದ ಅವರು, ‘ಸತೀಶ ಜಾರಕಿಹೊಳಿ ಅವರಿಗೆ ಅವರದ್ದೇ ಆದ ಸಾಮರ್ಥ್ಯ ಇರಬಹುದು. ಹೀಗಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೇಳಿರಬಹುದು. ಮನುಷ್ಯ ಆಸೆ ಪಡುವುದು ತಪ್ಪೇನೂ ಅಲ್ವಲ್ಲ’ ಎಂದರು.

‘ನಾನೇನೂ ಕಡಿಮೆ ಇಲ್ಲ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೂ ಮಾಡುತ್ತೇನೆ. ಆದರೆ, ಆ ಗೋಜಿಗೆ ಹೋಗುವುದಿಲ್ಲ’ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಕಾಂಗ್ರೆಸ್ ಸೇರುವ ಬಗ್ಗೆ ನನಗೆ ಮಾಹಿತಿಯಿಲ್ಲ’ ಎಂದರು.

‘ನಮ್ಮಲ್ಲಿ ಯಾವುದೇ ಕಿತ್ತಾಟ ಇಲ್ಲ’

ಪ್ರಿಯಾಂಕ್ ಖರ್ಗೆ

‘ನಮ್ಮಲ್ಲಿ ಯಾವುದೇ ಕಿತ್ತಾಟ ಇಲ್ಲ, ಆಂತರಿಕ ಪ್ರಜಾಪ್ರಭುತ್ವವಿದೆ. ವರಿಷ್ಠರ ಮುಂದೆ ಏನು ಹೇಳಬೇಕೊ ಅದನ್ನು ಪಕ್ಷದ ನಾಯಕರು ಹೇಳಿಕೊಂಡಿದ್ದಾರೆ. ಬದಲಾವಣೆ ವಿಚಾರ ಏನೇ ಇದ್ದರೂ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿಯಲ್ಲಿ ಆಂತರಿಕ ಕಿತ್ತಾಟ ಮಾತ್ರವಲ್ಲ ಕ್ರಿಮಿನಲ್ ಅಂಶಗಳಿರುವ ಆರೋಪಗಳಿವೆ. ಮಾಜಿ ಮುಖ್ಯಮಂತ್ರಿಯ ಸಹಿಯನ್ನೇ ಫೋರ್ಜರಿ ಮಾಡಿದ ಆರೋಪ ವಿಜಯೇಂದ್ರ ವಿರುದ್ಧ ಆರೋಪ ಇದೆ. ಆ ಆರೋಪ ಗಂಭೀರ ಅಲ್ಲವೇ? ಇದಕ್ಕೆ ವಿಜಯೇಂದ್ರ ಉತ್ತರ ಕೊಡಬೇಕು’ ಎಂದರು.

‘ಸಚಿವ ಎಂ.ಬಿ. ಪಾಟೀಲ ಅವರು ಹೇಳಿದಂತೆ ಬಿಜೆಪಿ, ಜೆಡಿಎಸ್ ಶಾಸಕರು ಸೂಕ್ತ ಸಮಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬರುತ್ತಾರೆ’ ಎಂದರು.

‘ಶಾಸಕರು ಕಾಂಗ್ರೆಸ್ ತೊರೆಯದಂತೆ ಗಮನಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾ ಕ್ಷೇತ್ರಗಳಿಗೆ ಅಗತ್ಯ ಅನುದಾನ ನೀಡುವ ಮೂಲಕ ಕಾಂಗ್ರೆಸ್ ತನ್ನ ಶಾಸಕರನ್ನು ಉಳಿಸಿಕೊಳ್ಳಲಿ. ನಂತರ ಬೇರೆ ಪಕ್ಷದ ಶಾಸಕರನ್ನು ಸೆಳೆಯುವ ಕುರಿತು ಯೋಚಿಸಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸುದ್ದಿಗಾರರ ಜತೆ ಅವರು ಮಾತನಾಡಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ‘ಕಾಂಗ್ರೆಸ್ ಶಾಸಕರು ಪಕ್ಷ ಬಿಡಲು ಸಿದ್ಧರಾಗಿದ್ದಾರೆ. ಮೊದಲು ಅವರ ಪಕ್ಷದಲ್ಲಿರುವ ಸಮಸ್ಯೆ ಬಗೆಹರಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

30ಗಳಲ್ಲಿ 2 ಬಾರಿ ಗರ್ಭಿಣಿಯರ ಆರೋಗ್ಯ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರ್ಭಿಣಿಯರ ಸುರಕ್ಷತೆ ದೃಷ್ಟಿಯಿಂದ ಮಾತೃತ್ವ ಸುರಕ್ಷತಾ ಅಭಿಯಾನವನ್ನು ದೊಡ್ಡ ಮಟ್ಟದಲ್ಲಿ ನಡೆಸಲು ನಿರ್ಧರಿಸಿರುವ ಆರೋಗ್ಯ ಇಲಾಖೆ, ಪ್ರತಿ ತಿಂಗಳು 9 ಹಾಗೂ 24ರಂದು ಗರ್ಭಿಣಿಯರ ಉಚಿತ ಆರೋಗ್ಯ ತಪಾಸಣೆ ನಡೆಯಲಿದೆ.

ಜನವರಿ 22 ರಂದು ರಾಯಚೂರಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಗರ್ಭಿಣಿಯರಿಗಾಗಿಯೇ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡಿದ್ದು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ತಾಯಂದಿರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಗರ್ಭಿಣಿಯರ ಆರೋಗ್ಯ ತಪಾಸಣಾ ಶಿಬಿರಗಳನ್ನು ದೊಡ್ಡಮಟ್ಟದಲ್ಲಿ ರಾಜ್ಯದಾದ್ಯಂತ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನಡೆಸುವಂತೆ ಸಚಿವರು ಸೂಚನೆ ನೀಡಿದ್ದಾರೆ.

ಗುಣಮಟ್ಟದ ಸೇವೆ ಒದಗಿಸುವ ಸಲುವಾಗಿ ಆರೋಗ್ಯ ಇಲಾಖೆ ಹಲವು ಕ್ರಮಗಳನ್ನು ಕೊಂಡಿದೆ. ಪ್ರತಿ ಗರ್ಭಿಣಿಗೆ ಜನನ ಯೋಜನೆಯನ್ನು ಮುಂಚಿತವಾಗಿಯೇ ಖಚಿತಪಡಿಸಿಕೊಳ್ಳುವುದು, 500 ಎಂಸಿಜಿ ಕ್ಯಾಲ್ಸಿಯಂ ಅನ್ನು ಗರ್ಭಧಾರಣೆಯ 14ನೇ ವಾರದಿಂದ ಹೆರಿಗೆ ಮತ್ತು 6 ತಿಂಗಳ ನಂತರದ ಅವಧಿಗೆ ನೀಡುವುದು, ಪ್ರತಿ ಭೇಟಿಯಲ್ಲಿ ರಕ್ತದೊತ್ತಡ ಮತ್ತು ತೂಕವನ್ನು ದಾಖಲು ಮಾಡುವುದು, ಹೆರಿಗೆಯ ಲಕ್ಷಣಗಳು ಮತ್ತು ಅಪಾಯದ ಲಕ್ಷಣಗಳ ಬಗ್ಗೆ, ಗರ್ಭಿಣಿಯರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಅರಿವು ಮೂಡಿಸುವ ಕ್ರಮಗಳನ್ನು ಕೈಗೊಂಡಿದೆ.

ಅಪಘಾತದಲ್ಲಿ ತಂದೆಯ ಸಾವು ಮದುವೆ ಬಳಿಕ ವಧುವಿಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಚಂದ್ರು

ತರೀಕೆರೆ (ಚಿಕ್ಕಮಗಳೂರು): ಮದುವೆ ಮುನ್ನಾ ದಿನ ಅಪಘಾತದಲ್ಲಿ ಮೃತಪಟ್ಟ ತಂದೆಯ ಸಾವಿನ ವಿಷಯ ಗೋಪ್ಯವಾಗಿಟ್ಟು ಮಗಳ ಮದುವೆ ಕಾರ್ಯವನ್ನು ಸಂಬಂಧಿಕರು ಪೂರ್ಣಗೊಳಿಸಿದ್ದಾರೆ.

ಪಟ್ಟಣದ ನಾಗಪ್ಪ ಕಾಲೊನಿಯ ನಿವಾಸಿ ಗೋಣಿಚೀಲದ ವ್ಯಾಪಾರಿ ಪಾಪಣ್ಣ ಅವರ ಮಗ ಚಂದ್ರು(45) ಮೃತಪಟ್ಟವರು.

ಚಂದ್ರು ಅವರ ಪುತ್ರಿ ದೀಕ್ಷಾ ಅವರ ವಿವಾಹ ಬೀರೂರಿನ ಪತ್ರೆ ಕಲ್ಯಾಣ ಮಂಟಪದಲ್ಲಿ ಭಾನುವಾರ ಮತ್ತು ಸೋಮವಾರ ನಿಗದಿಯಾಗಿತ್ತು. ಲಿಂಗದಹಳ್ಳಿ ಸಮೀಪದ ಹುಲಿತಿಮ್ಮಾಪುರ ಗ್ರಾಮದಲ್ಲಿ ಸಂಬಂಧಿಕರಿಗೆ ಶನಿವಾರವೇ ಆಹ್ವಾನ ಪತ್ರಿಕೆ ನೀಡಿದ್ದರು.

ಮರೆತಿದ್ದ ಒಬ್ಬರಿಗೆ ಆಹ್ವಾನ ನೀಡಲು ಭಾನುವಾರ ಬೆಳಿಗ್ಗೆಯೇ ಚಂದ್ರು ಬೈಕ್‌ನಲ್ಲಿ ಮತ್ತೆ ಹೋಗಿದ್ದರು. ವಾಪಸ್ ಬರುವಾಗ ಬೆಳಿಗ್ಗೆ 8.30ರ ಸುಮಾರಿಗೆ ಮರಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತು. ಸ್ಥಳೀಯರು ಕೂಡಲೇ ಅವರನ್ನು ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಭಾನುವಾರ ಮಧ್ಯಾಹ್ನದ ವೇಳೆಗೆ ಅವರು ಮೃತಪಟ್ಟರು.

ತಂದೆ ಮೃತಪಟ್ಟಿರುವ ವಿಷಯ ತಿಳಿಸಿದರೆ ಮಗಳ ವಿವಾಹ ನಿಲ್ಲಲಿದೆ ಎಂಬ ಕಾರಣಕ್ಕೆ ಸಂಬಂಧಿಕರು ವಿಷಯ ಮುಚ್ಚಿಟ್ಟಿದ್ದರು. ವಧುವಿನ ತಾಯಿಗೂ ವಿಷಯ ತಿಳಿಸಿರಲಿಲ್ಲ. ವರನ ಕಡೆಯ ಪ್ರಮುಖರಿಗೆ ವಿಷಯ ತಿಳಿಸಿ ಸೋಮವಾರ ಬೆಳಿಗ್ಗೆ ಮದುವೆ ಕಾರ್ಯಗಳನ್ನು ಪೂರ್ಣಗೊಳಿಸಿದರು.

ಮುಹೂರ್ತ ಮುಗಿದ ಬಳಿಕ ಸಾವಿನ ವಿಷಯ ತಿಳಿಸಿದ್ದು, ಮದುವೆ ಮನೆಯಲ್ಲಿ ಆಕ್ರಂದನ ಮುಗಿಲು ಮುಟ್ಟಿದೆ. ಚಂದ್ರು ಮೃತದೇಹದ ಅಂತ್ಯಕ್ರಿಯೆ ಸೋಮವಾರ ಸಂಜೆ ನೆರವೇರಿತು.

‘ಮುಡಾ’ ಪ್ರಕಟಣೆ ರಾಜಕೀಯ ಪ್ರೇರಿತ’

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: 'ಮುಡಾ' ಕುರಿತು ಜಾರಿ ನಿರ್ದೇಶನಾಲಯ (ಇ.ಡಿ) ನೀಡಿದ ಪತ್ರಿಕಾ ಪ್ರಕಟಣೆ ರಾಜಕೀಯ ಪ್ರೇರಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಮುಡಾ ಹಗರಣದ ಬಗ್ಗೆ ಹೊರಡಿಸಿದ ಪತ್ರಿಕಾ ಪ್ರಕಟಣೆಗೂ ನನಗೂ ಸಂಬಂಧವಿಲ್ಲ. ಬಿಜೆಪಿ ನಾಯಕರು ಇ.ಡಿ ಮೂಲಕ ಈ ಪ್ರಕಟಣೆ ಬಿಡುಗಡೆ ಮಾಡಿಸಿದ್ದಾರೆ’ ಎಂದು ದೂರಿದರು.

ಹಣ ದುರುಪಯೋಗದ ಪ್ರಶ್ನೆ ಇಲ್ಲ: ‘ಮುಡಾ’ ಮತ್ತು ವಾಲ್ಮೀಕಿ ನಿಗಮದ ಹಗರಣ ಕುರಿತ ಪ್ರತಿಪಕ್ಷಗಳ ಆರೋಪದಲ್ಲಿ ಹುರುಳಿಲ್ಲ. ಬೆಳಗಾವಿ ಸಮಾವೇಶಕ್ಕೆ ರಾಜ್ಯದ ತೆರಿಗೆ ಹಣ ದುರುಪಯೋಗ ಆಗಿಲ್ಲ. ಇಂತಹ ವಿಷಯಗಳಲ್ಲಿ ಬಿಜೆಪಿ ಅಪಪ್ರಚಾರ ಮಾಡುತ್ತಿದೆ ಎಂದು ಹೇಳಿದರು.

ತಪ್ಪಿತಸ್ಥರ ವಿರುದ್ಧ ಕ್ರಮ: ವಿಜಯಪುರದಲ್ಲಿ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮೈಸೂರು ಚಾಮರಾಜನಗರ ಜಿಲ್ಲೆಗಳ ಗ್ರಾಮೀಣ ಭಾಗದಲ್ಲಿ ಜನರಿಗೆ ಕಿರುಕುಳ ನೀಡುತ್ತಿರುವ ‘ಕಿರು ಸಾಲ’ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560027

ಚುನಾವಣಾ ನೋಟಿಸು

ಈ ಸಹಕಾರ ಸಂಘದ ಆಡಳಿತ ಮಂಡಳಿ ಆಯ್ಕೆ ಮಾಡಲು ಚುನಾವಣೆಯನ್ನು ದಿನಾಂಕ: 02–02–2025 ರಂದು ಭಾನುವಾರ ಬೆಳಗ್ಗೆ 9:00 ರಿಂದ ಸಂಜೆ 4:00 ಘಂಟೆಯವರೆಗೆ “ಬಿ. ವೆಂಕಟರಾವ್, ಎಸ್ ಸಜ್ಜನ್‌ರಾವ್ ಮರಾಠ ಸ್ಟೂಡೆಂಟ್ಸ್ ಹೋಮ್” ನಂ.04, ಬಸವನಗುಡಿ ರಸ್ತೆ, ಬೆಂಗಳೂರು–560004. ಇಲ್ಲಿ ನಡೆಸಲು ನಿಗದಿಪಡಿಸಿ, ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು, ದಿನಾಂಕ: 20–01–2025 ನಾಮಪತ್ರ ಸಲ್ಲಿಸಲು ಆರಂಭದ ದಿನವಾಗಿದ್ದು ದಿನಾಂಕ: 25–01–2025 ನಾಮಪತ್ರ ಸಲ್ಲಿಸಲು ಕಡೆಯ ದಿನಾಂಕವಾಗಿರುತ್ತದೆ. ಅರ್ಹ ಮತದಾರರಿಗೆ ಈಗಾಗಲೇ ಸೂಚನಾ ಪತ್ರವನ್ನು ಸಂಘದಿಂದ ಅಂಚೆ ಮೂಲಕ ಕಳುಹಿಸಲಾಗಿದೆ. ವೇಳಾ ಪಟ್ಟಿ ಸ್ವೀಕರಿಸದ ಸದಸ್ಯರು ಈ ಪ್ರಕಟಣೆಯನ್ನು ಕರೆ ಪತ್ರ ಎಂದು ಪರಿಗಣಿಸಿ ದಿನಾಂಕ: 02–02–2025 ರಂದು ನಡೆಯುವ ಚುನಾವಣೆಯಲ್ಲಿ ಸಂಘದಿಂದ ವಿತರಿಸಿರುವ ಅಥವಾ ಸಂಸ್ಥೆ ವಿತರಿಸಿರುವ ಗುರುತಿನ ತಂದು ಚುನಾವಣೆಯಲ್ಲಿ ತಮ್ಮ ಮತದಾನದ ಹಕ್ಕನ್ನು ಚಲಾಯಿಸಬೇಕೆಂದು ಹಾಗೂ ಹೆಚ್ಚಿನ ಮಾಹಿತಿಗೆ ಸಂಘಕ್ಕೆ ಭೇಟಿ ನೀಡಲು ಕೋರಿದೆ.

ಸಹಿ/–

ಸ್ಥಳ: ಬೆಂಗಳೂರು, ದಿನಾಂಕ: 20–01–2025

(ಪವನ್ ಕುಮಾರ್. ಎಸ್) ರಿಟರ್ನಿಂಗ್ ಅಧಿಕಾರಿ

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.

ಇ–ಮೇಲ್: jdfarmsahvs@gmail.com ಫೋನ್: 080–23412767

ಸಂಖ್ಯೆ: CAH/PDKLDA/LIV-INS/SHORT TERM RE-TENDER/2024 ದಿನಾಂಕ : 20.01.2025

ಅಲ್ಪಾವಧಿ ಮರುಟೆಂಡರ್ ಅಧಿಸೂಚನೆ

(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಇವರು 2024–25 ನೇ ಸಾಲಿಗೆ ಜಾನುವಾರು ವಿಮೆ ಯೋಜನೆ ಅನುಷ್ಠಾನಕ್ಕಾಗಿ ವಿಮಾ ಸಂಸ್ಥೆಗಳನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಒಂದು ವರ್ಷದ ಅವಧಿಗೆ ಅಲ್ಪಾವದಿ ಮರು ಟೆಂಡರ್ ನ್ನು ಕರೆಯಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ: 920/– ಲಕ್ಷಗಳು

ಪೂರ್ಣ ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 20–01–2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 20–01–2025 ರಿಂದ ದಿನಾಂಕ: 03–02–2025 ರ ಸಾಯಂಕಾಲ 5.30 ಘಂಟೆಯೊಳಗೆ ಅಪ್ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್ ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಪಶುವೈದ್ಯಾಧಿಕಾರಿಗಳು(ಕೆ.ಎಲ್.ಡಿ.ಎ) ಹಾಗೂ ಸದಸ್ಯ ಕಾರ್ಯದರ್ಶಿಗಳು, ಟೆಂಡರ್ ಆಹ್ವಾನ ಸಮಿತಿ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/4453/Zen/2024-25

ಕರ್ನಾಟಕ ಲೋಕ ಸೇವಾ ಆಯೋಗ,

ಲೋಕಸೇವಾ ಆಯೋಗದ ಕಛೇರಿ, ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ:ಪಿಎಸ್‌ಸಿ 538ಇಪ /2024-25/583 ದಿನಾಂಕ: 18-01-2025

ಸಂಕ್ಷಿಪ್ತ ಅಧಿಸೂಚನೆ

ಆಯೋಗವು ನಡೆಸಲಿರುವ 2024ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಸಂಖ್ಯೆ:ಪಿಎಸ್‌ಸಿ 538 ಇಪ/2024-25/554, ದಿನಾಂಕ: 21-12-2024ರ ಅಧಿಸೂಚನೆಯಲ್ಲಿ ಅರ್ಹ ಸರ್ಕಾರಿ / ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಅಧಿಕಾರಿ / ನೌಕರರುಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(1) ಆನ್‌ಲೈನ್ ಅರ್ಜಿ ಭರ್ತಿಮಾಡಿ ಸಲ್ಲಿಸಲು ಪ್ರಾರಂಭಿಕ ದಿನಾಂಕ : 30.12.2024
(2) ಆನ್‌ಲೈನ್ ಅರ್ಜಿ ಭರ್ತಿಮಾಡಿ ಸಲ್ಲಿಸಲು ಕೊನೆಯ ದಿನಾಂಕ : 29.01.2025
(3) ಶುಲ್ಕ ಪಾವತಿಸಲು ಕೊನೆಯ ದಿನಾಂಕ : 31.01.2025

ಅರ್ಹ ಅಭ್ಯರ್ಥಿಗಳು ಮೇಲ್ಕಂಡ ದಿನಾಂಕದೊಳಗಾಗಿ ಕೆ.ಪಿ.ಎಸ್.ಸಿ. ಅಧಿಕೃತ ಅಂತರ್ಜಾಲ http://kpsc.kar.nic.in ನಲ್ಲಿ, ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದು ಮತ್ತು ಆನ್‌ಲೈನ್ ಮೂಲಕವೇ ಶುಲ್ಕವನ್ನು ಪಾವತಿಸತಕ್ಕದ್ದು, ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಆಯೋಗದ ಮೇಲ್ಕಂಡ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ದಿನಾಂಕ: 21–12–2024ರ ಅಧಿಸೂಚನೆಯನ್ನು ನೋಡಬಹುದಾಗಿದೆ. ಹಾಗೂ ಅರ್ಜಿಗಳನ್ನು ಸಲ್ಲಿಸುವ ಹಂತದಲ್ಲಿ, ತಾಂತ್ರಿಕ ಸಮಸ್ಯೆಗಳುಂಟಾದಲ್ಲಿ ಸೇವಾ ಸಿಂಧುವಿನ ಸಂಖ್ಯೆ: 87926 62814, 87926 62816 ಮತ್ತು 080–2227 9954 ಪಡೆಯಲು ಸೂಚಿಸಿದೆ.

(ಆನಂದ್ ಹೆಚ್ ತಳವಾರ್)
ಉಪ ಕಾರ್ಯದರ್ಶಿ, ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು,

DIPR/CP/AAPL/RO4454/24-25

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಕಚೇರಿ

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ 2ನೇ ಕರೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಮಾತ್ರ)

1ನೇ ಕರೆ ಟೆಂಡರ್ ಜಾಹಿರಾತು ಸಂಖ್ಯೆ

ನಂ.ವಾಸಾಇ/ಧಾ/367/ದೇಶಪಾಂಡೆಪಬ್ಲಿಸಿಟಿ/2024–25 ದಿನಾಂಕ:06–09–2024.

ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯ ಅನುದಾನದಡಿಯಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮಗಳನ್ವಯ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (kppp) ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಸಂಪೂರ್ಣ ವಿವರಗಳಿಗಾಗಿ / ದಾಖಲೆಗಳಿಗಾಗಿ ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ದಿನಾಂಕ: 17/01/2025 ರಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಕಚೇರಿಗೆ ಕಚೇರಿ ವೇಳೆಯಲ್ಲಿ ಭೇಟಿ ನೀಡಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ಗಳಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಕಾಮಗಾರಿಯ ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ) ಹು.ಧಾ.ಮ.ಪಾ ಸರ್. ಸಿದ್ದಪ್ಪ ಕಂಬಳಿ ರಸ್ತೆ, ಹುಬ್ಬಳ್ಳಿ ಇವರ ಕಚೇರಿಯಲ್ಲಿ ನಡೆಸಲಾಗುವುದು.

1)DMA/2024-25/BD/WORK_INDENT26191/CALL-2
2)DMA/2024-25/BD/WORK_INDENT26193/CALL-2

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 03/02/2025 ರಂದು 16.30.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04/02/2025 ರಂದು 16.35.00 ಘಂಟೆಯ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 11/02/2025 ರಂದು ತೆರೆಯಲಾಗುವುದು. ಅಥವಾ ತಾಂತ್ರಿಕಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಕಾಮಗಾರಿಗಳಿಗೆ ಟೆಂಡರ್ ಕುರಿತು ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23/01/2025 ರಂದು 17.00.00 ಘಂಟೆವರೆಗೆ, ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆಯ ದಿನಾಂಕ : 24/01/2025 ರಂದು 11.00.00 ಘಂಟೆಗೆ ಜರುಗಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಯೋಜನೆ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/873/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

An ISO-9001:2015 & 14001:2015 Company

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.

ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com

ದಿನಾಂಕ: 20.01.2025

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/IND0608	ಇಂಡಕ್ಷನ್ ಮೋಟಾರ್ ಗಳ ಖರೀದಿ	ಸರಕು	15-01-2025	03-02-2025
2	KSDL/2024-25/IND0642	ಇಂಟಿಗ್ರೇಟೆಡ್ ಏರ್ ಡ್ರೈಯರ್ ಮತ್ತು ಪ್ರಿ–ಫಿಲ್ಟರ್‌ನೊಂದಿಗೆ ಮೌಂಟೆಡ್ 272 ಲೀಟರ್ ಏರ್ ರಿಸೀವರ್‌ನೊಂದಿಗೆ ರೋಟರಿ ಸ್ಕ್ರೂ ಕಂಪ್ರೆಸರ್‌ನ ಖರೀದಿ	1 ಸಂ.	17-01-2025	03-02-2025
3	KSDL/2024-25/IND0644	ಟರ್ಬೋಪೋಲ್ 1270 (Turbopol 1270)ನ ಖರೀದಿ	28167 ಕೆ.ಜಿ.	18-01-2025	05-02-2025
4	KSDL/2024-25/IND0645	ಕೊಕಾಮಿಡೋಪ್ರೊಪಿಲ್ ಬೀಟೈನ್ (Cocamidopropyl Betaine (CAPB))ನ ಖರೀದಿ	35 ಮೆ.ಟ.	18-01-2025	05-02-2025
5	KSDL/2024-25/IND0646	ವೈಟ್ ಕ್ಲೇ (White clay) ಖರೀದಿ	418 ಮೆ.ಟ.	18-01-2025	05-02-2025
6	KSDL/2024-25/IND0647	ಕ್ವೆಸ್ಟಾಲ್ ಲಿಕ್ವಿಡ್ 501 (Questoll Liquid 501) ನ ಖರೀದಿ	28167 ಕೆ.ಜಿ.	18-01-2025	05-02-2025
7	KSDL/2024-25/IND0648	ಸೋಡಾ ಆಶ್ ಲೈಟ್ (Soda Ash Light)ನ ಖರೀದಿ	349 ಮೆ.ಟ.	18-01-2025	05-02-2025
8	KSDL/2024-25/IND0649	ಜಿಗಟ್ ಪೌಡರ್ (Jigat powder) ನ ಖರೀದಿ	50 ಮೆ.ಟ.	18-01-2025	05-02-2025
9	KSDL/2024-25/IND0650	ಸಲ್ಫೋಶೈನ್ ಡಿಎಸ್ 40 (Sulfoshine DS 40) ನ ಖರೀದಿ	3207 ಕೆ.ಜಿ.	18-01-2025	05-02-2025
10	KSDL/2024-25/IND0651	ಕ್ವೆಸ್ಟಾಲ್ ಪೌಡರ್ (Questoll Powder) ನ ಖರೀದಿ	5883 ಕೆ.ಜಿ.	18-01-2025	05-02-2025
11	KSDL/2024-25/IND0652	ಮರ್‌ಕ್ವಾಟ್ ಪ್ಲಸ್ 3330 (Merquat Plus 3330) ನ ಖರೀದಿ	268 ಕೆ.ಜಿ.	18-01-2025	05-02-2025
12	KSDL/2024-25/IND0653	ಪಾಲಿ ಎಥಿಲೀನ್ ಗ್ಲೈಕಾಲ್ 400 (Ployethylene Glycol 400 (PEG-400)) ನ ಖರೀದಿ	780 ಕೆ.ಜಿ.	18-01-2025	05-02-2025
13	KSDL/2024-25/SE0144	ಕೆಎಸ್‌ಡಿಎಲ್ ಬೆಂಗಳೂರಿನಿಂದ ಸಿದ್ಧಪಡಿಸಿದ ಉತ್ಪನ್ನಗಳನ್ನು ಸಿದ್ಧಪಡಿಸಿದ ಉತ್ಪನ್ನಗಳ ಕೇಂದ್ರಿಯ ಉಗ್ರಾಣದಿಂದ (CFGS) ಸುಂಕ ಪಾವತಿಗೊಂಡ ಉಗ್ರಾಣಕ್ಕೆ (DPG) ಬೆಂಗಳೂರು ಇಲ್ಲಿಗೆ ಒಂದು ವರ್ಷದ ಅವಧಿಗೆ ಸಾಗಿಸುವುದು	ಸೇವೆಗಳು	18-01-2025	27-01-2025
14	KSDL/2024-25/IND0654	ವಿಟಮಿನ್ ಇ ಅಸಿಟೇಟ್ (Vitamine E Acetate) ಖರೀದಿ	619 ಕೆ.ಜಿ.	20-01-2025	05-02-2025

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3 ಮತ್ತು 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

No. SPLOCA/ADM/CR/72/2024-25 Date: 18-01-2025

ಟೆಂಡರ್ ಪ್ರಕಟಣೆ

Under the powers conferred under sec 6(3) of the KPIDFE act THE SPECIAL OFFICER AND COMPETENT AUTHORITY, IMA & OTHER KPIDFE SCAM CASES is inviting pre-qualification tender for EoI to empanel eligible valuation agencies or individuals subjected to the final approval of the Government.

Interested agencies and/or individuals may apply only if they are qualified as per the condition of the wealth tax act and ICAI guidelines 2018 which are outlined in the tender document, uploaded in the e-procurement portal.

Schedule of Events:

Commencement of download of e-Tender Form From website-https://kppp.karnataka.gov.in/#/portal/portal-home.	20/01/2025
Last Date for Queries on or before	27/01/2025 till 5:00 p.m.
Pre-Bid Meeting on	29/01/2025 till 3:00 p.m.
Last Date for Uploading of EOI in e-procurement platform on or before	03/02/2025 till 5:00 p.m.
Opening of EOI	05/02/2025 till 12:00 p.m.
Empanelment Notification	To be intimated

Place for any query: O/o SPLOCA, IMA & Other KPIDFE Scam Cases, 3rd Floor, Podium Block, V V Towers Bengaluru - 560001. E-mail: splocaima21@gmail.com Contact: 080-29565353.

Details regarding Tender terms and conditions are available at e-procurement portal Https://kppp. karnataka.gov.in/#/portal/portal-home.

ಸಹಿ/–
ಸಹಾಯಕ ಆಯುಕ್ತರು,
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

DIPR/CP/4450/Zen/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ದುಡಿ, ಮೈ ಮುರಿದು ದುಡಿ, ಹೆಚ್ಚು ಹೆಚ್ಚಾಗಿ ದುಡಿ. ಆ ನಿನ್ನ ದುಡಿಮೆಯಲ್ಲಿ ಕ್ರಮವಿರಲಿ, ನಿಯಮವಿರಲಿ, ಗುರಿ ಇರಲಿ, ವಿವೇಚನೆ ಇರಲಿ, ದಕ್ಷತೆ ಇರಲಿ. -ಸರ್ ಎಂ.ವಿಶ್ವೇಶ್ವರಯ್ಯ

ಮಣ್ಣಿನ ಮಕ್ಕಳ ಕೊಕ್ಕೊಗೆ ವಿಶ್ವಕಪ್ ಹಿರಿಮೆ–ಗರಿಮೆ

ಭಾರತದ ಅಪ್ಪಟ ದೇಶಿ ಕ್ರೀಡೆ ಕೊಕ್ಕೊಗೆ ಈಗ ವಿಶ್ವಕಿರೀಟದ ಹೆಗ್ಗಳಿಕೆ. ನವದೆಹಲಿಯಲ್ಲಿ ಮುಕ್ತಾಯಗೊಂಡ ಕೊಕ್ಕೊ ಮೊದಲ ವಿಶ್ವಕಪ್ ಟೂರ್ನಿಯಲ್ಲಿ ಆತಿಥೇಯ ಭಾರತದ ಮಹಿಳಾ ಮತ್ತು ಪುರುಷ ತಂಡಗಳೆರಡೂ ಚಾಂಪಿಯನ್ ಪಟ್ಟಕ್ಕೇರಿವೆ. ದೇಶದ ವಿವಿಧ ಗ್ರಾಮೀಣ ಪ್ರದೇಶಗಳಿಂದ ಬಂದ ಆಟಗಾರರು ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡು ಸಂಭ್ರಮಿಸಿದ್ದು ಚಾರಿತ್ರಿಕ ಬೆಳವಣಿಗೆ. ಅದರಲ್ಲಿ ಮೈಸೂರು ಜಿಲ್ಲೆಯ ಕುರುಬೂರಿನ ಬಿ. ಚೈತ್ರಾ ಮತ್ತು ಬೆಂಗಳೂರಿನ ಎಂ.ಕೆ. ಗೌತಮ್ ಅವರೂ ಇದ್ದರು. ಇದರೊಂದಿಗೆ ಈ ಕ್ರೀಡೆಗೆ ಜಾಗತಿಕ ಮಾರುಕಟ್ಟೆಯ ಬಾಗಿಲು ತೆರೆದುಕೊಂಡಿರುವುದು ಕೂಡ ಗಮನಾರ್ಹ. ಈ ಟೂರ್ನಿಯಲ್ಲಿ 23 ದೇಶಗಳಿಗೆ ಸೇರಿದ ತಂಡಗಳು ಭಾಗವಹಿಸಿದ್ದವು. ವಿಶ್ವದ ರಾಷ್ಟ್ರಗಳ ತಂಡಗಳಲ್ಲಿ ಜರ್ಮನಿ, ನೆದರ್ಲೆಂಡ್, ಅರ್ಜೆಂಟಿನಾ, ಆಸ್ಟ್ರೇಲಿಯಾ, ಇಂಗ್ಲೆಂಡ್, ಪೋಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಅಮೆರಿಕದ ತಂಡಗಳೂ ಇದ್ದವು. ಪುರುಷರ ವಿಭಾಗದಲ್ಲಿ 20 ಹಾಗೂ ಮಹಿಳೆಯರ ವಿಭಾಗದಲ್ಲಿ 19 ತಂಡಗಳು ಸ್ಪರ್ಧಿಸಿದ್ದವು. ದೇಶದ ಬಹುತೇಕ ಶಾಲೆ, ಕಾಲೇಜುಗಳ ದೈಹಿಕ ಶಿಕ್ಷಣದಲ್ಲಿ ಕೊಕ್ಕೊ ಆಟಕ್ಕೆ ಪ್ರಾಶಸ್ತ್ಯ ಇದೆ. ಆದರೆ ಕ್ರಿಕೆಟ್ ಭರಾಟೆಯಲ್ಲಿ ನಗರ ಪ್ರದೇಶಗಳಲ್ಲಿ ಕೊಕ್ಕೊ ಬೆಳೆಯಲಿಲ್ಲ. ಆದ್ದರಿಂದ ಇಂದಿಗೂ ಗ್ರಾಮೀಣ ಪ್ರತಿಭೆಗಳೇ ಈ ಆಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ವಿಶ್ವಕಪ್‌ನಲ್ಲಿ ಸ್ಪರ್ಧಿಸಿದ ಭಾರತ ತಂಡಗಳಲ್ಲಿದ್ದ ಹೆಚ್ಚಿನ ಸಂಖ್ಯೆಯ ಆಟಗಾರರು ಹಳ್ಳಿಗಳಿಂದ ಬಂದವರೇ ಆಗಿದ್ದರು. ಉತ್ತಮ ಆಟಗಾರ್ತಿಯಾಗಿ ಗಮನ ಸೆಳೆದ ಚೈತ್ರಾ ಅವರ ಊರು ಕುರುಬೂರಿನಲ್ಲಿ 14 ವರ್ಷಗಳಿಂದ ಕೊಕ್ಕೊ ತರಬೇತಿ ಉತ್ತುಂಗದಲ್ಲಿದೆ. ಅದರ ಆಚೆ ಅಲ್ಲಿ ಕೊಕ್ಕೊ ಮೈದಾನವೇ ಇಲ್ಲ. ಇಲ್ಲಿಯ ಗಣಿತ ಶಿಕ್ಷಕ ಮಂಜುನಾಥ್ ಎಂಬುವವರ ಆಸಕ್ತಿಯಿಂದಾಗಿ ಹಲವಾರು ಮಕ್ಕಳು ಭಾರತ ತಂಡದಲ್ಲಿ ಸ್ಥಾನ ಪಡೆಯುವ ಮಟ್ಟಕ್ಕೆ ಬೆಳೆದಿದ್ದಾರೆ.

ಕೊಕ್ಕೊ ಆಟದಲ್ಲಿ ನಾವೀನ್ಯ ಮತ್ತು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ನಾವು ಮುಂದಾಗಬೇಕಿದೆ

ಈ ವಿಶ್ವಕಪ್ ಟೂರ್ನಿಯು ಕೊಕ್ಕೊ ಆಟಕ್ಕೆ ಹೊಸ ಭರವಸೆ ತುಂಬಿದೆ. ಈ ಹಂತದಲ್ಲಿ ಭಾರತ ಕೊಕ್ಕೊ ಫೆಡರೇಷನ್ (ಕೆಕೆಎಫ್‌ಐ) ಮತ್ತು ರಾಜ್ಯ ಕೊಕ್ಕೊ ಸಂಸ್ಥೆಗಳು ಹೆಚ್ಚು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸುವ ಅಗತ್ಯವಿದೆ. ಗ್ರಾಮೀಣ ಭಾಗದಲ್ಲಿ ಕಬಡ್ಡಿ ಮತ್ತು ಕೊಕ್ಕೊ ಎರಡೂ ಸಮಾನ ಜನಪ್ರಿಯತೆ ಹೊಂದಿದ್ದವು. ಆದರೆ ಕಬಡ್ಡಿ ಬಹುಬೇಗ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಏಷ್ಯನ್ ಗೇಮ್ಸ್, ವಿಶ್ವಕಪ್ ಟೂರ್ನಿಗಳಲ್ಲಿ ಸ್ಥಾನ ಪಡೆಯಿತು. ಇದನ್ನು ವಿದೇಶಗಳಲ್ಲಿ ತರಬೇತುದಾರರು ಕಬಡ್ಡಿ ಕಲಿಸುತ್ತಿರುವುದರಿಂದ ಸ್ಪರ್ಧೆಯು ಗಣನೀಯವಾಗಿ ಹೆಚ್ಚುತ್ತಿದೆ. ಅದೇ ರೀತಿ ಕೊಕ್ಕೊ ಕೂಡ ನೆಲೆ ವಿಸ್ತರಿಸಿಕೊಳ್ಳಬೇಕು. 1936ರ ಬರ್ಲಿನ್ ಒಲಿಂಪಿಕ್ ಕೂಟದಲ್ಲಿಯೇ ಕೊಕ್ಕೊ ಪ್ರದರ್ಶನ ಕ್ರೀಡೆಯಾಗಿತ್ತು. ಆದರೂ ಕಬಡ್ಡಿ ರೀತಿಯಲ್ಲಿ ಕೊಕ್ಕೊ ಆಟವನ್ನು ಉನ್ನತ ಸ್ತರಕ್ಕೇರಿಸುವಲ್ಲಿ ಆಡಳಿತಗಾರರು ಸಫಲರಾಗಲಿಲ್ಲ. ಆದ್ದರಿಂದಲೇ ವಿಶ್ವಕಪ್ ಟೂರ್ನಿ ಆಯೋಜಿಸಲು ಇಷ್ಟು ದೀರ್ಘ ಕಾಲ ಕಾಯಬೇಕಾಯಿತು. ಆದರೆ ಈಗ ಅಂತಹ ತಪ್ಪು ಮರುಕಳಿಸದಂತೆ ನೋಡಿಕೊಳ್ಳಬೇಕು. ಸ್ವದೇಶ ಮತ್ತು ವಿದೇಶಗಳಲ್ಲಿ ಕೊಕ್ಕೊ ಅಭಿವೃದ್ಧಿಗೊಳಿಸುವ ಕಾರ್ಯಪ್ರವೃತ್ತರಾಗಬೇಕು. ನುರಿತ ತರಬೇತುದಾರರು, ತಾಂತ್ರಿಕ ಸಲಹೆಗಾರರನ್ನು ಸಿದ್ಧಗೊಳಿಸಬೇಕು. ವಿದೇಶಗಳ ಕೊಕ್ಕೊ ತಂಡಗಳಿಗೆ ತರಬೇತಿದಾರರಾಗಿ ಹೋಗಲು ಭಾರತೀಯರಿಗೆ ಹೆಚ್ಚು ಅವಕಾಶ ಸಿಗುವಂತಾಗಬೇಕು. ಈ ಕ್ರೀಡೆಯಲ್ಲಿ ಗಾಯದ ಸಮಸ್ಯೆ ಹೆಚ್ಚು. ಆದ್ದರಿಂದ ಕ್ರೀಡಾ ವೈದ್ಯಕೀಯ ವಿಜ್ಞಾನ ಪರಿಣತರನ್ನೂ ಒಳಗೊಳ್ಳಬೇಕು. ಒಂದು ವ್ಯವಸ್ಥಿತ ವ್ಯವಸ್ಥೆ ರೂಪುಗೊಳ್ಳಬೇಕು. ಇದರಿಂದಾಗಿ ಆಟಗಾರರಿಗೆ ಹಾಗೂ ಸಂಬಂಧಿತ ಪರಿಣತರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಕೊಕ್ಕೊ ಆಡುವ ದೇಶಗಳ ಸಂಖ್ಯೆ ಹೆಚ್ಚಾದಾಗ ಸಹಜವಾಗಿಯೇ ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್ ಮತ್ತು ಒಲಿಂಪಿಕ್ ಕೂಟಗಳಲ್ಲಿ ಸ್ಥಾನ ಸಿಗುತ್ತದೆ. ಆದರೆ, ವಿದೇಶಗಳಲ್ಲಿ ಕೊಕ್ಕೊ ಕ್ರೀಡೆಯನ್ನು ಜನಪ್ರಿಯಗೊಳಿಸುವ ಭರಾಟೆಯಲ್ಲಿ ನಾವು ಮೈಮರೆಯಬಾರದು. ಈ ಕ್ರೀಡೆಯಲ್ಲಿ ನಾವೀನ್ಯ ಮತ್ತು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವತ್ತಲೂ ಮುಕ್ತವಾಗಿರಬೇಕು. ಈಗ ಸಿಕ್ಕಿರುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರೆ ಭಾರತದ ದೇಶಿ ಕ್ರೀಡೆಯು ವಿಶ್ವಮಟ್ಟದಲ್ಲಿ ಉತ್ತುಂಗಕ್ಕೆ ಏರಬಹುದು.

ದಿನದ ಟ್ವೀಟ್

ಭಾಷಾ ಗೊಂದಲ!



ನಾವು ಹೊಸದಾಗಿ ಚಂದಾದಾರರಾದ ವೃತ್ತಪತ್ರಿಕೆಯ ವಿತರಕರು ಹಣ ಸಂಗ್ರಹಿಸಲು ಬಂದರು. ನನ್ನೊಂದಿಗೆ ಹಿಂದಿಯಲ್ಲಿ ಮಾತನಾಡಿದರು. ನಾನು 'ಮುಝೆ ಹಿಂದಿ ನಹಿ ಆತಾ ಹೈ, ಕನ್ನಡ ಬರುತ್ತಾ?' ಎಂದು ಕೇಳಿದೆ. ಆತ ಹೀಗೆ ಉತ್ತರಿಸಿದರು: 'ಮೇಡಂ, ನಾನು ಕನ್ನಡದವನೆ, ನೀವು ನಾರ್ತ್ ಇಂಡಿಯನ್ ಅನ್ಕೊಂಡೆ'!

ತೇಜಸ್ ಪಟೇಲ್

ಕಿಡಿನುಡಿ

ವಿಜಯೇಂದ್ರ ಅವರನ್ನು ಪಕ್ಷದ ಹೈಕಮಾಂಡ್ ಏಕೆ ಅಧ್ಯಕ್ಷರನ್ನಾಗಿ ಮಾಡಿದೆಯೋ ಗೊತ್ತಿಲ್ಲ. ಪಕ್ಷದ ಹಿತದೃಷ್ಟಿಯಿಂದ ಅವರನ್ನು ಬದಲಾಯಿಸಲೇಬೇಕು. ವಂಶಾಡಳಿತ ಮತ್ತು ಭ್ರಷ್ಟಾಚಾರದ ವಿರುದ್ಧ ನಾವು ಹೋರಾಡುತ್ತಿದ್ದೇವೆ.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 21-1-2000

● **ರೋಸ್ಟರ್, ಮತ ಹಕ್ಕು ಸಹಿತ ಸಹಕಾರಿ ಸಂಸ್ಥೆಗಳಿಗೆ ನಾಮಕರಣ**

ಬೆಂಗಳೂರು, ಜ. 20– ಸಹಕಾರ ಸಂಸ್ಥೆಗಳಿಗೆ ಸರ್ಕಾರ ಸದಸ್ಯರ ನಾಮಕರಣ ಮಾಡಿ, ಅವರಿಗೆ ಮತದಾನ ಮಾಡುವ ಹಕ್ಕು ಕೊಡಬೇಕು, ನಾಮಕರಣವನ್ನು ರೋಸ್ಟರ್ ಪದ್ಧತಿ ಅನುಸರಿಸಿ ಮಾಡಬೇಕು ಎಂದು ಇಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

ಈ ತೀರ್ಮಾನವನ್ನು ಅನುಷ್ಠಾನಕ್ಕೆ ತರಲು ಸಹಕಾರ ಕಾಯ್ದೆಗೆ ಸೂಕ್ತವಾದ ತಿದ್ದುಪಡಿಗಳನ್ನು ಸುಗ್ರೀವಾಜ್ಞೆ ಮುಖಾಂತರ ತರಲು ತೀರ್ಮಾನಿಸಲಾಯಿತು ಎಂದು ಸಂಪುಟ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ವಾರ್ತಾ ಮತ್ತು ಪ್ರಚಾರ ಖಾತೆ ರಾಜ್ಯ ಸಚಿವ ಪ್ರೊ. ಬಿ.ಕೆ.ಚಂದ್ರಶೇಖರ್ ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

● **ದಾಮ್ಲೆಪ್ಪ, ತುಳಸಪ್ಪ, ಕುಂಜಾಲು ಸೇರಿ 30 ಮಂದಿಗೆ ಪ್ರಶಸ್ತಿ**

ಬೆಂಗಳೂರು, ಜ. 20– ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1999ನೇ ಸಾಲಿನ ಅಕಾಡೆಮಿ ಪ್ರಶಸ್ತಿಗಳಿಗಾಗಿ ದೊಡ್ಡಾಟದ ದಾಮ್ಲೆಪ್ಪ ಜಂಪಲೆಪ್ಪ ಲಮಾಣಿ, ಗೀಗೀ ಪದದ ತುಳಸಪ್ಪ ಹನುಮಪ್ಪ ದಾಸರ, ಯಕ್ಷಗಾನದ ಗೋಡೆ ನಾರಾಯಣ ಹೆಗಡೆ ಹಾಗೂ ಕುಂಜಾಲು ರಾಮಕೃಷ್ಣ ನಾಯಕ್ ಸೇರಿದಂತೆ ಒಟ್ಟು 30 ಮಂದಿ ಜಾನಪದ ಮತ್ತು ಯಕ್ಷಗಾನ ಕಲಾವಿದರನ್ನು ಆಯ್ಕೆ ಮಾಡಿದೆ.

ಇದಲ್ಲದೆ, ಮೂವರು ಜಾನಪದ ತಜ್ಞರನ್ನು 'ಜಾನಪದ ತಜ್ಞ ಪ್ರಶಸ್ತಿ'ಗೆ ಹಾಗೂ ಜಾನಪದ ಗ್ರಂಥಗಳನ್ನು ಬರೆದ ಇಬ್ಬರು ಜಾನಪದ ಸಾಹಿತಿಗಳನ್ನು 'ಅತ್ಯುತ್ತಮ ಗ್ರಂಥ' ಬಹುಮಾನಕ್ಕಾಗಿ ಆಯ್ಕೆ ಮಾಡಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 21-1-1975

● **ಅಗ್ಗ, ಸರಳ ಕೃಷಿತಂತ್ರ ರೈತರಿಗೆ ಅಗತ್ಯ: ರಾಮ್**

ನವದೆಹಲಿ, ಜ. 20– ಭಾರತದ ರೈತರ ಉಪಯೋಗಕ್ಕೆಂದು ಉದ್ದೇಶಿಸಲಾದ ಕೃಷಿತಂತ್ರ ಸರಳವಾಗಿರಬೇಕು ಮತ್ತು ಅಗ್ಗವಾಗಿರಬೇಕು ಎಂದು ಕೇಂದ್ರ ಕೃಷಿ ಸಚಿವ ಜಗಜೀವನ ರಾಮ್ ಅವರು ಇಂದು ಒತ್ತಿ ಹೇಳಿದರು.

ಭಾರತೀಯ ಕೃಷಿ ಸಂಶೋಧನೆ ಮಂಡಳಿ ಡೈರೆಕ್ಟರುಗಳ ಎರಡು ದಿನಗಳ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಕೃಷಿ ವಿಜ್ಞಾನಿಗಳು ಹೊಸ ತಂತ್ರಗಳನ್ನು ರೂಪಿಸುವಾಗ ರಾಷ್ಟ್ರದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಡಬೇಕು ಎಂದು ಹೇಳಿದರು.

ಬಹಳ ರೈತರಿಗೆ ಸಂಪನ್ಮೂಲ ಬಹಳ ಕಡಿಮೆ ಇದೆ. ಕೃಷಿತಂತ್ರ ಸರಳ ಹಾಗೂ ಅಗ್ಗವಾಗಿಲ್ಲದಿದ್ದರೆ ಅದರಿಂದ ಅವರಿಗೆ ಉಪಯೋಗವಾಗದು ಎಂದು ಹೇಳಿದರು.

● **ಮಿಶ್ರಾ ಹತ್ಯೆ: ಅಪರಾಧಿಗಳಿಗಾಗಿ ತನಿಖಾ ಸಂಸ್ಥೆಯಿಂದ ಶೋಧ**

ಪಟನಾ, ಜ. 20– ರೈಲ್ವೆ ಸಚಿವರಾಗಿದ್ದ ಎಲ್.ಎನ್.ಮಿಶ್ರಾ ಮತ್ತು ಇತರ ಇಬ್ಬರ ಸಾವಿಗೆ ಕಾರಣವಾದ ಸಮಷ್ಟಿಪುರ ಬಾಂಬ್ ಸ್ಫೋಟದ ಬಗೆಗೆ ತನಿಖೆ ನಡೆಸುತ್ತಿರುವ ಕೇಂದ್ರ ತನಿಖಾ ಸಂಸ್ಥೆಯ ಪತ್ತೇದಾರರು ತಮ್ಮ ಜಾಲವನ್ನು ಈಗ ಅಕ್ಕಪಕ್ಕದ ರಾಜ್ಯಗಳಿಗೆ ವಿಸ್ತರಿಸಿದ್ದಾರೆಂದು ಅಧಿಕೃತ ಮೂಲಗಳಿಂದ ತಿಳಿದುಬಂದಿದೆ.

'ಕೊಲೆಗಡುಕರು, ಅಪರಾಧಿಗಳು' ಎಂದು ಹೆಸರಾದವರನ್ನು ಬಂಧಿಸಲು ಈ ಪ್ರಯತ್ನವೆಂದು ಹೇಳಲಾಗಿದೆ.

ಹೀಗೆ ಕರೆಸಿಕೊಳ್ಳಲು ಅವರು ಯಾಕೆ ಅರ್ಹರು ಎಂಬುದು ಮುಖ್ಯವಾದ ಸಂಗತಿ

ಗಾಂಧೀಜಿ ಅಲ್ಲದೆ ಇನ್ಯಾರು ರಾಷ್ಟ್ರಪಿತ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

'ಗಾಂಧೀಜಿ ರಾಷ್ಟ್ರಪಿತ ಅಲ್ಲ' ಅಥವಾ 'ಗಾಂಧೀಜಿಯವರನ್ನು ರಾಷ್ಟ್ರಪಿತ ಎಂದು ಒಪ್ಪಲು ಸಾಧ್ಯವಿಲ್ಲ', 'ಗಾಂಧೀಜಿ ಮಹಾತ್ಮ ಅಲ್ಲ' ಎನ್ನುವಂತಹ ಮಾತುಗಳು ಆಗಾಗ ಕೇಳಿಸುತ್ತಾ ಇರುತ್ತವೆ. ಉಡುಪಿಯಲ್ಲಿ ಇತ್ತೀಚೆಗೆ ಮಠವೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ನಾಲ್ವರು ಯತಿಗಳ ಸಮ್ಮುಖದಲ್ಲಿ ಗಾಂಧಿ ನಿಂದನೆಯ ಇದೇ ಕೆಲಸ ಆಗಿರುವುದು ವರದಿಯಾಗಿದೆ. ಗಾಂಧಿ ಹತ್ಯೆಯಾದಾಗ ಪೇಜಾವರ ಮಠದ ಅಂದಿನ ಸ್ವಾಮೀಜಿ ದುಃಖಿಸಿದ್ದರು, ಶೃಂಗೇರಿಯ ಅಂದಿನ ಶ್ರೀಗಳು ತುಂಗೆಯಲ್ಲಿ ಮುಳುಗೆದ್ದಿದ್ದರು ಎಂದು ಆ ಕಾಲದವರು ನೆನಪಿಸಿಕೊಳ್ಳುತ್ತಾರೆ. ಇಂದಿನ ಕೆಲವು ಸ್ವಾಮಿಗಳಿಗೆ ಅವೆಲ್ಲ ಅರ್ಥಹೀನ ಎಂದು ಅನಿಸಿರಬಹುದು. ಆದರೆ ಗಾಂಧೀಜಿ ಯಾಕೆ ರಾಷ್ಟ್ರಪಿತ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗುತ್ತದೆ.

ರಾಷ್ಟ್ರಪಿತ ಎನ್ನುವುದು ಒಂದು ರಾಷ್ಟ್ರ ಅಥವಾ ದೇಶ ಅಥವಾ ಆಡಳಿತಾತ್ಮಕ ವ್ಯವಸ್ಥೆಯನ್ನು ಸಂಘಟಿಸುವಲ್ಲಿ ಅಥವಾ ಸ್ವತಂತ್ರಗೊಳಿಸುವುದರಲ್ಲಿ ಅಥವಾ ಅಭಿವೃದ್ಧಿ ಸಾಧಿಸುವುದರಲ್ಲಿ ಪ್ರಮುಖ ಚಾಲಕಶಕ್ತಿಯಾಗಿದ್ದ ವ್ಯಕ್ತಿಗೆ ನೀಡುವ ಗೌರವಸೂಚಕ ಬಿರುದು. ಪುರಾತನ ರೋಮ್ ಸಾಮ್ರಾಜ್ಯದಲ್ಲಿ ಈ ಪದ್ಧತಿ ಇತ್ತು. ರೋಮ್‌ನ ಸೆನೆಟ್ ವೀರರಿಗೆ, ನಂತರದ ದಿನಗಳಲ್ಲಿ ಚಕ್ರವರ್ತಿಗಳಿಗೆ 'ಪ್ಯಾಟರ್ ಪ್ಯಾಟ್ರಿಯಾ' ಅಂದರೆ 'ತಂದೆನಾಡಿನ ರಾಷ್ಟ್ರಪಿತ' ಎಂಬ ಬಿರುದು ನೀಡುವ ಪದ್ಧತಿ ಇತ್ತು. ನಂತರದ ಕಾಲದಲ್ಲಿ ದೇಶವನ್ನು ತಾಯ್ನಾಡು ಎಂದು ಭಾವಿಸುವ ರಾಷ್ಟ್ರಗಳಲ್ಲೂ 'ರಾಷ್ಟ್ರಪಿತ' ಪರಿಕಲ್ಪನೆ ಅನುಷ್ಠಾನಕ್ಕೆ ಬಂದಿತ್ತು.

1603ರಿಂದ 1625ರ ಅವಧಿಯಲ್ಲಿ ಬ್ರಿಟನ್‌ನ ಚಕ್ರವರ್ತಿ ಒಂದನೇ ಜೇಮ್ಸ್ 'ರಾಜನ ದೈವಿಕ ಹಕ್ಕುಗಳ ಸಿದ್ಧಾಂತ'ವನ್ನು ಪ್ರತಿಪಾದಿಸಿದ್ದ. ರಾಜನು ದೇವರಿಂದ ಅಧಿಕಾರವನ್ನು ಪಡೆದಿದ್ದು, ದೇವರ ಪ್ರತಿನಿಧಿಯಾಗಿದ್ದಾನೆ. ಆದ್ದರಿಂದ ರಾಜನು ದೇವರಿಗೆ ಮಾತ್ರ ಉತ್ತರದಾಯಿ' ಎನ್ನುವುದು ಈ ಸಿದ್ಧಾಂತದ ತಿರುಳು. ಈ ಸಿದ್ಧಾಂತದ ಪ್ರಕಾರ, ರಾಜನು ತಾನೇ ತಾನಾಗಿ ರಾಷ್ಟ್ರಪಿತನಾಗುತ್ತಾನೆ. ಭಾರತದಲ್ಲಿ 1266ರಲ್ಲಿ ಅಧಿಕಾರಕ್ಕೆ ಬಂದಿದ್ದ ಘಿಯಾಸ್-ಉದ್-ದೀನ್-ಬಲ್ಬನ್ ಇದೇ ಸಿದ್ಧಾಂತವನ್ನು ಪ್ರತಿಪಾದಿಸಿದ್ದ.

1688- 89ರಲ್ಲಿ ಬ್ರಿಟನ್‌ನಲ್ಲಿ ನಡೆದ 'ಗ್ಲೋರಿಯಸ್ ಕ್ರಾಂತಿ'ಯ ನಂತರ 'ರಾಜನ ದೈವಿಕ ಹಕ್ಕುಗಳ ಸಿದ್ಧಾಂತ'ಕ್ಕೆ ಮಹತ್ವ ಉಳಿಯಲಿಲ್ಲ. ಆದರೆ 'ರಾಷ್ಟ್ರಪಿತ' ಪರಿಕಲ್ಪನೆ ಹೊರಟು ಹೋಗಲಿಲ್ಲ. ಅಮೆರಿಕಕ್ಕೆ ಜಾರ್ಜ್ ವಾಷಿಂಗ್ಟನ್ ರಾಷ್ಟ್ರಪಿತ. ಕೆನಡಾಕ್ಕೆ ಜಾನ್ ಅಲೆಕ್ಸಾಂಡರ್ ಮೆಕ್‌ಡೊನಾಲ್ಡ್, ದಕ್ಷಿಣ ಆಫ್ರಿಕಾಕ್ಕೆ ನೆಲ್ಸನ್ ಮಂಡೇಲಾ, ಇಂಡೊನೇಷ್ಯಾಕ್ಕೆ ಸುಕರ್ನೊ, ನೇಪಾಳಕ್ಕೆ ಪೃಥ್ವಿ ನಾರಾಯಣ್ ಶಾ, ವೆನಿಜುವೆಲಾಕ್ಕೆ ಸೈಮನ್ ಬೊಲಿವರ್, ಚೀನಾಕ್ಕೆ ಸನ್ ಯಾತ್ ಸೆನ್ ರಾಷ್ಟ್ರಪಿತರಾಗಿ ಪರಿಗಣಿಸಲ್ಪಟ್ಟಿದ್ದಾರೆ. ಇನ್ನೂ ಬಹಳಷ್ಟು ರಾಷ್ಟ್ರಗಳು ರಾಷ್ಟ್ರಪಿತರನ್ನು ಗುರುತಿಸಿಕೊಂಡಿವೆ. ಕೆಲವು ರಾಷ್ಟ್ರಗಳು ಶಾಸನಬದ್ಧವಾಗಿ ರಾಷ್ಟ್ರಪಿತರನ್ನು ಗುರುತಿಸಿದ್ದರೆ, ಇನ್ನು ಕೆಲವು ರಾಷ್ಟ್ರಗಳಲ್ಲಿ ಜನರೇ ರಾಷ್ಟ್ರಪಿತರನ್ನು ಗುರುತಿಸಿದ್ದಾರೆ. ಇಂಥ ರಾಷ್ಟ್ರಗಳಲ್ಲಿ ರಾಷ್ಟ್ರಪಿತ ಎನ್ನುವ ಸ್ಥಾನಕ್ಕೆ ಕಾನೂನಿನ ಮಾನ್ಯತೆ ಇಲ್ಲ.

ಭಾರತ ಸಂವಿಧಾನವು ರಾಷ್ಟ್ರಪಿತ ಸ್ಥಾನಕ್ಕೆ ಕಾನೂನಿನ ಮಾನ್ಯತೆಯನ್ನು ನೀಡಿಲ್ಲ. ಅಂದರೆ ಗಾಂಧೀಜಿಯನ್ನು ಜನರೇ ರಾಷ್ಟ್ರಪಿತ ಎಂದು ಗೌರವಿಸಿದ್ದಾರೆ. ಶಾಸನಾತ್ಮಕವಾಗಿ ರಾಷ್ಟ್ರಪಿತ ಸ್ಥಾನವನ್ನು ನೀಡಿದಾಗ ಶಾಸನಾತ್ಮಕವಾಗಿಯೇ ಆ ಸ್ಥಾನವನ್ನು ರದ್ದುಪಡಿಸಲೂ ಬರುತ್ತದೆ. ಉದಾಹರಣೆಗೆ, 1972ರಲ್ಲಿ ಶೇಕ್ ಮುಜೀಬುರ್ ರೆಹಮಾನ್ ಅವರಿಗೆ ಬಾಂಗ್ಲಾದೇಶವು ಶಾಸನಾತ್ಮಕವಾಗಿ ರಾಷ್ಟ್ರಪಿತ ಸ್ಥಾನವನ್ನು ನೀಡಿತ್ತು. 2002ರಲ್ಲಿ ಶಾಸನಾತ್ಮಕವಾಗಿಯೇ ಆ ಸ್ಥಾನವನ್ನು ತೆಗೆಯಿತು. ಭಾರತದಲ್ಲಿ ಗಾಂಧಿಯವರಿಗೆ ಶಾಸನಾತ್ಮಕವಾಗಿ ರಾಷ್ಟ್ರಪಿತ ಎಂಬ ಸ್ಥಾನ ಇಲ್ಲದಿರುವುದರಿಂದ ಅದನ್ನು ಹಿಂದಕ್ಕೆ ಪಡೆಯಲೂ ಆಗದು.

ಗಾಂಧಿಯವರನ್ನು ರಾಷ್ಟ್ರಪಿತ ಎಂದು ಮೊದಲು ಸಂಬೋಧಿಸಿದ್ದು ಸುಭಾಷ್‌ಚಂದ್ರ ಬೋಸ್. ಬೋಸ್ ಅವರನ್ನು ಅನುಸರಿಸಿ ಇತರರು ಗಾಂಧಿಯವರನ್ನು ರಾಷ್ಟ್ರಪಿತ ಎಂದು ಕರೆಯುವ ಪರಿಪಾಟ ಬೆಳೆಯಿತು. ಇಲ್ಲಿ, ರಾಷ್ಟ್ರಪಿತ ಎಂದು ಕರೆಯಲು ಗಾಂಧಿ ಯಾಕೆ ಅರ್ಹರು ಎಂಬುದು ಮುಖ್ಯ ಸಂಗತಿ.

ಭಾರತವನ್ನು ಯಾರೂ ಸೃಷ್ಟಿಸಲಿಲ್ಲ, ಗಾಂಧೀಜಿಗಿಂತ ಮೊದಲೂ ಭಾರತ ಇತ್ತು ಎನ್ನುವುದು ಗಾಂಧೀಜಿ ರಾಷ್ಟ್ರಪಿತ ಅಲ್ಲ ಎನ್ನುವವರ ವಾದಗಳಲ್ಲಿ ಪ್ರಮುಖವಾದ ಒಂದು ಅಂಶ. ಹಾಗಿದ್ದರೆ ಉಳಿದೆಲ್ಲ ರಾಷ್ಟ್ರಗಳನ್ನು ಅಲ್ಲಿನ ರಾಷ್ಟ್ರಪಿತರು ಸೃಷ್ಟಿಸಿದ್ದಾರೆಯೇ? ಇಲ್ಲ. ಭಾರತ ಎನ್ನುವ ಭೂಪ್ರದೇಶ ಇತ್ತು. ಭಾರತದಲ್ಲಿ ಏಕತೆಯೂ ಇತ್ತು. ಆದರೆ ಅದು ಸಾಂಸ್ಕೃತಿಕವಾಗಿ ಇತ್ತೇ ವಿನಾ ರಾಜಕೀಯ ಏಕತೆ ಇರಲಿಲ್ಲ. ಸಮುದ್ರಗುಪ್ತ, ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯ, ಅಲ್ಲಾ ಉದ್-ದೀನ್ ಖಿಲ್ಜಿ ಅವರಂತಹ ರಾಜರು ಸಾಮ್ರಾಟರಾಗಿ ಭಾರತದ ಇತರ ರಾಜರನ್ನು ತಮ್ಮ ಏಕಚಕ್ರಾಧಿಪತ್ಯಕ್ಕೆ ತಂದಿದ್ದರೂ ಅವರ ಕಾಲದ ನಂತರ ಅದು ಉಳಿಯಲಿಲ್ಲ. ಭಾರತದ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ರಾಜರು ಸಾಮ್ರಾಟನ ಪರಮಾಧಿಕಾರಕ್ಕೆ ಒಳಪಡದೆಯೇ ಆಳುತ್ತಿದ್ದರು. ಬ್ರಿಟಿಷರ ವಿರುದ್ಧ ಯುದ್ಧ ಮಾಡಿದರಾದರೂ ಮರಾಠರಿಗೆ ತಮ್ಮ ಪ್ರಾಂತ್ಯದಲ್ಲಿ ಬ್ರಿಟಿಷರು ಇರಬಾರದು ಎನಿಸಿತ್ತೇ ವಿನಾ ಬಂಗಾಳದಲ್ಲಿ ಇರಬಾರದು ಎಂದು ಅನಿಸಿರಲಿಲ್ಲ. ಸಿಖ್ಖರಿಗೆ ಪಂಜಾಬ್‌ನಲ್ಲಿ ಬ್ರಿಟಿಷರು ಇರಬಾರದು ಎಂದೇ ಇತ್ತು. ಆದರೆ ಮುಂಬೈಯಲ್ಲಿ ಬ್ರಿಟಿಷರು ಇರಬಾರದು ಎಂದು ಇರಲಿಲ್ಲ. ಗಾಂಧಿ ಹಿಂಸೆಯನ್ನು ಒಪ್ಪಲಿಲ್ಲ ಎನ್ನುವ ಕಾರಣಕ್ಕಾಗಿ ಗಾಂಧಿಯನ್ನು ದ್ವೇಷಿಸುವ ಅನೇಕರಿಗೆ ಗಾಂಧಿ ಹುಟ್ಟುವ ಮೊದಲೇ ಬ್ರಿಟಿಷರ ವಿರುದ್ಧ ಹಲವು ಸಶಸ್ತ್ರ ಯುದ್ಧಗಳು ನಡೆದಿದ್ದವು, ಆದರೂ ಬ್ರಿಟಿಷರನ್ನು ಹೊರಹಾಕಲು ಆಗಿರಲಿಲ್ಲ ಎಂಬುದು ಗೊತ್ತಿರಬೇಕಾಗುತ್ತದೆ.

ಒಂದು ವೇಳೆ ಬ್ರಿಟಿಷರ ವಿರುದ್ಧ ಅಲ್ಲಲ್ಲಿ ಯುದ್ಧ ಮಾಡಿದವರೆಲ್ಲರೂ ಒಟ್ಟಾಗಿ ಯುದ್ಧ ಮಾಡಿದ್ದರೆ ಬ್ರಿಟಿಷರನ್ನು ಹೊರಹಾಕಬಹುದಿತ್ತು. ಆದರೆ ಬ್ರಿಟಿಷರ ವಿರುದ್ಧ ಇದ್ದವರನ್ನೆಲ್ಲ ಸಂಘಟಿಸುವ ಕೆಲಸ ನಡೆದಿರಲಿಲ್ಲ. 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಾದಾಗ ಅದು ಒಂದು ಕ್ಲಬ್ ಮಾದರಿಯ ಸಂಸ್ಥೆಯಾಗಿತ್ತು. 1905ರಲ್ಲಿ ಬಂಗಾಳ ವಿಭಜನೆಯಾದಾಗ ಕಾಂಗ್ರೆಸ್‌ನ ತೀವ್ರಗಾಮಿಗಳು, ಮುಖ್ಯವಾಗಿ ಬಾಲಗಂಗಾಧರ ತಿಲಕ್ ಅವರು ಜನರನ್ನು ಸಂಘಟಿಸುವ ಕೆಲಸವನ್ನು ಮಾಡಿದ್ದರು. ಆದರೆ ಆ ಸಂಘಟಿಸುವಿಕೆ ಕೂಡ ಸಮಗ್ರ ಭಾರತವನ್ನು ಆವರಿಸಿರಲಿಲ್ಲ. ಸಮಗ್ರ ಭಾರತವನ್ನು ಒಂದು ಶಕ್ತಿಯಾಗಿ ಸಂಘಟಿಸಿದ್ದು ಗಾಂಧಿಯೇ. ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ನಂತರ ಪಂಜಾಬ್‌ಗೆ ಹೊರಟುನಿಂತ ಗಾಂಧಿಯವರನ್ನು ಪೊಲೀಸರು ತಡೆದಾಗ ಗಾಂಧಿ, 'ಪಂಜಾಬ್‌ನಲ್ಲಿ ನಾನು ಯಾರಿಗೂ ಗೊತ್ತಿಲ್ಲ. ಆದ್ದರಿಂದ ನಾನು ಹೋಗುವುದರಿಂದ ಸಮಸ್ಯೆ ಆಗಲಾರದು' ಎಂದೇ ಹೇಳಿದ್ದರು. ಆದರೆ ಪಂಜಾಬ್‌ಗೆ ಗಾಂಧಿ ಹೋದಾಗ ಸೇರಿದ ಜನಸಮೂಹವು ಗಾಂಧಿ ಯಾವ ರೀತಿ ಇಡೀ ಭಾರತವನ್ನು ಸಂಪರ್ಕಿಸಿದ್ದಾರೆ ಎಂದು ಗಾಂಧೀಜಿಗೇ ಗೊತ್ತುಮಾಡಿತ್ತು.

ಇಡೀ ದೇಶವನ್ನು ಸಂಘಟಿಸಿದವರು ಗಾಂಧಿಯಾದದ್ದರಿಂದಲೇ ಆ ಕಾಲದ ಇತರ ನಾಯಕರು ಗಾಂಧೀಜಿ ನಾಯಕತ್ವವನ್ನು ನಿರಾಕರಿಸಲಿಲ್ಲ. ಗಾಂಧಿ ವಿಚಾರ, ಹೋರಾಟದ ಸ್ವರೂಪ, ವಿಧಾನವನ್ನು ವಿರೋಧಿಸಿದವರೂ ಅವರನ್ನು ರಾಷ್ಟ್ರೀಯ ನಾಯಕನನ್ನಾಗಿಯೇ ಗುರುತಿಸಿದ್ದರು. ಗಾಂಧಿ ರಾಷ್ಟ್ರೀಯ ಚಳವಳಿಯ ನಾಯಕ ಆಗಿರಲಿಲ್ಲ ಎಂದು ಇವತ್ತು ಹೇಳುತ್ತಿರುವವರು, ಗಾಂಧಿ ಅಲ್ಲದಿದ್ದರೆ ಬೇರೆ ಯಾರು ರಾಷ್ಟ್ರೀಯ ನಾಯಕ ಆಗಿದ್ದರು ಎಂದು ಹೇಳಬೇಕಾಗುತ್ತದೆ. ನಾಯಕನ ಜೊತೆ ಒಂದೋ ಸಮ್ಮತಿ ಅಥವಾ ಅಸಮ್ಮತಿಯ ಸಂಬಂಧ ಎಲ್ಲರಿಗೂ ಇರುತ್ತದೆ. ಸಮ್ಮತಿ ಇದ್ದವರೆಲ್ಲ ಗಾಂಧಿಯವರೊಂದಿಗೆ ಹೋದರು. ಅಸಮ್ಮತಿ ಇದ್ದವರು ವಿರೋಧಿಸಿದ್ದು ಗಾಂಧಿಯವರನ್ನೇ ವಿನಾ ಇತರ ನಾಯಕರನ್ನಲ್ಲ.

ಗಾಂಧಿಯವರನ್ನು ಪೂರ್ತಿಯಾಗಿ ನಿರಾಕರಿಸಿದವರು ಮಹಮದ್ ಅಲಿ ಜಿನ್ನಾ. ಆದರೆ ಅವರು ಪ್ರತ್ಯೇಕ ದೇಶ ಕೇಳಿದರೇ ವಿನಾ ಸಮಗ್ರ ಭಾರತಕ್ಕೆ ಗಾಂಧಿಯಲ್ಲ, ತಾನೇ ನಾಯಕ ಆಗುತ್ತೇನೆ ಎಂದು ಹೊರಡಲಿಲ್ಲ. ಅಂಬೇಡ್ಕರ್ ಅವರು ಗಾಂಧಿಯವರನ್ನು ಪ್ರಶ್ನಿಸಿದರೇ ವಿನಾ ಪುರುಷೋತ್ತಮ ದಾಸ್ ಟಂಡನ್ ಅವರನ್ನು ಪ್ರಶ್ನಿಸಲಿಲ್ಲ. ಸಾವರ್ಕರ್ ಅವರು ಮೋತಿಲಾಲ್ ನೆಹರೂ ಅವರ ಸಿದ್ಧಾಂತ ಸರಿ ಇಲ್ಲ, ಆದ್ದರಿಂದ ತಾನು ಹಿಂದೂ ಮಹಾಸಭಾ ಮಾಡುತ್ತೇನೆ ಎನ್ನಲಿಲ್ಲ. ಅವರು ಕೂಡ ಪ್ರಶ್ನಿಸಿದ್ದು ಗಾಂಧಿಯನ್ನೇ ಮತ್ತು ಸಾವರ್ಕರ್ 'ದೇಶದ ಸ್ವಾತಂತ್ರ್ಯಕ್ಕೆ ಗಾಂಧಿಯವರ ಅಗತ್ಯ ಇದೆ' ಎಂದೇ ಹೇಳಿದ್ದರು. ಬೋಸ್ ಅವರೂ ಗಾಂಧಿಯವರ ನಿಲುವಿನ ಆಧಾರದಲ್ಲೇ ತಮ್ಮ ದಾರಿಯನ್ನು ಕಂಡುಕೊಂಡವರು. ಚಂದ್ರಶೇಖರ ಆಜಾದ್ ಕೂಡ ಮೊದಲ ಹೋರಾಟವನ್ನು 'ಗಾಂಧಿ ಕಿ ಜೈ' ಎಂದೇ ಶುರುಮಾಡಿದ್ದು. ಅಂದರೆ ವೈಚಾರಿಕವಾಗಿ ಅವರನ್ನು ವಿರೋಧಿಸಿದವರೆಲ್ಲರೂ ಪ್ರಶ್ನಿಸಿದ್ದು ಗಾಂಧಿಯನ್ನೇ ವಿನಾ ಇತರ ನಾಯಕರನ್ನಲ್ಲ. ಪ್ರಧಾನ ನಾಯಕನನ್ನೇ ಯಾವಾಗಲೂ ಪ್ರಶ್ನಿಸುವುದು, ಉಳಿದವರನ್ನು ಯಾರಾದರೂ ಯಾಕೆ ಪ್ರಶ್ನಿಸುತ್ತಾರೆ.

ಯಾವುದೇ ಕಾಲದ ನಾಯಕರಲ್ಲಿ ಇತರರನ್ನು ತಮ್ಮೊಂದಿಗೆ ಬರುವಂತೆ ಮಾಡುವ ಗುಣ, ಕನಿಷ್ಠಪಕ್ಷ ವಿಶ್ವಾಸಕ್ಕಾದರೂ ತೆಗೆದುಕೊಳ್ಳುವ ಗುಣ ಇರುತ್ತದೆ. ಗಾಂಧಿಯವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಾವರ್ಕರ್ ಮುಂದಾಗಲಿಲ್ಲ. ಆದರೆ ಸಾವರ್ಕರ್ ಅವರಿಗೆ ಮನವರಿಕೆ ಮಾಡಿಕೊಡಲು ಗಾಂಧಿ ಮುಂದಾದರು. ಬೋಸರಿಗೂ ಮನವರಿಕೆ ಮಾಡಲು ಹೊರಟರು. ಅಂಬೇಡ್ಕರ್ ಬಳಿಯೂ ಸಮಸ್ಯೆ ಪರಿಹಾರದ ಸೂತ್ರ ಕಂಡುಕೊಂಡರು, ಸಂವಿಧಾನ ಸಮಿತಿಗೆ ಅಂಬೇಡ್ಕರ್ ಅವರನ್ನು ಸೂಚಿಸಿದರು. ಜಿನ್ನಾ ಅವರು ಗಾಂಧಿ ಬಳಿ ಬರಲಿಲ್ಲ. ಬದಲು, ಗಾಂಧೀಜಿಯೇ ಜಿನ್ನಾ ಬಳಿ ಹೋಗಿ ಮಾತನಾಡಿದರು. ಎಲ್ಲರ ಬೇಡಿಕೆಗಳಿಗೂ ಸ್ಪಂದಿಸುವ ಗುಣ ಇರುವುದು ನಾಯಕನಿಗೆ. ಆ ಕೆಲಸವನ್ನು ಮಾಡಿದ್ದು ಗಾಂಧಿಯೇ. ಇವತ್ತು ಗಾಂಧಿ ವಿರೋಧಿಗಳಲ್ಲಿ ಕೆಲವರು ತಮ್ಮನ್ನು ಆರ್‌ಎಸ್‌ಎಸ್‌ನೊಂದಿಗೆ ಗುರುತಿಸಿಕೊಳ್ಳುತ್ತಾರೆ. ಆದರೆ ಆರ್‌ಎಸ್‌ಎಸ್‌ನ ಸ್ಥಾಪಕ ಕೇಶವ ಬಲಿರಾಮ ಹೆಡಗೆವಾರ್ ಗಾಂಧಿಯವರೊಂದಿಗೆ ಸತ್ಯಾಗ್ರಹಕ್ಕೆ ಹೋದವರು. ಮತೀಯ ಗಲಭೆಯನ್ನು ತಡೆಯುವ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದಾಗ ಆರ್‌ಎಸ್‌ಎಸ್‌ನ ಗೋಳ್ವಲ್ಕರ್ ಕೂಡ ಗಾಂಧಿಯೊಂದಿಗೆ ಕುಳಿತು, 'ನಾನು ಮಾತಾಡುವುದಿಲ್ಲ. ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ' ಎಂದವರು.

ಹಿಂದೆ ಸಾಮ್ರಾಟರು ರಾಜಕೀಯವಾಗಿ ಸಂಘಟಿಸಿದ್ದ ಭಾರತಕ್ಕೆ ಏಕರೂಪಿ ಶಾಸನ ಇಲ್ಲದ್ದರಿಂದ ಅವರ ಕಾಲದ ನಂತರ ಭಾರತ ಒಟ್ಟಾಗಿ ಉಳಿಯಲಿಲ್ಲ. ಗಾಂಧಿ ಸಂಘಟಿಸಿದ ಭಾರತವು ಗಾಂಧಿಯ ನಂತರವೂ ಒಟ್ಟಾಗಿ ಉಳಿಯಲು ಅಂಬೇಡ್ಕರ್ ಬರೆದ ಸಂವಿಧಾನ ಎಂಬ ಶಾಸನವಿದೆ. ಅಂದಮೇಲೆ ಭಾರತಕ್ಕೆ ಗಾಂಧಿಯ ವಿನಾ ಇನ್ಯಾರು ರಾಷ್ಟ್ರಪಿತ?

ಸಂಗತ

ಮಗುವಿನ ಎದೆಗೊಂದು ಸಾಮರಸ್ಯದ ಬೀಜ

ಮಗುವನ್ನು ಒಳ್ಳೆಯ ನಾಗರಿಕನನ್ನಾಗಿ ರೂಪಿಸುವುದು, ಶಾಲೆಗಳಲ್ಲಿ ಜಾರಿಗೆ ಬಂದಿರುವ 'ನಾವು ಮನುಜರು' ಕಾರ್ಯಕ್ರಮದ ಮೂಲ ಜೀವಾಳ

● ಸದಾಶಿವ್ ಸೊರಟೂರು

ಇಲ್ಲೊಂದು ಊರಿನಲ್ಲಿ ಪ್ರತಿವರ್ಷ ನಡೆಯುವ ರಥೋತ್ಸವದಲ್ಲಿ ಒಂದು ವರ್ಗದ ಜನರಿಗೆ ಪ್ರತ್ಯೇಕ ಊಟದ ವ್ಯವಸ್ಥೆಯನ್ನು ಇಂದಿಗೂ ಮಾಡಿಕೊಂಡು ಬರುತ್ತಿದ್ದಾರೆ. ಅದನ್ನು ನೋಡಿದಾಗಲೆಲ್ಲಾ, ನಮ್ಮ ಸರ್ಕಾರಿ ಶಾಲೆಯ ಮಕ್ಕಳು ಮಧ್ಯಾಹ್ನದ ಬಿಸಿಯೂಟದ ಸಮಯದಲ್ಲಿ ಒಟ್ಟಿಗೆ ಕೂತು ಸಾಮರಸ್ಯದಿಂದ ಊಟ ಮಾಡುವುದು ನೆನಪಾಗುತ್ತದೆ. ಒಬ್ಬಳು ಹುಡುಗಿಯಂತೂ ತನ್ನ ಗೆಳತಿಗೆ ತಾಯಿಯಂತೆ ಕೈತುತ್ತು ನೀಡಿದ್ದು, ಹುಡುಗರು ಒಂದೇ ತಟ್ಟೆಯಲ್ಲಿ ಹಂಚಿಕೊಂಡು ಊಟ ಮಾಡಿದ್ದು, ಇನ್ನೊಬ್ಬಳು ಹುಷಾರಿಲ್ಲದ ತನ್ನ ಸ್ನೇಹಿತೆಗೆ ತಟ್ಟೆಯಲ್ಲಿ ಊಟ ಹಾಕಿಸಿಕೊಂಡು ಹೋಗಿ ತಿನ್ನಿಸಿದ್ದು... ಸಾಮರಸ್ಯದ ಇಂತಹ ಹತ್ತೆಂಟು ನಿದರ್ಶನಗಳನ್ನು ನಾನು ಶಾಲಾ ಅಂಗಳದಲ್ಲಿ ನೋಡಿದ್ದೇನೆ.

ಮಗು ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತದೆ. ಬೆಳೆಯುತ್ತಾ ಅದು ಅಲ್ಪಮಾನವನಾಗಿ ಬದಲಾಗುತ್ತದೆ. ಮತ್ತೆ ಅದನ್ನು ವಿಶ್ವಮಾನವನನ್ನಾಗಿ ಮಾಡಬೇಕು ಎಂದು ಕುವೆಂಪು ಹೇಳುತ್ತಾರೆ. ನಾವು ಕೊಡುವ ಶಿಕ್ಷಣ ಅದನ್ನು ಸಾಧ್ಯ ಮಾಡಬೇಕು. ವಿಶ್ವಮಾನವನಾಗಿ ಹುಟ್ಟಿದ ಮಗು ಅಲ್ಪಮಾನವನಾಗಿ ಬದಲಾಗುವ ಮತ್ತು ಅದನ್ನು ಹಾಗೆ ಬದಲಾಯಿಸಲು ಸಿದ್ಧವಿರುವ ಈ ಕಾಲದ ವಾತಾವರಣವನ್ನು ಕಿಂಚಿತ್ತಾದರೂ ಸರಿಮಾಡಿಕೊಳ್ಳುವ, ಮಗುವನ್ನು ಒಬ್ಬ ಒಳ್ಳೆಯ ಮನುಷ್ಯನನ್ನಾಗಿ ಉಳಿಸಿಕೊಳ್ಳುವ ಪ್ರಯತ್ನಗಳು ನಮ್ಮ ಶಿಕ್ಷಣದ ಪ್ರಕ್ರಿಯೆಯಲ್ಲಿ ಸತತವಾಗಿ ನಡೆಯುತ್ತಲೇ ಇವೆ. ಅವನ್ನು ಇನ್ನಷ್ಟು ಚುರುಕುಗೊಳಿಸಲು ಮತ್ತು ಮತ್ತಷ್ಟು ಪ್ರಭಾವಿಯಾಗಿಸಲು ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ 'ನಾವು ಮನುಜರು' ಎನ್ನುವ ವಿಶಿಷ್ಟ ಕಾರ್ಯಕ್ರಮವೊಂದು ಈ ವರ್ಷದಿಂದ ಜಾರಿಯಾಗಿದೆ.

ರಾಜ್ಯ ಸರ್ಕಾರದ 2024- 25ರ ಬಜೆಟ್ ಮಂಡನೆಯ ಸಮಯದಲ್ಲಿ ಈ ಕಾರ್ಯಕ್ರಮವನ್ನು ಘೋಷಿಸಲಾಯಿತು. ವಾರದಲ್ಲಿ ಎರಡು ಗಂಟೆಯ ಈ ಅವಧಿಯಲ್ಲಿ ವಿಚಾರವಿಮರ್ಶೆ, ಸಂವಾದ ಚಟುವಟಿಕೆಗಳನ್ನು ನಡೆಸಬೇಕೆಂದು ಅದು ಹೇಳುತ್ತದೆ. ಇದು ಎಂದಿನ ಸಾಮಾನ್ಯ ತರಗತಿಯಂತೆ ವಿಷಯ ಬೋಧನೆಗೆ ಇಳಿಯದೆ, ಮಗುವಿಗೆ ಆ ವಿಚಾರಗಳ ಕುರಿತಾಗಿ ಅನುಭವ ಕೊಡುವ ಅನೇಕ ಚಟುವಟಿಕೆಗಳನ್ನು ಆಯೋಜಿಸಲು ಸೂಚಿಸುತ್ತದೆ.

'ನಾವು ಮನುಜರು' ಕಾರ್ಯಕ್ರಮವು ಶಾಲೆಗಳನ್ನು ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ ಮತ್ತು ಸಹಬಾಳ್ವೆಯ ವಿದ್ಯಾಕೇಂದ್ರಗಳನ್ನಾಗಿ ಮಾಡಬೇಕೆಂಬ ಸ್ಪಷ್ಟ ಉದ್ದೇಶವನ್ನು ಹೊಂದಿದೆ. ಆ ಮೂಲಕ ನಾಳಿನ ಸಮಾಜದಲ್ಲಿ ಪರಸ್ಪರ ಸಾಮರಸ್ಯ, ವೈಜ್ಞಾನಿಕ ಚಿಂತನೆ ಹಾಗೂ ಮನುಷ್ಯ ಮನುಷ್ಯರ ಮಧ್ಯೆ ಸಹಬಾಳ್ವೆಯ ಬದುಕಿನ ಕನಸು ಹೊತ್ತಿದೆ. ಪಂಪ ಮಹಾಕವಿಯ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತಿನ ಸಾರಾಂಶದಂತಿದೆ ಈ ಕಾರ್ಯಕ್ರಮ. ಈ ದಿಸೆಯಲ್ಲಿ ಏನೆಲ್ಲಾ ಮಾಡಬಹುದು ಎಂಬುದರ ಬಗ್ಗೆ ವಿವರವಾದ ವಿಷಯ ಮತ್ತು ಚಟುವಟಿಕೆಗಳ ಮಾಹಿತಿ ಒದಗಿಸಿದೆ. ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ಮೂಲಕ ಇದು ನಡೆಯುತ್ತಿದೆ.

ಕಲಿತವರೇ ಅಡ್ಡದಾರಿ ಹಿಡಿದು ಎಲ್ಲರಿಗಿಂತ ಮುಂದೆ ಹೊರಟಿರುವಾಗ, ಆ 'ಕಲಿಕೆ'ಯನ್ನು ನಾವು ವಿಮರ್ಶೆಗೆ ಒಳಪಡಿಸಲೇ ಬೇಕಾಗುತ್ತದೆ. ನಾವು ಇನ್ನೂ ಏನನ್ನೋ ಕಲಿಸಬೇಕಿತ್ತೇ, ಕಲಿಸಿದ್ದು ತಟ್ಟಲಿಲ್ಲವೇ ಅಥವಾ ಅದು ಅಂಕವಾಗಿ ಪರಿವರ್ತನೆಗೊಂಡು ಅಂಕಪಟ್ಟಿಯಲ್ಲೇ ಉಳಿದುಹೋಯಿತೇ ಎಂಬಂತಹ ಪ್ರಶ್ನೆಗಳು ಮೂಡುವುದು ಸಹಜ. ಕಲಿತದ್ದು ಬದುಕಾಗುವಂತೆ, ಬಾಳಿನ ದಾರಿಯಲ್ಲಿ ಅದು ಸಹಾಯಕ್ಕೆ ಬರುವಂತೆ, ಸಮಾಜವನ್ನು ತಿದ್ದಿ ನಡೆಸುವಂತೆ ನಾವು ಕಲಿಸಬೇಕಾಗಿದೆ. ನಿಜವಾದ ಕಲಿಕೆಯ ಉದ್ದೇಶವೂ ಅದೇ ಆಗಿರುತ್ತದೆ.

ನಾಗರಿಕ ಸಮಾಜದಲ್ಲಿ ಅನಾಗರಿಕ ವರ್ತನೆಗಳದೇ ಪಾರುಪತ್ಯವಿದೆ. ಶೋಷಣೆ ಇನ್ನೂ ಜೀವಂತವಾಗಿದೆ. ಲಿಂಗತಾರತಮ್ಯ ನಡೆದೇ ಇದೆ. ಜಾತೀಯತೆ ಅಷ್ಟೇ ಪ್ರಬಲವಾಗಿ ಉಳಿದಿದೆ. ಧಾರ್ಮಿಕ ಸಹಿಷ್ಣುತೆ ಇನ್ನೂ ಬೇಕಾಗಿದೆ. ಪರಸ್ಪರ ಗೌರವವನ್ನು ಕಳೆದುಕೊಂಡಿದ್ದೇವೆ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎನ್ನುವುದು ಪುಸ್ತಕದಲ್ಲೇ ಉಳಿದುಹೋಗಿದೆ. ಸರ್ವಜನಾಂಗದ ಶಾಂತಿಯ ತೋಟ ಎನ್ನುವ ನಾಡಗೀತೆಯ ಸಾಲು ನಾವು ಹಾಡಿ ಬಂದ ಅಂಗಳದಲ್ಲೇ ಉಳಿದಿದೆ. ಜಗತ್ತಿಗೆ ಬರುವ ಮಗು ಸಲ್ಲದ ಈ ವರ್ತನೆಗಳ ಕೈ ಹಿಡಿದೇ ಸಮಾಜಕ್ಕೆ ಬರಬೇಕಾದ ವಿಚಿತ್ರ ಸನ್ನಿವೇಶದಲ್ಲಿ ನಾವಿದ್ದೇವೆ. ಮಗುವನ್ನು ಇಂತಹ ವರ್ತನೆಗಳಿಂದ ರಕ್ಷಿಸಿ, ನಾಳೆಗೆ ಅದನ್ನು ಒಳ್ಳೆಯ ನಾಗರಿಕನನ್ನಾಗಿ ರೂಪಿಸುವುದು 'ನಾವು ಮನುಜರು' ಕಾರ್ಯಕ್ರಮದ ಮೂಲ ಜೀವಾಳ.

ಪಠ್ಯದ ಬೋಧನೆಯಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಗುವಿನ ಎದೆಗೆ ಸಾಮರಸ್ಯದ ಬೀಜವೊಂದನ್ನು ಬಿತ್ತಬೇಕು. ಬೋಧಿಸುವ ಬೋಧನೆಗೆ ತೂಕ ಬರುವುದು ಬೋಧಿಸುವವ ತಾನು ಬೋಧಿಸುವ ವಿಷಯದಂತೆ ಸ್ವಲ್ಪವಾದರೂ ಇರುವುದು. ಇಲ್ಲಿ ಶಿಕ್ಷಕನ ಪಾತ್ರ ದೊಡ್ಡದು. ತಾನು ಮಾತ್ರ ಜಾತೀಯತೆಯನ್ನು ಪಾಲಿಸುತ್ತಾ ಎಲ್ಲ ಮನುಷ್ಯರೂ ಒಂದೇ ಎಂದು ಕಲಿಸಲು ಮುಂದಾದರೆ, ಅಂತಹ ಕಲಿಕೆಗೆ ತೂಕ ಬರುವುದಿಲ್ಲ. ನಾಳಿನ ಉತ್ತಮ ಸಮಾಜಕ್ಕೆ ಮಕ್ಕಳನ್ನು ಅಣಿಗೊಳಿಸಲು ಇದೊಂದು ಉತ್ತಮ ಕಾರ್ಯಕ್ರಮ. ಸತತ ಅನುಪಾಲನೆ ಮತ್ತು ಎಲ್ಲರ ಇಚ್ಛಾಶಕ್ತಿಯಿಂದ ಇದು ಸಾಧ್ಯವಾದೀತು.

ವಾಚಕರ ವಾಣಿ

ಇನ್ನಾದರೂ ನಿರ್ಮಾಣವಾಗುವುದೇ ಗಾಂಧಿ ಭಾರತ?

ಗಾಂಧೀಜಿ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶಕ್ಕೆ ನೂರು ವರ್ಷ ಆಗಿರುವುದರ ಸ್ಮರಣಾರ್ಥವಾಗಿ ಗಾಂಧಿಯವರ ಪ್ರತಿಮೆ ಅನಾವರಣ ಸಮಾರಂಭವನ್ನು ಬೆಳಗಾವಿಯಲ್ಲಿ ಇಂದು (ಜ. 21) ಆಯೋಜಿಸಿರುವ ಸಂಬಂಧ ರಾಜ್ಯ ಸರ್ಕಾರ ನೀಡಿರುವ ಜಾಹೀರಾತು, ಪತ್ರಿಕೆಗಳ ಮುಖಪುಟದಲ್ಲಿ ದೊಡ್ಡದಾಗಿ ಪ್ರಕಟವಾಗಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಇತರರು 'ಗಾಂಧಿ ಭಾರತವನ್ನು ಮರುನಿರ್ಮಿಸಲು' ತಮ್ಮೊಂದಿಗೆ ಕೈಜೋಡಿಸಬೇಕೆಂದು ಜನರನ್ನು ಕೋರಿದ್ದಾರೆ. ಗಾಂಧೀಜಿ ಆದರ್ಶಗಳ ಅನುಸರಣೆ, ತತ್ವಗಳ ಅಳವಡಿಕೆ ಮತ್ತು ಕನಸುಗಳನ್ನು ನನಸಾಗಿಸುವುದು ರಾಷ್ಟ್ರದ ಇಂದಿನ ಅಗತ್ಯ ಎಂದು ಜಾಹೀರಾತಿನ ಮೂಲಕ ಜನರಿಗೆ ಸರ್ಕಾರ ಕರೆ ಕೊಟ್ಟಿದೆ. ಅಂದರೆ, ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳು ಕಳೆದುಹೋಗಿದ್ದರೂ ಗಾಂಧೀಜಿಯ ಆದರ್ಶ, ತತ್ವ ಮತ್ತು ಕನಸುಗಳು ಇನ್ನೂ ಬೋಧನೆಯ ಮಟ್ಟದಲ್ಲೇ ಇವೆ ಎಂದಾಯಿತು. ಈ ಮುಂಚೆ ಅವು ಅಗತ್ಯವೆಂದು ಯಾವೊಂದು ರಾಜಕೀಯ ಪಕ್ಷಕ್ಕೂ ಮನವರಿಕೆಯಾಗಲಿಲ್ಲ ಎಂದು ಇದರ ಅರ್ಥ.

ರಾಷ್ಟ್ರದ ಮಾತಂತಿರಲಿ, ರಾಜ್ಯದ 'ಇಂದಿನ ಅಗತ್ಯ' ಗಾಂಧೀಜಿಯ ತತ್ವಾದರ್ಶಗಳ ಪ್ರಾಮಾಣಿಕ ಅನುಸರಣೆ ಎನ್ನುವುದಾದರೆ, ರಾಜಕಾರಣಿಗಳು ಈ ದಿಸೆಯಲ್ಲಿ ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು. ಗಾಂಧೀಜಿಯದು ಸರಳ ಜೀವನವಾಗಿತ್ತು. ನುಡಿದಂತೆ ನಡೆದು ಅವರು ಮಾರ್ಗದರ್ಶಿಯಾದರು. ರಾಜಕಾರಣಿಗಳು ಮೊದಲು ಅವರ ಈ ಮಾರ್ಗವನ್ನು ತಮ್ಮ ಬದುಕಿನಲ್ಲಿ ಅನುಷ್ಠಾನಗೊಳಿಸಿದಾಗ ಮಾತ್ರ ಇತರರಿಗೆ ತಿಳಿಹೇಳುವ ಅರ್ಹತೆ ಬರುತ್ತದೆ. ರಾಜಕಾರಣಿಗಳಿಂದ ಈ ಕಾರ್ಯ ಇದುವರೆಗೂ ಆಗಿಯೇ ಇಲ್ಲ. ಆದ್ದರಿಂದ, ನಾವು ಗಾಂಧಿ ಭಾರತವನ್ನು ಇನ್ನಾದರೂ ನಿರ್ಮಿಸಲು (ಮರುನಿರ್ಮಾಣ ಅಲ್ಲ) ಶ್ರಮಿಸುತ್ತೇವೆಯೇ ಎಂಬ ಪ್ರಶ್ನೆ ನಮಗೆ ಪ್ರಸ್ತುತವಾಗುತ್ತದೆ.

ಸಾಮಗ ದತ್ತಾತ್ರಿ, ಬೆಂಗಳೂರು

ಕೃಷಿ ವಿಶ್ವವಿದ್ಯಾಲಯ: ಒಂದೇ ಮೂಲದಿಂದ ಪರಿಹಾರ

ಮಂಡ್ಯ ಜಿಲ್ಲೆಯ ವಿ.ಸಿ. ಫಾರಂನಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸಚಿವ ಸಂಪುಟ ಅನುಮೋದನೆ ನೀಡಿರುವುದು ಶ್ಲಾಘನೀಯ. ಈ ಮಹತ್ವಾಕಾಂಕ್ಷಿ ಯೋಜನೆ ಕಾರ್ಯರೂಪಕ್ಕೆ ಬರುವುದರಿಂದ ರೈತರ ಅನೇಕ ಸಮಸ್ಯೆಗಳಿಗೆ, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಒಂದೇ ಮೂಲದಿಂದ ಪರಿಹಾರ ದೊರಕಲು ಸಾಧ್ಯವಾಗುತ್ತದೆ.

ಮೈಸೂರು ತೋಟಗಾರಿಕೆ ಕಾಲೇಜು ಪ್ರಸ್ತುತ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಅಧೀನದಲ್ಲಿ ಇದೆ. ಮುಂದೆ ಇದು, ನೂತನವಾಗಿ ಅಸ್ತಿತ್ವಕ್ಕೆ ಬರುವ ಮಂಡ್ಯ ಕೃಷಿ ವಿಶ್ವವಿದ್ಯಾಲಯದ ಅಧೀನಕ್ಕೆ ಬರಲಿದೆ. ಇದರಿಂದ, ಮೈಸೂರು ವಿಭಾಗದಲ್ಲಿನ ಕೃಷಿಗೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ, ಸಂಶೋಧನೆ, ವಿಸ್ತರಣಾ ಘಟಕಗಳು ಹಾಗೂ ಕಾಲೇಜುಗಳು ಇದಕ್ಕೆ ಸೇರ್ಪಡೆಗೊಳ್ಳುತ್ತವೆ. ಆಗ ಈ ವಿಭಾಗದ ವ್ಯಾಪ್ತಿಗೊಳಪಡುವ ಜಿಲ್ಲೆಗಳ ರೈತರಿಗೆ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆ ಇದೆ.

ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು

ಆಧಾರ್ ತಿದ್ದುಪಡಿ: ಶಾಲಾ ಹಂತದಲ್ಲಿ ನಡೆಯಲಿ

ಶಾಲಾ ಮಕ್ಕಳ ಹೆಸರು ಆಧಾರ್ ಕಾರ್ಡ್‌ನಲ್ಲಿ ಇರುವುದಕ್ಕೂ ಶಾಲಾ ಎಸ್‌ಟಿಎಸ್‌ನಲ್ಲಿ (ಸ್ಟೂಡೆಂಟ್ ಟ್ರ್ಯಾಕಿಂಗ್ ಸಿಸ್ಟಮ್) ಇರುವುದಕ್ಕೂ ತಾಳೆಯಾಗದೆ, ಅದನ್ನು ಸರಿಪಡಿಸಲು ಮಕ್ಕಳು ತಿದ್ದುಪಡಿಗಾಗಿ ವರ್ಷಗಟ್ಟಲೆ ಅಲೆದಾಡಿದರೂ ಸಾಧ್ಯವಾಗುತ್ತಿಲ್ಲ. ಆ ದಾಖಲೆ ಈ ದಾಖಲೆ ತೆಗೆದುಕೊಂಡು ಬನ್ನಿ ಎಂದು ಹೇಳುವುದು, ತೆಗೆದುಕೊಂಡು ಹೋದರೂ ಆಧಾರ್‌ನಲ್ಲಿ ಅಥವಾ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನದ ತಂತ್ರಾಂಶದಲ್ಲಿ, ಶಾಲಾ ಎಸ್‌ಟಿಎಸ್ ತಂತ್ರಾಂಶದಲ್ಲಿ ಹೆಸರು ಹೊಂದಾಣಿಕೆ ಆಗದೆ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದಿಂದ ವಂಚಿತರಾಗುವಂತೆ ಆಗಿದೆ. ಆಧಾರ್ ತಿದ್ದುಪಡಿಯನ್ನು ಶಾಲಾ ಹಂತದಲ್ಲಿ ಅಥವಾ ಕ್ಲಸ್ಟರ್ ಹಂತದಲ್ಲಿ ಮಾಡಿದರೆ ಶಿಕ್ಷಕರು ಮತ್ತು ಮಕ್ಕಳ ಗೋಳು ಕಡಿಮೆಯಾಗಬಹುದು. ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ?

ಅಶೋಕ ಚನ್ನಳ್ಳಿ, ಹಿರೇಕೆರೂರು

ಲೇಖನದ ಆಶಯ ಅರಿಯಬೇಕಿದೆ

'ನಾನು ನಿತ್ಯ ಒಂದು ತಾಸಿಗೂ ಹೆಚ್ಚು ಸಮಯ ಪತ್ರಿಕೆಗಳನ್ನು ಓದುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 19). ಇದು ಖಂಡಿತ ಸಂತೋಷದ ಸಂಗತಿ. ಆದರೆ ಇಲ್ಲಿ ಮುಖ್ಯವಾಗುವುದು ಪತ್ರಕರ್ತರು ಹಾಗೂ ಇತರರ ಮುಖ್ಯ ಲೇಖನಗಳನ್ನು ಓದಿದ ನಂತರ ಲೇಖನದಲ್ಲಿನ ಸತ್ಯ ಸಂಗತಿ, ನೈಜ ವಿಷಯಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬುದು. ಹಾಗೆ ಮಾಡಿದ್ದೇ ಆದರೆ ಅದರಿಂದ ಜನರಿಗೂ ಹಿತ ರಾಜ್ಯಕ್ಕೂ ಹಿತ. ಒಂದುವೇಳೆ ಈ ಕೆಲಸ ಆಗದಿದ್ದರೆ, ಲೇಖನದ ಉದ್ದೇಶ ಈಡೇರುವುದಿಲ್ಲ. ಲೇಖಕರ ಆಶಯ ಮುಖ್ಯಮಂತ್ರಿಗಳ ಗಮನಕ್ಕೆ ಬಾರದಿದ್ದರೆ ಜನರಿಗೂ ರಾಜ್ಯಕ್ಕೂ ಪ್ರಯೋಜನವಿಲ್ಲ.

ಎ.ವಿ.ಶಾಮರಾವ್, ಬೆಂಗಳೂರು

ಅತಿಥಿ ಉಪನ್ಯಾಸಕರ ನೇಮಕ: ಹಾನಿ ಸರಿಪಡಿಸಿ

ರಾಜ್ಯದಲ್ಲಿ 5,000 ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳಲಿರುವ ಬಗೆಗಿನ ಪ್ರೊ. ಸಿ.ಎನ್.ರಾಮಚಂದ್ರನ್ ಅವರ ಲೇಖನ (ಸಂಗತ, ಜ. 17) ಹಾಗೂ ಕೂಡ್ಲೂರು ವೆಂಕಟಪ್ಪ ಅವರ ಪತ್ರ (ವಾ.ವಾ., 18) ಅತ್ಯಂತ ಕಾಳಜಿಯಿಂದ ಕೂಡಿವೆ. ಬೇಕಾದಾಗ ಬಳಸಿಕೊಂಡು ಬೇಡವಾದಾಗ ತೆಗೆದುಹಾಕುವ ಈ ರೀತಿಯ ಪರಿಪಾಟ ದೋಷಪೂರ್ಣವಾಗಿದೆ. ಅವರು ಪಟ್ಟ ಶ್ರಮ, ಗಳಿಸಿದ ಜ್ಞಾನ ವ್ಯರ್ಥವಾಗುತ್ತದೆ. ವಯಸ್ಸು ಮೀರಿರುವುದರಿಂದ ಬೇರೆ ಕೆಲಸವೂ ಸಿಗುವುದಿಲ್ಲ. ಅವರ ಕುಟುಂಬಗಳು ಅತಂತ್ರವಾಗುತ್ತವೆ.

ಒಮ್ಮೆಗೇ ಎಷ್ಟು ಬೇಕೋ ಅಷ್ಟು ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳುವ ಪದ್ಧತಿಯನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ಉಪನ್ಯಾಸಕರ ಹಾಗೂ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ. ಶಿಕ್ಷಣ ಮತ್ತು ನ್ಯಾಯಾಂಗ ಕ್ಷೇತ್ರಗಳ ಪರಿಶುದ್ಧತೆಯನ್ನು ಕಾಪಾಡಿಕೊಂಡರೆ ಮಾತ್ರ ಸಮಾಜದ ಸ್ವಾಸ್ಥ್ಯ ಉಳಿಯುತ್ತದೆ. ಈಗಾಗಲೇ ಆಗಿರುವ ಹಾನಿಯನ್ನು ಆದ್ಯತೆಯ ಮೇಲೆ ಸರಿಪಡಿಸಬೇಕಾಗಿದೆ.

ಎಚ್.ಎಸ್.ಎಂ.ಪ್ರಕಾಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋಲ್ಕತ್ತದ ಆ ಬಡ ದಂಪತಿಯು ತಮ್ಮ ಮಗಳನ್ನೇ ಸರ್ವಸ್ವ ಎಂದುಕೊಂಡಿದ್ದರು. ಮಗಳ ಸಣ್ಣಪುಟ್ಟ ಆಸೆ ಈಡೇರಿಸಲೂ ಶಕ್ತಿಮೀರಿ ಶ್ರಮಿಸುತ್ತಿದ್ದರು. ತಾನು ವೈದ್ಯಳಾಗಿ ಅಪ್ಪ-ಅಮ್ಮನನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎನ್ನುವ ಹಂಬಲ ಮಗಳದ್ದು. ಆಕೆಯ ಮೇಲೆ ಅತ್ಯಾಚಾರ ಎಸಗಿ, ಅವರನ್ನು ಹತ್ಯೆ ಮಾಡಿ, ಬಡ ಕುಟುಂಬದ ಕನಸನ್ನು ಕಮರುವಂತೆ ಮಾಡಿದ ಅಪರಾಧಿಗೆ ನ್ಯಾಯಾಲಯವು ಬದುಕಿರುವವರೆಗೆ ಜೈಲು ಶಿಕ್ಷೆ ವಿಧಿಸಿದೆ. ಈ ಪ್ರಕರಣವು ದೇಶದ ಅಂತಃಸಾಕ್ಷಿಯನ್ನು ಕಲಕಿತ್ತು

ಮನಕಲಕಿದ ಹೀನ ಕೃತ್ಯ

ಪ್ರಜಾವಾಣಿ ವಾರ್ತೆ

'ನನ್ನ ಬಗ್ಗೆ ಯೋಚನೆ ಮಾಡಬೇಡ. ಸಮಯಕ್ಕೆ ಸರಿಯಾಗಿ ಔಷಧ ತೆಗೆದುಕೊಳ್ಳುವಂತೆ ಅಪ್ಪನಿಗೆ ಹೇಳು...'

ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿದ್ದ ವೈದ್ಯ ವಿದ್ಯಾರ್ಥಿನಿ ಆಗಸ್ಟ್ 8ರ ರಾತ್ರಿ ತನ್ನ ತಾಯಿಗೆ ಕರೆ ಮಾಡಿದಾಗ ಆಡಿದ್ದ ಕೊನೆಯ ಮಾತುಗಳಿವು. ಸತತ 36 ಗಂಟೆ ಕೆಲಸ ಮಾಡಿ ದಣಿದಿದ್ದ ಆಕೆಗೆ ವಿಶ್ರಾಂತಿ ಬೇಕಿತ್ತು. ಆದರೆ, ಆ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯರು ವಿಶ್ರಾಂತಿ ಪಡೆಯಲು ನಿರ್ದಿಷ್ಟ ಸ್ಥಳವೇ ಇರಲಿಲ್ಲ. ಹಾಗಾಗಿ, ಅವರು ಆಸ್ಪತ್ರೆಯ ಸೆಮಿನಾರ್ ಹಾಲ್‌ಗೆ ಹೋಗಿ ಮಲಗಿದರು.

ಮಾರನೆಯ ದಿನ ಬೆಳಿಗ್ಗೆಯ ಹೊತ್ತಿಗೆ ಸೆಮಿನಾರ್ ಹಾಲ್‌ನಲ್ಲಿ ಅವರ ಮೃತದೇಹ ಸಿಕ್ಕಿತ್ತು. ವಿದ್ಯಾರ್ಥಿನಿ ಮೈಮೇಲಿನ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದವು. ಅವರ ದೇಹದ ಮೇಲೆ ಗಾಯಗಳು ಅಲ್ಲಿ ಏನು ನಡೆದಿತ್ತು ಎನ್ನುವುದನ್ನು ವಿವರಿಸುವಂತಿದ್ದವು. ದುಷ್ಕರ್ಮಿಯೊಬ್ಬ ಅವರ ಮೇಲೆ ಅತ್ಯಾಚಾರ ಮಾಡಿ, ಹತ್ಯೆ ಮಾಡಿದ್ದ.

ಆರ್.ಜಿ.ಕರ್ ಆಸ್ಪತ್ರೆಯಲ್ಲಿ ನಡೆದಿದ್ದ ಅಪರಾಧದ ಭೀಕರತೆಗೆ ಇಡೀ ದೇಶವೇ ಬೆಚ್ಚಿಬಿದ್ದಿತ್ತು. ಮಾರನೆಯ ದಿನವೇ ಆರೋಪಿ ಸಂಜಯ್ ರಾಯ್‌ನನ್ನು ಪೊಲೀಸರು ಬಂಧಿಸಿದ್ದರು. ನಾಗರಿಕ ಸ್ವಯಂಸೇವಕನಾಗಿದ್ದ ಸಂಜಯ್ ರಾಯ್, ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ. ರಕ್ಷಣೆ ಕೊಡಬೇಕಾಗಿದ್ದವನೇ ಘೋರವಾದ ಕೃತ್ಯವೆಸಗಿ, ವೈದ್ಯ ವಿದ್ಯಾರ್ಥಿನಿಯನ್ನು ಹತ್ಯೆ ಮಾಡಿದ್ದ ಎಂದು ಪೊಲೀಸರು ಹೇಳಿದ್ದರು.

ವೈದ್ಯ ವಿದ್ಯಾರ್ಥಿನಿಯ ಪೋಷಕರು ಕೋಲ್ಕತ್ತದ ಕೆಳಮಧ್ಯಮ ವರ್ಗಕ್ಕೆ ಸೇರಿದವರು. ಅವರ ತಂದೆ ಟೈಲರ್ ಆಗಿದ್ದರು. ತಾಯಿ ಗೃಹಿಣಿ. ಅವರಿಗೆ ಇದ್ದದ್ದು ಒಬ್ಬಳೇ ಮಗಳು. ಮಗಳನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲಹಿದ್ದರು. ಹಣಕಾಸು ಮುಗ್ಗಟ್ಟು ಎದುರಿಸುತ್ತಿದ್ದ ಕುಟುಂಬವು, ಮಗಳ ಸಣ್ಣ ಪುಟ್ಟ ಆಸೆಗಳನ್ನು ಪೂರೈಸಲೂ ಪರದಾಡುತ್ತಿತ್ತು. ಮಗಳಿಗೆ ಇಷ್ಟವಾದ ದಾಳಿಂಬೆ ಹಣ್ಣು ತೆಗೆದುಕೊಡಲೂ ಅಪ್ಪನ ಬಳಿ ಹಣ ಇರುತ್ತಿರಲಿಲ್ಲ. ಹೀಗಾಗಿಯೇ ತನ್ನ ಮಗಳು ವೈದ್ಯಳಾಗುತ್ತಾಳೆ ಎಂದು ಅಪ್ಪ ಹೇಳಿದಾಗ ಅದನ್ನು ನೆರೆಹೊರೆಯವರು ನಂಬಿರಲಿಲ್ಲ. ಆದರೆ, ಮಗಳು ಹಟಕ್ಕೆ ಬಿದ್ದು, ಚೆನ್ನಾಗಿ ಓದಿ ಸರ್ಕಾರಿ ಕಾಲೇಜಿನಲ್ಲಿಯೇ ಎಂಬಿಬಿಎಸ್ ಸೀಟು ಪಡೆದುಕೊಂಡಿದ್ದರು.

ಹತ್ಯೆಗೊಳಗಾದ ವೈದ್ಯ ವಿದ್ಯಾರ್ಥಿನಿಗೆ ಡೈರಿ ಬರೆಯುವ ಹವ್ಯಾಸವಿತ್ತು. 'ನಾನು ವೈದ್ಯ ಪದವಿಯಲ್ಲಿ ಉತ್ತಮವಾಗಿ ಓದಿ, ಚಿನ್ನದ ಪದಕ ಪಡೆಯುತ್ತೇನೆ. ನಂತರ ನನ್ನ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂದು ಅವರು ದಿನಚರಿಯಲ್ಲಿ ನಮೂದಿಸಿದ್ದರು. ಮಗಳ ಸಾವಿನಿಂದ ಬಡ ಪೋಷಕರ ಆಸೆಗಳೆಲ್ಲ ನುಚ್ಚುನೂರಾಗಿವೆ, ಕನಸುಗಳು ಕಮರಿವೆ. ಕೆಲಸದ ಸ್ಥಳದಲ್ಲಿ ಮಗಳಿಗೆ ಸೂಕ್ತ ರಕ್ಷಣೆ ನೀಡದ ಆಸ್ಪತ್ರೆಯ ಮುಖ್ಯಸ್ಥರೂ ಈ ಘಟನೆಗೆ ಕಾರಣ ಎಂದು ಅವರು ಆರೋಪಿಸಿದರು. ರಾಜ್ಯ ಸರ್ಕಾರ ಘೋಷಿಸಿದ್ದ ಪರಿಹಾರವನ್ನು ಅವರು ನಿರಾಕರಿಸಿದರು. ತಮ್ಮ ಮಗಳ ಸಾವಿಗೆ ನ್ಯಾಯ ಬೇಕು ಎನ್ನುವುದು ಅವರ ಒಕ್ಕೊರಲ ಬೇಡಿಕೆಯಾಗಿತ್ತು.

ಸದ್ದು ಮಾಡಿದ ಹೋರಾಟ

ತಮ್ಮ ಸಹೋದ್ಯೋಗಿಯ ದಾರುಣ ಅಂತ್ಯದಿಂದ ಕನಲಿದ ವೈದ್ಯ ಸಮೂಹವು ದೇಶದಾದ್ಯಂತ ಬೀದಿಗಿಳಿಯಿತು. ಭಾರತೀಯ ವೈದ್ಯಕೀಯ ಸಂಘದ (ಐಎಂಎ) ನೇತೃತ್ವದಲ್ಲಿ ವೈದ್ಯರು ಕೆಲಸ ಸ್ಥಗಿತಗೊಳಿಸಿ ಬೀದಿಗಿಳಿದು ಹೋರಾಟ ನಡೆಸಿದರು. ಕೃತ್ಯ ನಡೆದ ಆರ್.ಜಿ.ಕರ್ ಆಸ್ಪತ್ರೆಯ ಮೇಲೆ ದಾಳಿಗಳೂ ನಡೆದವು. ಪ್ರತಿಭಟನೆಗಳ ಬಿಸಿ ಪಶ್ಚಿಮ ಬಂಗಾಳದ ಸರ್ಕಾರಕ್ಕೂ ತಟ್ಟಿತು. ಪ್ರತಿಭಟನೆಗಳ ಹಿಂದೆ ವಿರೋಧ ಪಕ್ಷ ಬಿಜೆಪಿಯ ಕೈವಾಡ ಇದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದರು. ತಕ್ಷಣದಿಂದಲೇ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ವಿಶ್ರಾಂತಿಗಾಗಿ ನಿರ್ದಿಷ್ಟ ಕೊಠಡಿ, ಸಿ.ಸಿ.ಟಿ.ವಿ ಕ್ಯಾಮೆರಾ ವ್ಯವಸ್ಥೆ ಇರುವ ರಕ್ಷಣಾ ವಲಯಗಳ ಸ್ಥಾಪನೆ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳುವುದಾಗಿ ಸರ್ಕಾರ ಘೋಷಿಸಿತ್ತು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲು ಏರಿತ್ತು. ಎಫ್ಐಆರ್ ವಿಳಂಬ ಸೇರಿದಂತೆ ತನಿಖೆಯಲ್ಲಿನ ಲೋಪಗಳತ್ತ ಬೊಟ್ಟು ಮಾಡಿದ್ದ ಆಗಿನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು, 'ಈ ಪ್ರಕರಣವು ದೇಶದ ಅಂತಃಸಾಕ್ಷಿಯನ್ನು ಕಲಕಿದೆ' ಎಂದಿದ್ದರು.

ಕಲ್ಕತ್ತಾ ಹೈಕೋರ್ಟ್ ನಿರ್ದೇಶದನ ಮೇರೆಗೆ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿತು. ಆರೋಪಿ ಸಂಜಯ್ ರಾಯ್‌ನನ್ನು ವಶಕ್ಕೆ ಪಡೆದು ತನಿಖೆ ನಡೆಸಿತು. ಈಗ ಸಂಜಯ್ ರಾಯ್ ಆರೋಪ ಸಾಬೀತಾಗಿದ್ದು, ನ್ಯಾಯಾಲಯವು ಅವನಿಗೆ ಬದುಕಿರುವವರೆಗೆ ಜೈಲು ವಾಸದ ಶಿಕ್ಷೆ ವಿಧಿಸಿದೆ. ಆದರೆ, ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸುತ್ತಿದ್ದ ವೈದ್ಯ ವಿದ್ಯಾರ್ಥಿನಿಯ ಪೋಷಕರು, ಇದರಿಂದ ತೃಪ್ತರಾಗಿಲ್ಲ. ಅಪರಾಧಿಗೆ ಗಲ್ಲು ಶಿಕ್ಷೆ ನೀಡಬೇಕು ಜತೆಗೆ, ಪ್ರಕರಣದ ಇತರ ಆರೋಪಿಗಳಿಗೂ ಶಿಕ್ಷೆ ಆಗಬೇಕು ಎನ್ನುವುದು ಅವರ ಒತ್ತಾಯ. ಪೋಷಕರಷ್ಟೇ ಅಲ್ಲ, ಆಕೆಯ ಸಹೋದ್ಯೋಗಿಗಳು, ವೈದ್ಯಕೀಯ ಸಮುದಾಯ ಕೂಡ ಶಿಕ್ಷೆ ಪ್ರಮಾಣದ ಬಗ್ಗೆ ಸಮಾಧಾನಗೊಂಡಿಲ್ಲ.

ಆಧಾರ: ಪಿಟಿಐ, ಬಿಬಿಸಿ

ಅತ್ಯಾಚಾರ, ಪ್ರತಿಭಟನೆ, ಶಿಕ್ಷೆ

ಆಗಸ್ಟ್ 9: ಕೋಲ್ಕತ್ತದ ಸರ್ಕಾರಿ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ನಾಲ್ಕನೇ ಮಹಡಿಯಲ್ಲಿರುವ ಸೆಮಿನಾರ್ ಹಾಲ್‌ನಲ್ಲಿ 31 ವರ್ಷ ವಯಸ್ಸಿನ ವೈದ್ಯಕೀಯ ವಿದ್ಯಾರ್ಥಿನಿಯ ಶವ ಪತ್ತೆ. ಆಕೆಯ ಮೇಲೆ ಅತ್ಯಾಚಾರ ಎಸಗಿ, ಕತ್ತು ಹಿಸುಕಿ ಕೊಲೆ ಮಾಡಿರುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢ. ಎಫ್ಐಆರ್ ದಾಖಲಿಸಲು ವಿಳಂಬ ಮಾಡಿದ ಪೊಲೀಸರು

ಆಗಸ್ಟ್ 10: ವಿದ್ಯಾರ್ಥಿನಿಯ ಶವ ಪತ್ತೆಯಾದ ಮಾರನೇ ದಿನ ನಾಗರಿಕ ಸ್ವಯಂಸೇವಕನಾಗಿದ್ದ ಸಂಜಯ್ ರಾಯ್‌ನನ್ನು ಬಂಧಿಸಿದ ಕೋಲ್ಕತ್ತ ಪೊಲೀಸರು

ಆಗಸ್ಟ್ 10: ಅತ್ಯಾಚಾರ, ಹತ್ಯೆಗೆ ರಾಷ್ಟ್ರದಾದ್ಯಂತ ಆಕ್ರೋಶ. ಘಟನೆಯನ್ನು ಖಂಡಿಸಿ ಆಸ್ಪತ್ರೆಯ ವೈದ್ಯರಿಂದ ಪ್ರತಿಭಟನೆ ಆರಂಭ. ಚಳವಳಿ ರೂಪ ಪಡೆದುಕೊಂಡ ಹೋರಾಟ. ವಿದ್ಯಾರ್ಥಿನಿ ಮತ್ತು ಆಕೆಯ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಮತ್ತು ಕರ್ತವ್ಯನಿರತ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯ ಭದ್ರತೆ ಮತ್ತು ರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಆಗ್ರಹ

ಆಗಸ್ಟ್ 11: ಕರ್ತವ್ಯಲೋಪ ಎಸಗಿದ ಆರೋಪದಲ್ಲಿ ಆಸ್ಪತ್ರೆ ಸೂಪರಿಂಟೆಂಡೆಂಟ್ ಸಂಜಯ್ ವಶಿಷ್ಠ ಅವರನ್ನು ವರ್ಗಾವಣೆ ಮಾಡಿದ ಪಶ್ಚಿಮ ಬಂಗಾಳ ಸರ್ಕಾರ. ರಾಷ್ಟ್ರದಾದ್ಯಂತ ವೈದ್ಯರ ಮುಷ್ಕರಕ್ಕೆ ಕರೆ ನೀಡಿದ ಸ್ಥಾನಿಕ ವೈದ್ಯರ ಒಕ್ಕೂಟಗಳ ಮಹಾ ಒಕ್ಕೂಟ. ಪಶ್ಚಿಮ ಬಂಗಾಳ ಸೇರಿದಂತೆ ದೇಶದ ಹಲವೆಡೆ ಆರೋಗ್ಯ ಸೇವೆಗಳಲ್ಲಿ ವ್ಯತ್ಯಯ

ಆಗಸ್ಟ್ 12: ಮುಷ್ಕರ, ಹೋರಾಟ ತೀವ್ರಗೊಳ್ಳುತ್ತಿದ್ದಂತೆಯೇ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಪ್ರಾಂಶುಪಾಲ ಸಂದೀಪ್ ಘೋಷ್ ಪದತ್ಯಾಗ

ಆಗಸ್ಟ್ 13: 'ಪೊಲೀಸರ ತನಿಖೆಯ ಮೇಲೆ ನಂಬಿಕೆ ಇಲ್ಲ. ಸಿಬಿಐ ತನಿಖೆಗೆ ವಹಿಸುವಂತೆ ಆಗ್ರಹಿಸಿ' ಕಲ್ಕತ್ತಾ ಹೈಕೋರ್ಟ್‌ನಲ್ಲಿ ಪೋಷಕರ ಅರ್ಜಿ. ತನಿಖೆಯನ್ನು ಸಿಬಿಐಗೆ ವಹಿಸಲು ಹೈಕೋರ್ಟ್ ಸಮ್ಮತಿ

ಆಗಸ್ಟ್ 14: ಮಧ್ಯಪ್ರವೇಶಿಸಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ. ಸಿಬಿಐಗೆ ತನಿಖೆ ಹಸ್ತಾಂತರಿಸಿದ ಕೋಲ್ಕತ್ತ ಪೊಲೀಸರು. ಆರೋಪಿ ಸಂಜಯ್ ರಾಯ್ ಸಿಬಿಐ ವಶಕ್ಕೆ

ಆಗಸ್ಟ್ 15: ತೀವ್ರ ಸ್ವರೂಪ ಪಡೆದುಕೊಂಡ ಹೋರಾಟ. ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆವರಣದಲ್ಲಿ ಹಿಂಸಾಚಾರಕ್ಕೆ ತಿರುಗಿದ ಪ್ರತಿಭಟನೆ. ಆಸ್ಪತ್ರೆಯಲ್ಲಿ ಮತ್ತು ಘಟನೆ ನಡೆದ ಸ್ಥಳದಲ್ಲಿ (ನಾಲ್ಕನೇ ಮಹಡಿಯ ಸೆಮಿನಾರ್ ಹಾಲ್) ಉದ್ರಿಕ್ತ ಗುಂಪಿನಿಂದ ದಾಂದಲೆ. ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗ ಮತ್ತು ನರ್ಸಿಂಗ್ ಕೇಂದ್ರ ಘಟಕ ಧ್ವಂಸ

ಆಗಸ್ಟ್ 16: ಆಸ್ಪತ್ರೆಯಲ್ಲಿ ದಾಂದಲೆ ನಡೆಸಿದ 19 ಮಂದಿಯನ್ನು ಬಂಧಿಸಿದ ಪೊಲೀಸರು. ಆಸ್ಪತ್ರೆಯ ಪ್ರಾಂಶುಪಾಲರಾಗಿದ್ದ ಸಂದೀಪ್ ಘೋಷ್ ವಿಚಾರಣೆ ಆರಂಭಿಸಿದ ಸಿಬಿಐ

ಆಗಸ್ಟ್ 17: ಆಸ್ಪತ್ರೆಗೆ ಭೇಟಿ ನೀಡಿದ ಇಬ್ಬರು ಸದಸ್ಯರ ರಾಷ್ಟ್ರೀಯ ಮಹಿಳಾ ಆಯೋಗದ ನಿಯೋಗ. ಆಸ್ಪತ್ರೆಯಲ್ಲಿ ಭದ್ರತಾಲೋಪ ಮತ್ತು ಅಪರಾಧ ನಡೆದ ಸ್ಥಳದ ದುರಸ್ತಿ ಕೈಗೊಂಡು, ಸಾಕ್ಷ್ಯಗಳನ್ನು ತಿರುಚಲಾಗಿದೆ ಎಂದು ಆರೋಪ

ಆಗಸ್ಟ್ 20: ಪ್ರಕರಣ ಸಂಬಂಧ ಸ್ವಯಂಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್. ವೈದ್ಯಕೀಯ ಮತ್ತು ಆರೋಗ್ಯ ಕ್ಷೇತ್ರದ ಸಿಬ್ಬಂದಿಯ ರಕ್ಷಣೆ ಮತ್ತು ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿ ನೀಡಲು 10 ಮಂದಿಯ ಕಾರ್ಯಪಡೆ ರಚಿಸಿದ ಸುಪ್ರೀಂ ಕೋರ್ಟ್

ಆಗಸ್ಟ್ 24: ಪ್ರಮುಖ ಆರೋಪಿ ಮತ್ತು ಇತರ ಆರು ಮಂದಿಗೆ ಸುಳ್ಳು ಪತ್ತೆ ಪರೀಕ್ಷೆ

ಆಗಸ್ಟ್ 27: ಹಿಂಸಾಚಾರಕ್ಕೆ ತಿರುಗಿದ 'ಪಶ್ಚಿಮ್ ಬಂಗಾ ಛಾತ್ರ ಸಮಾಜ' ಎಂಬ ವಿದ್ಯಾರ್ಥಿ ಸಂಘಟನೆ ಕರೆ ನೀಡಿದ್ದ 'ನಬನ್ನಾ ಅಭಿಯಾನ'. ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ಘರ್ಷಣೆ

ಸೆಪ್ಟೆಂಬರ್ 14: ಸಾಕ್ಷ್ಯ ನಾಶ ಮತ್ತು ಎಫ್ಐಆರ್ ದಾಖಲಿಸಲು ವಿಳಂಬ ಮಾಡಿದ ಆರೋಪದಲ್ಲಿ ಸಂದೀಪ್ ಘೋಷ್ ಮತ್ತು ತಾಲಾ ಪೊಲೀಸ್ ಠಾಣೆ ಉಸ್ತುವಾರಿ ಅಭಿಜಿತ್ ಮಂಡಲ್ ಅವರನ್ನು ಬಂಧಿಸಿದ ಸಿಬಿಐ

ಅಕ್ಟೋಬರ್ 15: ಪ್ರಕರಣ ಪ್ರಮುಖ ಆರೋಪಿ ಸಂಜಯ್ ರಾಯ್ ವಿರುದ್ಧ ಆರೋಪ ಪಟ್ಟಿ ಸಲ್ಲಿಕೆ

ನವೆಂಬರ್ 4: ಆರೋಪಿ ವಿರುದ್ಧ ದೋಷಾರೋಪ ನಿಗದಿ ಮಾಡಿದ ಸಿಯಾಲದಹ ಸೆಷನ್ಸ್ ನ್ಯಾಯಾಲಯ

ಡಿಸೆಂಬರ್ 14: ಸಿಬಿಐ ಅಧಿಕಾರಿಗಳು 90 ದಿನಗಳ ಒಳಗಾಗಿ ಆರೋಪ ಪಟ್ಟಿ ಸಲ್ಲಿಸದೇ ಇದ್ದುದರಿಂದ ಸಂದೀಪ್ ಘೋಷ್, ಅಭಿಜಿತ್ ಮಂಡಲ್ ಅವರಿಗೆ ಜಾಮೀನು ಮಂಜೂರು ಮಾಡಿದ ನ್ಯಾಯಾಲಯ

ಡಿಸೆಂಬರ್ 19: ಪ್ರಕರಣವನ್ನು ಹೊಸದಾಗಿ ತನಿಖೆ ನಡೆಸಬೇಕು ಎಂದು ಮತ್ತೆ ಕಲ್ಕತ್ತಾ ಹೈಕೋರ್ಟ್ ಕದ ತಟ್ಟಿದ ಸಂತ್ರಸ್ತೆ ಪೋಷಕರು

2025, ಜನವರಿ 16: ಪ್ರಕರಣದ ಸಂಬಂಧ ಅಂತಿಮ ವಿಚಾರಣೆ ನಡೆಸಿದ ಸೆಷನ್ಸ್ ನ್ಯಾಯಾಲಯ

ಜನವರಿ 18: ಸಂಜಯ್ ರಾಯ್ ತಪ್ಪಿತಸ್ಥ ಎಂದು ಘೋಷಿಸಿದ ನ್ಯಾಯಾಲಯ

ನಿರ್ಭಯಾ ಹತ್ಯೆ ನೆನಪಿಸಿದ ಕೃತ್ಯ

ಕೋಲ್ಕತ್ತದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ ಮತ್ತು ಕೊಲೆ ಪ್ರಕರಣವು 2012ರ ಡಿಸೆಂಬರ್ 16ರಂದು ದೆಹಲಿಯಲ್ಲಿ ನಡೆದಿದ್ದ ನಿರ್ಭಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ನೆನಪಿಸಿತ್ತು. ದೆಹಲಿಯ ಅಮಾನುಷ ಪ್ರಕರಣದ ಬಗ್ಗೆ ರಾಷ್ಟ್ರದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಸರ್ಕಾರವು ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನಿನಲ್ಲಿ ಬದಲಾವಣೆ ಮಾಡುವಂತೆ ಆಗಿತ್ತು. ತ್ವರಿತ ವಿಚಾರಣಾ ನ್ಯಾಯಾಲಯಗಳನ್ನು ಸ್ಥಾಪಿಸಲೂ ಮುಂದಾಯಿತು. 2013ರ ಸೆಪ್ಟೆಂಬರ್ 13ರಂದು ವಿಚಾರಣಾ ನ್ಯಾಯಾಲಯವು ನಾಲ್ವರು ಆರೋಪಿಗಳಿಗೆ ಮರಣದಂಡನೆ ವಿಧಿಸಿತ್ತು. ಕೋಲ್ಕತ್ತದ ಪ್ರಕರಣಕ್ಕೂ ರಾಷ್ಟ್ರದಾದ್ಯಂತ ಖಂಡನೆ ವ್ಯಕ್ತವಾಗಿತ್ತಲ್ಲದೇ, ಕೋಲ್ಕತ್ತದಲ್ಲಿ ವೈದ್ಯರು ತಿಂಗಳುಗಟ್ಟಲೆ ಹೋರಾಟ ನಡೆಸಿದ್ದರು. ನಿರ್ಭಯಾ ಪ್ರಕರಣಕ್ಕೆ ಹೋಲಿಸಿದರೆ (9 ತಿಂಗಳು), ಈ ಪ್ರಕರಣದಲ್ಲಿ ನ್ಯಾಯಾಲವು ಐದು ತಿಂಗಳಲ್ಲಿ ಪ್ರಕರಣದ ವಿಚಾರಣೆ ಮುಗಿಸಿ ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಿದೆ.

'ನೋಡಿದವರು ಏನಂತಾರೆ' ಟ್ರೇಲರ್ ರಿಲೀಸ್

ನವೀನ್ ಶಂಕರ್ ನಟನೆಯ, ಕುಲದೀಪ್ ಕಾರಿಯಪ್ಪ ನಿರ್ದೇಶನದ 'ನೋಡಿದವರು ಏನಂತಾರೆ' ಸಿನಿಮಾ ಜ.31ರಂದು ಬಿಡುಗಡೆಯಾಗುತ್ತಿದ್ದು ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಟ್ರೇಲರ್ ವೀಕ್ಷಿಸಿರುವ ನಟ ಶಿವರಾಜ್‌ಕುಮಾರ್, 'ಪಾತ್ರಕ್ಕೆ ಹಾಗೂ ನಿರ್ದೇಶಕನಿಗೆ ಸರೆಂಡರ್ ಆಗೋದು ಒಬ್ಬ ನಟನ ಕರ್ತವ್ಯ. ಪ್ರತಿ ಪಾತ್ರಕ್ಕೂ ಇವರನ್ನು ಬಿಟ್ಟರೆ ಬೇರೆ ಯಾರೂ ಸೂಕ್ತವಾಗಲ್ಲ ಅನ್ನುವ ರೀತಿ ನಿಭಾಯಿಸುವುದು ನಟ ನವೀನ್ ಶಂಕರ್ ಪ್ರತಿಭೆಗೆ ಸಾಕ್ಷಿ' ಎಂದು ಶ್ಲಾಘಿಸಿದ್ದಾರೆ. ಈ ಸಿನಿಮಾದಲ್ಲಿ ಭಿನ್ನವಾದ ಒಂದು ಕಥೆ ಹಾಗೂ ಪಾತ್ರದ ಮುಖಾಂತರ ನವೀನ್ ಶಂಕರ್ ತೆರೆ ಮೇಲೆ ಬರುತ್ತಿದ್ದಾರೆ. 'ಹೊಂದಿಸಿ ಬರೆಯಿರಿ' ಸಿನಿಮಾಗೂ ಮೊದಲು ಕೇಳಿದ ಕಥೆ 'ನೋಡಿದವರು ಏನಂತಾರೆ'. ಕುಲದೀಪ್ ಹೇಳಿದ ಈ ಕಥೆ ಬಹಳ ಕಾಡಿತ್ತು. ಒಂದು ಕಾದಂಬರಿಯನ್ನು ಓದಿದ ಅನುಭವವನ್ನು ಈ ಕಥೆ ನೀಡುತ್ತದೆ' ಎಂದಿದ್ದಾರೆ ನವೀನ್.

ಭಾವನಾತ್ಮಕ ಚೌಕಟ್ಟಿನಲ್ಲಿ ಸಾಗುವ ಈ ಸಿನಿಮಾದಲ್ಲಿ ನವೀಶ್ ಶಂಕರ್ 'ಸಿದ್ಧಾರ್ಥ್ ದೇವಯ್ಯ'ನಾಗಿ ನಟಿಸಿದ್ದು, ಅಪೂರ್ವ ಭಾರದ್ವಾಜ್ ನಾಯಕಿಯಾಗಿದ್ದಾರೆ. ನಾಗೇಶ್ ಗೋಪಾಲ್ ನಿರ್ಮಾಣದ ಈ ಚಿತ್ರಕ್ಕೆ ಮಯೂರೇಶ್ ಸಂಗೀತ ಒದಗಿಸಿದ್ದು, ಅಶ್ವಿನ್ ಛಾಯಾಚಿತ್ರಗ್ರಹಣವಿದೆ.



ನವೀನ್ ಶಂಕರ್

ಒಟಿಟಿಯಲ್ಲಿ 'ಮಾರಕಾಸ್ತ್ರ'

ಮಾಲಾಶ್ರೀ ಹಾಗೂ ಹರ್ಷಿಕಾ ಪೂಣಚ್ಚ ಮುಖ್ಯಭೂಮಿಕೆಯಲ್ಲಿರುವ 'ಮಾರಕಾಸ್ತ್ರ' ಸಿನಿಮಾ ಇದೀಗ ಒಟಿಟಿ ಪ್ರವೇಶಿಸಿದೆ.

ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತೆರೆಕಂಡಿದ್ದ ಈ ಸಿನಿಮಾವನ್ನು ಗುರುಮೂರ್ತಿ ಸುನಾಮಿ ಕಥೆ ಬರೆದು ನಿರ್ದೇಶಿಸಿದ್ದರು. ಆನಂದ್ ಆರ್ಯ ನಾಯಕನಾಗಿ ನಟಿಸಿರುವ ಈ ಸಿನಿಮಾ ಇದೀಗ 'www.ottplayer.in' ಎಂಬ ವೆಬ್‌ಸೈಟ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ. '₹99 ಪಾವತಿಸಿ ಈ ಸಿನಿಮಾ ವೀಕ್ಷಿಸಬಹುದಾಗಿದೆ. ಒಮ್ಮೆ ಪಾವತಿ ಮಾಡಿದ ಬಳಿಕ 10 ಗಂಟೆಗಳ ಅವಧಿಯಲ್ಲಿ ಮೂರು ಬಾರಿ ಈ ಸಿನಿಮಾ ನೋಡಬಹುದಾಗಿದೆ' ಎಂದು ಚಿತ್ರತಂಡ ತಿಳಿಸಿದೆ.

ಶ್ರಾವ್ಯ ಕಂಬೈನ್ಸ್ ಲಾಂಛನದಲ್ಲಿ ಕೋಮಲ ನಟರಾಜ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಅಯ್ಯಪ್ಪ ಶರ್ಮ, ಮೈಕೋ ನಾಗರಾಜ್, ಉಗ್ರಂ ಮಂಜು, ಭರತ್‌ಸಿಂಗ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಮಿರಾಕಲ್ ಮಂಜು ಸಾಹಿತ್ಯ ಮತ್ತು ಸಂಗೀತ, ಆರ್.ಕೆ.ಶಿವಕುಮಾರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಸಾಮಾಜಿಕ ಜಾಲತಾಣದ ಹಲವು ಬಳಕೆದಾರರು ಮೈಕ್ರೋಸಾಫ್ಟ್ ಸಹಸಂಸ್ಥಾಪಕ ಬಿಲ್ ಗೇಟ್ಸ್ ಅವರ ವಿಡಿಯೊ ಅನ್ನು ಹಂಚಿಕೊಳ್ಳುತ್ತಿದ್ದಾರೆ. ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಬಂದಿದ್ದ ಬಿಲ್ ಗೇಟ್ಸ್ ಅವರು, ಕಾಶಿ ವಿಶ್ವನಾಥ ದೇವಾಲಯಕ್ಕೂ ಭೇಟಿ ನೀಡಿದ್ದರು ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು. ವಿಡಿಯೊದಲ್ಲಿ ಇರುವ ವ್ಯಕ್ತಿ ಬಿಲ್ ಗೇಟ್ಸ್ ಅಲ್ಲ.

ವಿಡಿಯೊ ಅನ್ನು ಹಲವು ಕೀಫ್ರೇಮ್‌ಗಳಾಗಿ ವಿಂಗಡಿಸಿದಾಗ, ಇದೇ ವಿಡಿಯೊ ಅನ್ನು 2024ರ ಡಿಸೆಂಬರ್ 24ರಂದು ಯೂ ಟ್ಯೂಬ್‌ಗೆ ಅಪ್‌ಲೋಡ್ ಮಾಡಿರುವುದು ಕಂಡುಬಂತು. 'ಬಿಲ್ ಗೇಟ್ಸ್ ಅವರ ರೀತಿಯೇ ಕಾಣುತ್ತಿರುವ ವ್ಯಕ್ತಿ' ಎಂದು ವಿಡಿಯೋಗೆ ಅಡಿಬರಹ ನೀಡಲಾಗಿದೆ. ಮಹಾಕುಂಭ ಮೇಳವು ಆರಂಭವಾಗಿದ್ದು 2025ರ ಜನವರಿ 13ರಂದು. ವಿಡಿಯೊದಲ್ಲಿ ಇರುವ ವ್ಯಕ್ತಿಯ ಚಿತ್ರವನ್ನು ಝೂಮ್ ಮಾಡಿ, ಅದನ್ನು ಬಿಲ್ ಗೇಟ್ಸ್ ಚಿತ್ರದೊಂದಿಗೆ ಹೋಲಿಸಿ ನೋಡಿದಾಗ, ಎರಡೂ ಬೇರೆ ಬೇರೆ ವ್ಯಕ್ತಿಗಳ ಚಿತ್ರಗಳು ಎನ್ನುವುದು ಕಂಡುಬಂತು. ಈ ವಿಚಾರದಲ್ಲಿ ಮತ್ತಷ್ಟು ಸ್ಪಷ್ಟತೆ ಪಡೆಯಲು ಬಿಲ್ ಗೇಟ್ಸ್ ಫೌಂಡೇಷನ್ ಅನ್ನು ಸಂಪರ್ಕಿಸಿದಾಗ, ಗೇಟ್ಸ್ ಅವರು ಭಾರತಕ್ಕೆ ಬಂದಿಲ್ಲ ಎಂದೂ ಅವರು ಮಹಾಕುಂಭ ಮೇಳದಲ್ಲಿ ಭಾಗವಹಿಸುತ್ತಿಲ್ಲ ಎಂದೂ ತಿಳಿಸಿದರು. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ

ದುರಭ್ಯಾಸಗಳನ್ನು ಬಿಡೋದು ಹೇಗೆ?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

114

ಯಾವುದೇ ವಾಹನಕ್ಕೆ ಎಕ್ಸಲರೇಟರ್, ಬ್ರೇಕ್ ಎರಡೂ ಮುಖ್ಯ. ಬ್ರೇಕ್ ಅಪಘಾತ ಆಗದಂತೆ ನೋಡಿಕೊಳ್ಳತೈತಿ. ಅದು ವೈರಾಗ್ಯ. ಎಕ್ಸಲರೇಟರ್ ವೇಗವಾಗಿ ಹೋಗು, ಪ್ರಯತ್ನ ಮಾಡು ಅಂತಾ ಹೇಳತಿರತೈತಿ. ಎರಡೂ ಬೇಕಾಗತೈತಿ. ಅಭ್ಯಾಸದ ಬಲ ಬಹಳ ಮುಖ್ಯ. ನೀವು ಕೇಳಬಹುದು, ಒಳ್ಳೆಯ ಅಭ್ಯಾಸದ ಬಗ್ಗೆ ಆಮೇಲೆ ಹೇಳುವಿರಂತೆ. ಮೊದಲು ದುರಭ್ಯಾಸ ಬಿಡೋದು ಹೇಗೆ ಅಂತ ಹೇಳಿ ಎಂದು. ಬೆಳಿಗ್ಗೆ ಬೇಗ ಏಳದೇ ಇರುವುದು, ಎಷ್ಟು ಉಣ್ಣಬೇಕೋ ಅಷ್ಟು ಉಣ್ಣೋದಿಲ್ಲ ಭಯಂಕರ ತಿನ್ನುತ್ತೇನೆ ಅದೊಂದು ದುರಭ್ಯಾಸ. ಗುಟ್ಕಾ ತಿಂತೀನಿ ಬಿಡೋಕಾಗುವಲ್ದು. ಚೈನ್ ಸ್ಮೋಕರ್ ನಾನು. ಇಸ್ಪೀಟ್ ಆಡೋದು ಬಿಡಲು ಆಗುವಲ್ದು. ಕುಡಿಯೋದು ಬಿಡೋಕಾಗೋದಿಲ್ಲ. ಮೊಬೈಲ್‌ಗೆ ಅಡಿಕ್ಟ್ ಆಗೇನಿ. ಇವುಗಳನ್ನೆಲ್ಲಾ ಬಿಡೋದು ಹ್ಯಾಂಗ ಅಂತ ನೀವು ಕೇಳ್ತೀರಿ. ಗುಟ್ಕಾ ನೋಡಿ. ಅದೊಂದು ಸಣ್ಣ ಚೀಟಿ ಅಷ್ಟೆ. ಕುಸ್ತಿಗೆ ಇಳಿದರೆ 8 ಮಂದಿಯನ್ನು ಸೋಲಿಸುವ ಹುಡುಗನನ್ನು ಈ ಸಣ್ಣ ಚೀಟಿ ಸೋಲಿಸುತೈತಿ. ಅದರ ಹೆಸರೂ ಚೆಂದ ಐತಿ ನೋಡಿ. ಗುಟುಕ. ಅಂದ್ರ ಗುಟುಕ್ ಗುಟುಕ್ ತಗಂಡು ಒಂದಿನ ಗೊಟಕ್ ಅಂತಾನ. ಗೂಟಕ್ಕೇ ಹೊಡೀತಾರೆ ಅವನ್ನ. ಹೆಸರೇ ಚೆಂದ ಐತಿ. ನಾವು ತಿಳಕೊಳ್ಳೋದಿಲ್ಲ ಅಷ್ಟೆ. ಗುಟುಕ ಒಳಗೆ ಹಾಕಿಕೊಂಡು ದೇಹ ಕೆಡಿಸ್ಕಂಡ. ಕುಂತುಕುಂತಲ್ಲಿ ಅದನ್ನು ಉಗುಳಿ ದೇಶಾನೂ ಕೆಡಿಸ್ದ. ವಾಹನ ಅದ್ರ ಭಾರೀ ಹೊಗೆ ಉಗುಳತೈತಿ ಅಂದ್ರ ಗುಜರಿಗೆ ಹಾಕಿ ಅಂತಾರೆ. ಇವ ಚೊಲೋ ವಾಹನ ಆಗಿದ್ದರೂ ಚೈನ್ ಸ್ಮೋಕ್ ಮಾಡಿ ಭಾರೀ ಹೊಗೆ ಉಗುಳ್ತಾನ. ಅದನ್ನೂ ಒಂದಿನ ಗುಜರಿಗೇ ಹಾಕತೈತಿ ಅದು.

ಒಂದು ಕುಟುಂಬ ಇತ್ತು. ತಂದೆ ತೀರಿಕೊಂಡಿದ್ದ. ತಾಯಿ ಆಸ್ಪತ್ರೆಯಲ್ಲಿದ್ದಳು. ಅವಳ ಆಸ್ಪತ್ರೆ ಖರ್ಚಿಗೆ ಹಣ ಬೇಕು ಅಂತ ಸಣ್ಣ ಹುಡುಗ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದ. ಒಂದು ದಿನ ಒಬ್ಬ ವ್ಯಕ್ತಿ ಆ ಹುಡುಗನನ್ನು ನೋಡಿ, 'ನಿಮ್ಮಂತಹ ಸಣ್ಣ ಮಕ್ಕಳು ಇಂತಹ ಸ್ಥಳಕ್ಕೆ ಬರಬಾರದು' ಎಂದ. ಅದಕ್ಕೆ ಹುಡುಗ 'ನಿಮ್ಮಂತಹ ದೊಡ್ಡ ಮನುಷ್ಯರು ಇಂತಹ ಸ್ಥಳಕ್ಕೆ ಬಾರದೇ ಇದ್ದಿದ್ದರೆ ನಮ್ಮಂತಹ ಚಿಕ್ಕ ಮಕ್ಕಳು ಬರುವ ಪ್ರಮೇಯವೇ ಇರುತ್ತಿರಲಿಲ್ಲ' ಎಂದ. ಇಂತಹ ಹವ್ಯಾಸಗಳನ್ನು ಬಿಡಬೇಕಲ್ಲ. ಇದನ್ನು ಬಿಡಲು ಏನು ಮಾಡಬೇಕು. ಈಗ ಕೋಣೆಯಲ್ಲಿ ಕತ್ತಲೆ ಇರತೈತಿ. ಕತ್ತಲೆ ಐತಿ ಅಂತ ಬೈದರೆ ಕತ್ತಲೆ ಹೋಗೋದಿಲ್ಲ. ಅದರ ಜೊತೆ ಗುದ್ದಾಡಿದರೆ ಕತ್ತಲೆ ಹೋಗೋದಿಲ್ಲ. ಕತ್ತಲೆ ಹೋಗಬೇಕು ಎಂದರೆ ದೀಪ ಹಚ್ಚಬೇಕು. ದೀಪ ಹಚ್ಚಿದರೆ ಕತ್ತಲೆ ತನ್ನಷ್ಟಕ್ಕೆ ತಾನೇ ಹೋಗತೈತಿ. ದುರಭ್ಯಾಸಗಳನ್ನು ಬಿಡಬೇಕು ಎಂದರೆ ಅದರ ಜೊತೆಗೆ ಗುದ್ದಾಡಿದರೆ ಆಗಲ್ಲ. ಒಳ್ಳೆಯ ಅಭ್ಯಾಸಗಳನ್ನು ಮೈಗೂಡಿಸಿಕೊಂಡರೆ ದುರಭ್ಯಾಸ ತನ್ನಿಂದ ತಾನೆ ಬಿಟ್ಟು ಹೋಗತೈತಿ. ಪೊಲೀಸ್ ನಾಯಿನೂ ಇರತೈತಿ. ಬೀದಿ ನಾಯಿನೂ ಇರತೈತಿ. ಯಾರಾದರೂ ಬಿಸ್ಕತ್ ಹಾಕಿದರೆ ಬೀದಿ ನಾಯಿ ತಕ್ಷಣ ಅದನ್ನು ತೆಗೆದುಕೊಳ್ಳುತ್ತದೆ. ಆದರೆ ಪೊಲೀಸ್ ನಾಯಿ ತಕ್ಷಣ ತೆಗೆದುಕೊಳ್ಳುವುದಿಲ್ಲ. ಪೊಲೀಸರಿಂದ ಆದೇಶ ಬಂದರೆ ಮಾತ್ರ ತಿನ್ನುತ್ತೈತಿ. ಯಾಕೆಂದರ ಅದು ತರಬೇತಿ ಪಡೆದ ನಾಯಿ. ಹಾಗೆಯೇ ನಮ್ಮ ಮನಸ್ಸೂ ತರಬೇತಿ ಪಡೆದ ನಾಯಿ ಆಗಬೇಕೇ ವಿನಾ ಬೀದಿ ನಾಯಿ ಆಗಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 21, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಸಪ್ತಮಿ ಗಂ. 12-40 ನಕ್ಷತ್ರ: ಚಿತ್ತಾ ಗಂ. 23-37 ಯೋಗ: ಧೃತಿ ಗಂ. 27-49 ಕರಣ: ಬವ ಗಂ. 12-40, ಮಕರ ಮಾಸದ 07 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ : 07-01 ಸೂರ್ಯಾಸ್ತ : 06-22
ಮುಸ್ಲಿಂ ದಿನಾಂಕ : 20 ರಜಬ್
ಅದೃಷ್ಟ ಸಂಖ್ಯೆ: 9, 10

ಮೇಷ: ಹೊಸ ಜನರ ಸಂಪರ್ಕವನ್ನು ಮಾಡಿಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಿರಿ. ಸಿವಿಲ್ ಎಂಜಿನಿಯರ್‌ಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಅವಕಾಶಗಳು ಸಿಗಲಿವೆ.

ವೃಷಭ: ಪರಿಶ್ರಮವಿಲ್ಲದೆ ಕೆಲಸ ದೊರೆತಿದ್ದಕ್ಕೆ ಸಂತಸವಿದ್ದು, ಹೊಸ ಸಂಸ್ಥೆಯಲ್ಲಿನ ಕೆಲಸಗಳು ಸುಲಭ ಎನಿಸುವುದು. ಕೃಷಿ ಆಧಾರಿತ ಕುಟುಂಬದಲ್ಲಿ ಮಂಗಳ ಕಾರ್ಯ ನಡೆಯುವ ಮುನ್ಸೂಚನೆ ಸಿಗಲಿದೆ.

ಮಿಥುನ: ಕೆಲಸದಲ್ಲಿ ಸ್ವಾತಂತ್ರ್ಯ ಸಿಗುವ ಕಾರಣದಿಂದ ಗುರಿ ಸಾಧನೆ ಹತ್ತಿರವಾಗಲಿದೆ. ಸರ್ಕಾರದ ಗುತ್ತಿಗೆ ಕೆಲಸ ದೊರೆತು ಬಹಳ ಸಂತೋಷವಾಗುವುದು. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭವಾಗುವುದು.

ಕರ್ಕಾಟಕ: ಪ್ರಯತ್ನಗಳಿಂದ ನೂತನ ಹಾಗೂ ಉತ್ತಮ ಉದ್ಯೋಗ ಗಳಿಸಿಕೊಳ್ಳಬಹುದು. ಕಚೇರಿ ಕೆಲಸಗಳಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯಲಿದೆ. ಸಿಟ್ಟಿನಿಂದ ಹೊರಬರಲು ಶನೈಶ್ಚರನ ಪ್ರಾರ್ಥನೆ ಮಾಡಿ.

ಸಿಂಹ: ಆಸ್ತಿಗೆ ಸಂಬಂಧಪಟ್ಟಂಥ ನಿರ್ಧಾರಗಳನ್ನು ಮನೆಯವರೊಂದಿಗೆ ಚರ್ಚಿಸಿ ಕೈಗೊಳ್ಳುವುದು ಉತ್ತಮ. ಕಬ್ಬಿಣದ ವ್ಯವಹಾರದ ನಿರ್ವಹಣೆಗೆ ಸಾಲ ಮಾಡಬೇಕಾಗುವುದು. ಚಟುವಟಿಕೆಯಿಂದಿರುತ್ತೀರಿ.

ಕನ್ಯಾ: ಗುರು-ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಅಥವಾ ಅವರಲ್ಲಿ ವಾದ-ವಿವಾದ ಬೆಳೆಸುವುದು ಸರಿಯಲ್ಲ. ಮಿತ್ರರೊಂದಿಗಿನ ಕಲಹ ಸಹನೆಯ ಪರೀಕ್ಷೆಯಾಗಿರುತ್ತದೆ. ಉಳಿತಾಯದ ಹಣ ಕೈ ಸೇರುವುದು.

ತುಲಾ: ಉಳಿತಾಯದ ಹಣದ ಹೊಂದಾಣಿಕೆಯಿಂದ ಸಾಲ ಮಾಡುವ ಪರಿಸ್ಥಿತಿ ದೂರಾಗುವುದು. ಅಭದ್ರತೆಯ ಭಾವ ಇಂದಿನಿಂದ ಬಿಟ್ಟು ಹೋಗಲಿದೆ. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ ಪಡೆಯುವಿರಿ.

ವೃಶ್ಚಿಕ: ಸಂತೋಷಕ್ಕೆ ಹತ್ತಿರದವರಿಂದ ತಡೆ ಉಂಟಾಗಬಹುದು. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಪರಿಶ್ರಮ ಅಗತ್ಯವಾಗುವುದು. ಭವಿಷ್ಯ ಯೋಜನೆಗಳಿಗೆ ಗಮನ ಕೊಡುವಿರಿ.

ಧನು: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕಪಡುವ ಅವಶ್ಯಕತೆ ಇಲ್ಲ. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ. ಕೈಬಿಟ್ಟಿರುವ ಯೋಜನೆಗಳನ್ನು ಮತ್ತೆ ಯೋಚಿಸಿ.

ಮಕರ: ಸುತ್ತಲಿನ ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. ಧೈರ್ಯಮಾಡಿ ಕಾರ್ಯೋನ್ಮುಖರಾದರೆ ಅಭಿವೃದ್ಧಿ ಹೊಂದುವಿರಿ. ಬಡಗಿ ಕೆಲಸ ಮಾಡುವವರಿಗೆ ಸುಯೋಗ.

ಕುಂಭ: ಜವಾಬ್ದಾರಿ ಸ್ವೀಕರಿಸುವ ಮೊದಲು ಅದನ್ನು ನಿಭಾಯಿಸುವ ಬಗ್ಗೆ ಯೋಚಿಸಿಕೊಳ್ಳುವುದು ಉತ್ತಮ. ಜಟಿಲ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವ್ಯವಹಾರದಲ್ಲಿ ಪೈಪೋಟಿ ಹೆಚ್ಚಾಗಲಿದೆ.

ಮೀನ: ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ವಾಸ್ತವದಿಂದ ದೂರಾಗಿ ಭ್ರಮೆಯ ಲೋಕದಲ್ಲಿ ಬದುಕುವ ಪ್ರಯತ್ನ ಮಾಡಬೇಡಿ. ಶೀತ ಸಂಬಂಧಿತ ರೋಗ ಕಾಡಬಹುದು.

ಪದಬಂಧ 5929

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಂಜು ಇದ್ದಾಗಿನ ಕಷ್ಟದ ಪರಿಸ್ಥಿತಿ (3)
3.ಒಮ್ಮೆ ಆ ಕಡೆ ಇನ್ನೊಮ್ಮೆ ಈ ಕಡೆ ಇರುವ ವ್ಯಕ್ತಿ (3)
5.ಜನಪ್ರಿಯನಾದವ ರಾಗಿ ಹಿಡಿದಿದ್ದಾನಲ್ಲಾ? (5)
6.ಅಂಗವಿಕಲನು ಪ್ರವೇಶಿಸಿರುವ ಗುಹೆ (2)
8.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ (2)
9.ಲಗ್ನವಾಗುತ್ತಿರುವವನಿಗೆ ದೊರೆತ ದೇವರ ಅನುಗ್ರಹ (2)
10.ಕನಸು ಕಾಣುತ್ತಾ ತೋರಿದ ಬಲ (2)
14.ಇದು ಅಂತರಂಗಸ್ಪರ್ಶಿಯಾದುದು (5)
15.ಸಾಗಿಸುವಿಕೆಗೊಂದು ಪರ್ಯಾಯ ಪದ(3)
16.ನಡುವೆ ಜೀ ಎನ್ನುತ್ತಿರುವ ಮಂತ್ರಿ! (3)

ಮೇಲಿಂದ ಕೆಳಕ್ಕೆ
1.ಯೋಗವಿದ್ದಾಗಲೇ ಈ ಹಂಚಿಕೆ! (4)
2.ಮಜವಾಗಿ ಕಾಣುತ್ತಿರುವ ಹಂತ (3)
3.ಅಭಿಪ್ರಾಯವನ್ನು ಹೀಗೆನ್ನಿ (3)
4.ದಿನದ ಕೆಲಸ (4)
7.ಹೆಂಡತಿಯನ್ನು ಕಳೆದುಕೊಂಡವನು (3)
8.ಯಾವುದರಿಂದ ಗುಣಿಸಬೇಕೋ ಆ ಸಂಖ್ಯೆ (3)
9.ಕಾಡಿನಲ್ಲಿ ಗೋಚರವಾಗಿರುವ ಬೇಡ (4)
11.ಕೋಮಲವಾದ ಶರೀರವುಳ್ಳವನು (4)
12.ಮನ್ಮಥನಿಂದ ಮೂಡಿರುವ ಆಸೆ (3)
13.ಈಟ ಬಲು ಪೆದ್ದ (3)



5928ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬೇಹಾರ 3.ಅಜರಾಮರ 5.ವಾದನ 6.ಸಖ 8.ವಾಕ 9.ರಿಯಾಯಿತಿ 11.ಹೇಷಾರವ 13.ಯಮ 14.ಕಸ 16.ಪಲ್ಲಂಗ 17.ಅವಲಕ್ಕಿ 18.ವಿಜನ

ಮೇಲಿಂದ ಕೆಳಕ್ಕೆ:
1.ಬೇಜವಾಬ್ದಾರಿ 2.ರದನ 3.ಅಪಭ್ರಂಶ 4.ರಾಯಸ 7.ಖಚರ 8.ವಾತಿ 10.ಯಾಚಕ 11.ಹೇಮ 12.ವರ್ಷಾಗಮನ 13.ಯವನಿಕೆ 15.ಸಲಿಲ 16.ಪದವಿ

ಸುಡೊಕು 6314

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6313 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಷೇರುಪೇಟೆ ವಹಿವಾಟು 454



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,203
ಇಂದಿನ ಅಂತ್ಯ	23,344
▲	141
ದಿನದ ಗರಿಷ್ಠ	23,391

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಎನ್.ಆರ್.ಪುರ ರಬ್ಬರ್ (ಪ್ರತಿ ಕೆಜಿಗೆ)

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಲಾಟ್	₹177

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹455-655
ದ್ವಿತಳಿ (ಕೆ.ಜಿ)	₹135-785

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹13650-13650
ದಾವಣಗೆರೆ	₹11000-11000
ತಿಪಟೂರು	₹13700-14500
ತುರುವೇಕೆರೆ	₹14000-14500

ಸಂಕ್ಷಿಪ್ತ ಸುದ್ದಿ

ಐಒಬಿ ಲಾಭ ಶೇ 21ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ (ಐಒಬಿ) ನಿವ್ವಳ ಲಾಭದಲ್ಲಿ ಶೇ 21ರಷ್ಟು ಏರಿಕೆಯಾಗಿದೆ.

2023–24ರ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹723 ಕೋಟಿ ನಿವ್ವಳ ಲಾಭ ಗಳಿಸಿತ್ತು. ಈ ಬಾರಿ ₹874 ಕೋಟಿಯಷ್ಟಾಗಿದೆ. ವಸೂಲಾಗದ ಸಾಲದ ಪ್ರಮಾಣದಲ್ಲಿ ಇಳಿಕೆಯಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಬ್ಯಾಂಕ್ ಸೋಮವಾರ ಷೇರುಪೇಟೆಗೆ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹7,437 ಕೋಟಿ ವರಮಾನ ಸಂಗ್ರಹವಾಗಿತ್ತು. ಅದು ಈ ಬಾರಿ ₹8,409 ಕೋಟಿಗೆ ಏರಿಕೆಯಾಗಿದೆ. ಕಾರ್ಯಾಚರಣೆ ಲಾಭವು ₹2,266 ಕೋಟಿಯಾಗಿದೆ. ಬಡ್ಡಿ ವರಮಾನವು ₹7,112 ಕೋಟಿಗೆ ತಲುಪಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 3.90ಯಿಂದ ಶೇ 2.55ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.62 ರಿಂದ ಶೇ 0.42ಕ್ಕೆ ಕಡಿಮೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಪೇಟಿಎಂಗೆ ₹208 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ 2024–25ರ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹208 ಕೋಟಿ ನಷ್ಟ ದಾಖಲಿಸಿದೆ.

2023–24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹221 ಕೋಟಿ ನಷ್ಟ ಕಂಡಿತ್ತು. ವರಮಾನದಲ್ಲಿನ ಇಳಿಕೆಯಿಂದ ನಷ್ಟ ಕಂಡಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

ವರಮಾನದಲ್ಲಿ ಶೇ 35ರಷ್ಟು ಇಳಿಕೆಯಾಗಿದ್ದು, ₹1,827 ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ವರಮಾನ ₹2,850 ಕೋಟಿಯಷ್ಟಿತ್ತು.

ಕಳೆದ ತ್ರೈಮಾಸಿಕಕ್ಕೆ ಹೋಲಿಸಿದರೆ ಹೊಸ ವಹಿವಾಟಿನಲ್ಲಿ ಶೇ 10ರಷ್ಟು ಏರಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಖರೀದಿಗೆ ರಾಜ್ಯ ಸರ್ಕಾರದಿಂದ ₹140 ಕೋಟಿ: ಸಚಿವ ಶಿವಾನಂದ ಪಾಟೀಲ

ತೊಗರಿ: ಹೆಚ್ಚುವರಿ ₹450 ಬೆಂಬಲ ಬೆಲೆ

ಪ್ರಜಾವಾಣಿ ವಾರ್ತೆ



> **ನಾಫೆಡ್ ಖರೀದಿ ಏಜೆನ್ಸಿಯಾಗಿದ್ದು, ದಾಖಲೆಗಳನ್ನು ಸಕಾಲಕ್ಕೆ ಒದಗಿಸದಿದ್ದಕ್ಕೆ ಖರೀದಿ ವಿಳಂಬ ಆಗಿದೆ. ರಾಜ್ಯದಲ್ಲಿ 400ಕ್ಕೂ ಹೆಚ್ಚು ತೊಗರಿ ಖರೀದಿ ಕೇಂದ್ರ ಆರಂಭಿಸಲಾಗಿದೆ**
> **ಶಿವಾನಂದ ಪಾಟೀಲ,** ಕೃಷಿ ಮಾರುಕಟ್ಟೆ ಸಚಿವ

ವಿಜಯಪುರ: ‘ಬೆಂಬಲ ಬೆಲೆಯಡಿ ತೊಗರಿ ಖರೀದಿಗೆ ರಾಜ್ಯ ಸರ್ಕಾರ ಕ್ವಿಂಟಲ್‌ಗೆ ಹೆಚ್ಚುವರಿ ₹450 ನೀಡಲು ನಿರ್ಧರಿಸಿದೆ. ಇದಕ್ಕಾಗಿ ₹140 ಕೋಟಿ ಒದಗಿಸಲಾಗುವುದು’ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರೊಂದಿಗೆ ನಗರದಲ್ಲಿ ಸೋಮವಾರ ಚರ್ಚಿಸಿದ ಬಳಿಕ ಈ ವಿಷಯ ತಿಳಿಸಿದ ಅವರು, ‘ಕೇಂದ್ರ ಸರ್ಕಾರ ತೊಗರಿಗೆ ನೀಡುತ್ತಿರುವ ಬೆಂಬಲ ಬೆಲೆ ₹7,550ಕ್ಕೆ ರಾಜ್ಯ ಸರ್ಕಾರ ₹450 ಸೇರಿಸಿ ತೊಗರಿ ಬೆಳೆಗಾರರಿಗೆ ಪ್ರತಿ ಕ್ವಿಂಟಲ್‌ಗೆ ₹8 ಸಾವಿರ ನೀಡಲಾಗುವುದು’ ಎಂದರು.

‘ಇದೇ ಮೊದಲ ಬಾರಿಗೆ ತೊಗರಿಯನ್ನು ₹8 ಸಾವಿರ ಧಾರಣೆಗೆ ಖರೀದಿಸಲಾಗುತ್ತಿದೆ. ಈವರೆಗೆ ₹5,800 ಧಾರಣೆಗೆ ಖರೀದಿಸಲಾಗುತ್ತಿತ್ತು. ಬೀದರ್‌ನಿಂದ ಚಿತ್ರದುರ್ಗ ಜಿಲ್ಲೆಯವರೆಗೆ ತೊಗರಿ ಬೆಳೆಯಲಾಗುತ್ತಿದ್ದು, ರೈತರು ಬೆಂಬಲ ಬೆಲೆ ಹೆಚ್ಚಳ ಮಾಡಲು ರೈತರು ಬೇಡಿಕೆ ಇಟ್ಟಿದ್ದರು’ ಎಂದರು.

ಆಂಧ್ರದ ಜೋಳಕ್ಕೆ ತಡೆ: ಆಂಧ್ರ ಪ್ರದೇಶದ ಹೈಬ್ರಿಡ್ ಜೋಳವನ್ನು ರಾಜ್ಯದ ಬೆಂಬಲ ಬೆಲೆ ಖರೀದಿ ಕೇಂದ್ರಗಳಲ್ಲಿ ಮಾರುತ್ತಿರುವುದು ಗಮನಕ್ಕೆ ಬಂದಿದ್ದು, ಆಂಧ್ರ ಪ್ರದೇಶದ ಜೋಳಕ್ಕೆ ಕಡಿವಾಣ ಹಾಕಲಾಗುವುದು.

‘ಹೈಬ್ರಿಡ್ ಜೋಳಕ್ಕೆ ₹3,370 ಹಾಗೂ ಮಾಲದಂಡಿ ಜೋಳಕ್ಕೆ ₹3,400 ಬೆಂಬಲ ಬೆಲೆ ಘೋಷಿಸಲಾಗಿದ್ದು, ಒಟ್ಟು 5 ಲಕ್ಷ ಕ್ವಿಂಟಲ್ ಖರೀದಿಸಲಾಗುವುದು. ಈವರೆಗೆ ಕೆಲವು ಜಿಲ್ಲೆಗಳ ರೈತರು ಮಾತ್ರ ಖರೀದಿ ಕೇಂದ್ರಗಳಲ್ಲಿ ಮಾರುತ್ತಿದ್ದರು. ಈ ಬಾರಿ ಜೋಳ ಬೆಳೆಯುವ ಎಲ್ಲ ಜಿಲ್ಲೆಗಳಿಗೂ ಖರೀದಿ ಪ್ರಮಾಣವನ್ನು ಹಂಚಿಕೆ ಮಾಡಲಾಗುವುದು’ ಎಂದರು.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ವಿಧ	ಧಾರಣೆ
ಬಂಟ್ವಾಳ	ಕೋಕ	20000-27500
	ಹೊಸತು	30000-36000
	ಹಳತು	45000-49000
ಕುಮಟ	ಚಾಲಿ	33569-37499
	ಚಿಪ್ಪು	16509-25509
	ಕೋಕ	6869-22019
	ಫ್ಯಾಕ್ಟರಿ	6099-23269
	ಹಳೆಚಾಲಿ	36569-38799
	ಹೊಸಚಾಲಿ	26089-31200
ಪುತ್ತೂರು	ಕೋಕ	20500-27500
	ಹೊಸತು	25000-36000
	ಹಳತು	32000-49000
ಸಾಗರ	ಬಿಳಿಗೋಟು	7299-25849
	ಚಾಲಿ	21899-34209
	ಕೋಕ	8299-20279
	ಕೆಂಪುಗೋಟು	16899-31399
	ರಾಶಿ	28099-51599
	ಸಿಪ್ಪೆಗೋಟು	8080-17219
ಶಿವಮೊಗ್ಗ	ಬೆಟ್ಟೆ	43009-56800
	ಗೊರಬಲು	17509-31951
	ರಾಶಿ	30009-51509
	ಸರಕು	53019-84016
ಸಿದ್ದಾಪುರ	ಬಿಳಿಗೋಟು	24099-27409
	ಚಾಲಿ	32299-38129
	ಕೋಕ	14489-16399
	ಹೊಸಚಾಲಿ	23699-30869
	ಕೆಂಪುಗೋಟು	20319-26809
	ರಾಶಿ	43099-49599
	ತಟ್ಟಿಬೆಟ್ಟೆ	28409-41089
ಶಿರಸಿ	ಬೆಟ್ಟೆ	31098-38909
	ಬಿಳಿಗೋಟು	20999-29770
	ಚಾಲಿ	35618-39211
	ಕೆಂಪುಗೋಟು	11809-21699
	ರಾಶಿ	42109-46808
ಯಲ್ಲಾಪುರ	ಅಪಿ	58199-68699
	ಬಿಳಿಗೋಟು	11899-27599
	ಚಾಲಿ	28369-39099
	ಕೋಕ	4600-16899
	ಕೆಂಪುಗೋಟು	12899-24299
	ರಾಶಿ	38009-57399
	ತಟ್ಟಿಬೆಟ್ಟೆ	27710-37309

ಕಬ್ಬು ಹಾನಿಗೆ ಪರಿಹಾರ ನೀಡಲು ನಿಧಿ ಸ್ಥಾಪನೆ

‘ಅಗ್ನಿ ದುರಂತದಲ್ಲಿ ಸಂಭವಿಸುವ ಕಬ್ಬಿನ ಹಾನಿಗೆ ಪರಿಹಾರ ನೀಡಲು ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯಿಂದ ನಿಧಿ ಸ್ಥಾಪಿಸಲಿದ್ದು, ಈ ವರ್ಷದಿಂದ ₹50 ಲಕ್ಷ ತೆಗೆದಿರಿಸಲಾಗುವುದು’ ಎಂದು ಸಕ್ಕರೆ ಮತ್ತು ಕಬ್ಬು ಅಭಿವೃದ್ಧಿ ಸಚಿವ ಶಿವಾನಂದ ಪಾಟೀಲ ಘೋಷಣೆ ಮಾಡಿದರು.

‘ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೀಡುವ ಪರಿಹಾರ ಅತ್ಯಲ್ಪ ಎಂಬ ಕಾರಣಕ್ಕೆ ನಿಜಲಿಂಗಪ್ಪ ಸಂಸ್ಥೆಯಿಂದಲೂ ಪರಿಹಾರ ನೀಡುವ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಹೇಳಿದರು.

‘ಆರಂಭದಲ್ಲಿ ಗರಿಷ್ಠ 5 ಎಕರೆ ಮಿತಿಯಲ್ಲಿ ಪರಿಹಾರ ನೀಡಲಿದ್ದು, ನಂತರ ಇದನ್ನು ವಿಸ್ತರಿಸುವ ಉದ್ದೇಶವಿದೆ. ವಿದ್ಯುತ್ ಶಾರ್ಟ್ ಸರ್ಕಿಟ್ ಮತ್ತಿತರ ಕಾರಣಗಳಿಂದ ಕಬ್ಬು ಹಾನಿಗೀಡಾದರೂ ಸಕ್ಕರೆ ಕಾರ್ಖಾನೆಗಳು ಈ ಕಬ್ಬನ್ನು ನುರಿಸಲಿವೆ. ಆದರೂ ಸರ್ಕಾರ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಪರಿಹಾರ ನೀಡುವ ನಿರ್ಧಾರ ಕೈಗೊಂಡಿದೆ’ ಎಂದು ತಿಳಿಸಿದರು.

ಬಹುಮಾನದ ಮೊತ್ತ ಹೆಚ್ಚಳ: ತೂಕದಲ್ಲಿ ವಂಚನೆ ಮಾಡುವ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿ ವಿರುದ್ಧ ಸೂಕ್ತ ದಾಖಲೆಗಳೊಂದಿಗೆ ದೂರು ನೀಡುವ ರೈತರಿಗೆ ₹1 ಲಕ್ಷ ನಗದು ಬಹುಮಾನ ನೀಡಲಾಗುವುದು ಎಂದು ಬೆಳಗಾವಿ ಅಧಿವೇಶನದ ವೇಳೆ ಘೋಷಿಸಲಾಗಿತ್ತು. ಈ ಬಹುಮಾನದ ಮೊತ್ತವನ್ನು ₹2.5 ಲಕ್ಷಕ್ಕೆ ಹೆಚ್ಚಿಸಲಾಗಿದ್ದು, ದೂರು ನೀಡುವ ಕಬ್ಬು ಬೆಳೆಗಾರರಿಗೆ ಯಾವುದೇ ಸಮಸ್ಯೆಯಾಗದಂತೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಲಿದೆ. ಅವರ ಕಬ್ಬನ್ನು ನುರಿಸುವ ಹೊಣೆಯನ್ನೂ ಸರ್ಕಾರ ಹೊರಲಿದೆ ಎಂದು ಭರವಸೆ ನೀಡಿದರು.

10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಅನುಮತಿ

ಪ್ರಲ್ಹಾದ ಜೋಶಿ

ನವದೆಹಲಿ (ಪಿಟಿಐ): ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್–ಸೆಪ್ಟೆಂಬರ್) 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರ ಸೋಮವಾರ ಅನುಮತಿ ನೀಡಿದೆ.

ದೇಶೀಯ ಬೆಲೆಗಳನ್ನು ಸ್ಥಿರಗೊಳಿಸಲು ಮತ್ತು ಉದ್ಯಮಕ್ಕೆ ನೆರವು ನೀಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

‘5 ಕೋಟಿ ರೈತ ಕುಟುಂಬಗಳು ಮತ್ತು 5 ಲಕ್ಷ ಕಾರ್ಮಿಕರಿಗೆ ಇದರ ಲಾಭ ದೊರೆಯಲಿದೆ’ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಸಾಮಾಜಿಕ ಜಾಲತಾಣ ‘ಎಕ್ಸ್‌’ನಲ್ಲಿ ತಿಳಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳಿಗೆ ನಗದು ಹರಿವನ್ನು ಹೆಚ್ಚಿಸಲಿದೆ. ಇದರಿಂದ ನಿಗದಿತ ಸಮಯಕ್ಕೆ ಕಬ್ಬಿನ ಬಾಕಿ ಪಾವತಿಸಬಹುದು. ಜೊತೆಗೆ ಲಭ್ಯತೆಯನ್ನು ಹೆಚ್ಚಿಸಲಿದ್ದು, ದರ ಏರಿಕೆಯನ್ನು ನಿಯಂತ್ರಿಸಲಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ವರ್ಷದ ಸೆಪ್ಟೆಂಬರ್ 30ರ ವರೆಗೆ ಮಿಲ್‌ಗಳು ನೇರವಾಗಿ ಅಥವಾ ವ್ಯಾಪಾರಿಗಳ ಮೂಲಕ ಸಕ್ಕರೆ ರಫ್ತು ಮಾಡಬಹುದಾಗಿದೆ ಎಂದು ಹೇಳಿದ್ದಾರೆ.

ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘವು (ಐಎಸ್‌ಬಿಎಂಎ) ಸರ್ಕಾರದ ಈ ಆದೇಶವನ್ನು ಸ್ವಾಗತಿಸಿದೆ.

ಮೂಲಸೌಕರ್ಯ ವಲಯಕ್ಕೆ ವಾರ್ಷಿಕ ₹15 ಲಕ್ಷ ಕೋಟಿ ಅಗತ್ಯ: ಮಾಂಡವೀಯ

ನವದೆಹಲಿ (ಪಿಟಿಐ): ‘ವಿಕಸಿತ ಭಾರತದ ಗುರಿ ಸಾಧನೆ ಮತ್ತು ಎಲ್ಲರಿಗೂ ಸಾಮಾಜಿಕ ಭದ್ರತೆ ಕಲ್ಪಿಸಲು ಸರ್ಕಾರ ಪ್ರತಿ ವರ್ಷ ₹15 ಲಕ್ಷ ಕೋಟಿಯನ್ನು ಮೂಲಸೌಕರ್ಯ ವಲಯ ಅಭಿವೃದ್ಧಿಗೆ ವ್ಯಯಿಸಬೇಕಿದೆ’ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

2047ರ ವೇಳೆಗೆ ಸರ್ಕಾರವು ‘ವಿಕಸಿತ ಭಾರತ’ದ ಗುರಿ ಹೊಂದಿದೆ. ಆ ವೇಳೆಗೆ ದೇಶಕ್ಕೆ ಸ್ವಾತಂತ್ರ್ಯ ದೊರೆತು 100 ವರ್ಷ ಆಗಲಿದೆ ಎಂದರು.

2012ರಲ್ಲಿ ಮೂಲಸೌಕರ್ಯ ವಲಯದ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹1.2 ಲಕ್ಷ ಕೋಟಿ ಹೂಡಿಕೆ ಮಾಡಲಾಗಿತ್ತು. 2014ರಲ್ಲಿ ₹2.4 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಆದರೆ, 2024ರ ವೇಳೆಗೆ ₹11.5 ಲಕ್ಷ ಕೋಟಿಗೆ ಮುಟ್ಟಿದೆ. ಇದು ₹15 ಲಕ್ಷ ಕೋಟಿಗೆ ಹೆಚ್ಚಳವಾಗಬೇಕಿದೆ. ಮುಂದಿನ 25 ವರ್ಷ ಸರ್ಕಾರವು ₹15 ಲಕ್ಷ ಕೋಟಿಯನ್ನು ಮೂಲಸೌಕರ್ಯ ವಲಯದಲ್ಲಿ ಪ್ರತಿ ವರ್ಷ ಹೂಡಿಕೆ ಮಾಡಿದರೆ ಮಾತ್ರ 2047ರ ವೇಳೆಗೆ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲಿದೆ ಎಂದು ಹೇಳಿದರು.

ದೇಶದ ಜನರಲ್ಲಿ ಸರಕು ಖರೀದಿ ಸಾಮರ್ಥ್ಯ ಹೆಚ್ಚಳವಾಗಿದೆ. ಜೊತೆಗೆ ಹೊಸ ವಲಯದಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಇದರಿಂದ ದೇಶದ ಆರ್ಥಿಕತೆ ಕ್ಷಿಪ್ರವಾಗಿ ವಿಸ್ತರಣೆ ಆಗುತ್ತಿದೆ ಎಂದು ಸೋಮವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದರು.

2014ರಲ್ಲಿ ಶೇ 24ರಷ್ಟು ಕಾರ್ಮಿಕರಿಗೆ ಮಾತ್ರ ಸಾಮಾಜಿಕ ಭದ್ರತೆ ಸೌಲಭ್ಯ ಸಿಗುತ್ತಿತ್ತು. ಅದು ಈಗ ಶೇ 68ಕ್ಕೆ ಏರಿಕೆಯಾಗಿದೆ ಎಂದರು.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 454 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಹಣಕಾಸು ಮತ್ತು ಇಂಧನ ವಲಯದ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 454 ಅಂಶ ಏರಿಕೆಯಾಗಿ, 77,073ಕ್ಕೆ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 141 ಅಂಶ ಹೆಚ್ಚಳವಾಗಿ 23,344ಕ್ಕೆ ವಹಿವಾಟು ಕೊನೆಗೊಂಡಿತು.

ಕೋಟಕ್ ಮಹೀಂದ್ರ ಬ್ಯಾಂಕ್ ಡಿಸೆಂಬರ್ ತ್ರೈಮಾಸಿಕದಲ್ಲಿ ₹4,701 ಕೋಟಿ ನಿವ್ವಳ ಲಾಭ ಗಳಿಸಿದೆ. ಇದರಿಂದ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 9ರಷ್ಟು ಏರಿಕೆ ಕಂಡಿದೆ. ಜೊತೆಗೆ

ಏಷ್ಯನ್ ಮಾರುಕಟ್ಟೆಯಲ್ಲಿ ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿವೆ. ಇದರಿಂದ ಷೇರು ಸೂಚ್ಯಂಕಗಳು ಏರಿಕೆಯಾಗಿವೆ.

ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಎನ್‌ಟಿಪಿಸಿ, ಎಸ್‌ಬಿಐ, ಪವರ್ ಗ್ರಿಡ್, ಎಚ್‌ಡಿಎಫ್‌ಸಿ ಬ್ಯಾಂಕ್, ಟೆಕ್ ಮಹೀಂದ್ರ ಮತ್ತು ಏಷ್ಯನ್ ಪೇಂಟ್ಸ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಜೊಮಾಟೊ, ಅದಾನಿ ಪೋರ್ಟ್ಸ್, ಟಿಸಿಎಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ ಸುಜುಕಿ ಮತ್ತು ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರ ಪ್ರತಿ ಬ್ಯಾರೆಲ್‌ಗೆ ಶೇ 0.36ರಷ್ಟು ಇಳಿಕೆಯಾಗಿ, 80.50 ಡಾಲರ್ (₹6,966) ಆಗಿದೆ.

ರೂಪಾಯಿ ಮೌಲ್ಯ ಏರಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 15 ಪೈಸೆ ಏರಿಕೆ ಕಂಡಿದೆ. ಪ್ರತೀ ಡಾಲರ್ ಮೌಲ್ಯವು ₹86.45 ಆಗಿದೆ.

ಎಂಆರ್‌ಪಿಎಲ್‌ಗೆ ₹304 ಕೋಟಿ ಲಾಭ

ಮಂಗಳೂರು: ಸಾರ್ವಜನಿಕ ಕ್ಷೇತ್ರದ ತೈಲ ಸಂಸ್ಕರಣಾ ಸಂಸ್ಥೆಯಾದ ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) 2024–25ನೇ ಸಾಲಿನ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹25,601 ಕೋಟಿ ವರಮಾನ ಹಾಗೂ ₹304 ಕೋಟಿ ನಿವ್ವಳ ಲಾಭ ದಾಖಲಿಸಿದೆ.

ಸೋಮವಾರ ನಡೆದ ಸಂಸ್ಥೆಯ 267ನೇ ಸಭೆಯಲ್ಲಿ, ಡಿಸೆಂಬರ್ 31ಕ್ಕೆ ಕೊನೆಗೊಂಡ 2024–25ನೇ ಸಾಲಿನ ಮೂರನೇ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳ ಆರ್ಥಿಕ ಫಲಿತಾಂಶ ವರದಿಗೆ ಅನುಮೋದನೆ ನೀಡಲಾಯಿತು.

ಮೂರನೇ ತ್ರೈಮಾಸಿಕದಲ್ಲಿ ಸಂಸ್ಥೆ ಒಟ್ಟು 4,514.5 ಟನ್ ಹಾಗೂ ನಿವ್ವಳ 4,601 ಟನ್ ಕಚ್ಚಾ ತೈಲ ಸಂಸ್ಕರಣೆ ನಡೆಸಿದೆ. 2023–24ನೇ ಸಾಲಿನ ಇದೇ ಅವಧಿಯಲ್ಲಿ ಇದು ಕ್ರಮವಾಗಿ 4,459.1 ಟನ್ ಹಾಗೂ 4,479.7 ಟನ್‌ನಷ್ಟು ಇತ್ತು. ಸಂಸ್ಥೆ ಇದೇ ಮೊದಲ ಬಾರಿಗೆ, ಕಳೆದ ನವೆಂಬರ್ ತಿಂಗಳಲ್ಲಿ ವೆನಿಜುವೆಲಾದಿಂದ ಆಮದು ಮಾಡಿದ ‘ಮೆರಿ-16’ ಕಚ್ಚಾ ತೈಲ ಸಂಸ್ಕರಣೆ ಮಾಡಿದೆ.

2024– 25ನೇ ಸಾಲಿನ 9 ತಿಂಗಳಲ್ಲಿ ಸಂಸ್ಥೆ ಒಟ್ಟಾರೆ ₹81,676 ಕೋಟಿ ವರಮಾನ ಹಾಗೂ ₹313 ಕೋಟಿ ನಷ್ಟ ದಾಖಲಿಸಿದೆ. 2023–24ನೇ ಸಾಲಿನ ವರ್ಷದ ಮೊದಲ 9 ತಿಂಗಳಲ್ಲಿ ಸಂಸ್ಥೆ ₹76,033 ಕೋಟಿ ವರಮಾನ ಹಾಗೂ ₹2,459 ಕೋಟಿ ನಿವ್ವಳ ಲಾಭ ದಾಖಲಿಸಿತ್ತು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

₹14 ಕೋಟಿಯ ಚಿನ್ನಾಭರಣ ದರೋಡೆ ಪ್ರಕರಣ: ಮೂವರ ಬಂಧನ

ಒಂದನೇ ಪುಟದಿಂದ...

‘ಜ.17ರಂದು ಮಧ್ಯಾಹ್ನ 1ರಿಂದ 1.20ರ ನಡುವೆ ದರೋಡೆಕೋರರ ತಂಡವೊಂದು ಕೋಟೆಕಾರು ಸಹಕಾರಿ ಸಂಘದ ಕೆ.ಸಿ.ರೋಡ್ ಜಂಕ್ಷನ್ ಶಾಖೆಗೆ ನುಗ್ಗಿ, ಸಿಬ್ಬಂದಿಗೆ ಬೆದರಿಕೆ ಹಾಕಿ, ಸಂಘದ ಲಾಕರ್‌ನಲ್ಲಿದ್ದ ಅಂದಾಜು ₹14 ಕೋಟಿ ಮೌಲ್ಯದ ಚಿನ್ನಾಭರಣ, ₹11ಲಕ್ಷ ನಗದು ಕದ್ದೊಯ್ದಿತ್ತು. ಸಂಘದ ಸಿ.ಸಿ.ಟಿ.ವಿ ಕ್ಯಾಮೆರಾ ದುರಸ್ತಿ ನಡೆಯುತ್ತಿದ್ದ ಕಾರಣ ಸ್ಥಳೀಯವಾಗಿ ಯಾವುದೇ ಸಾಕ್ಷ್ಯ ದೊರೆತಿರಲಿಲ್ಲ’ ಎಂದು ಹೇಳಿದರು.

‘ಆರೋಪಿಗಳ ಪತ್ತೆಗೆ ಹಲವಾರು ತಂಡಗಳನ್ನು ರಚಿಸಲಾಗಿತ್ತು. ಒಂದು ತಂಡ ಮುಂಬೈ ಹಾಗೂ ಇನ್ನೊಂದು ತಂಡ ತಮಿಳುನಾಡಿಗೆ ತೆರಳಿತ್ತು. ಇಲಾಖೆಯ ಗುಪ್ತಚರ ವಿಭಾಗ ಹಾಗೂ ತಂತ್ರಜ್ಞಾನದ ನೆರವಿನಲ್ಲಿ ಅಪರಾಧದ ಜಾಡು ಹಿಡಿದು, ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದು, ಹೆಚ್ಚಿನ ತನಿಖೆ ನಡೆಸಲಾಗುವುದು’ ಎಂದು ವಿವರಿಸಿದರು.

‘ಮುರುಗುಂಡಿ ಥೇವರ್, ಈ ಪ್ರಕರಣದ ಪ್ರಮುಖ ಸಂಚುಕೋರ ಆಗಿದ್ದು, ಮುಂಬೈ ಮೂಲದ ಗ್ಯಾಂಗ್ ಇದಾಗಿದೆ. ಅಪರಾಧಕ್ಕೆ ಮಹಾರಾಷ್ಟ್ರ ನೋಂದಣಿಯ ಕಾರನ್ನು ಬಳಸಲಾಗಿದೆ. ಆರೋಪಿ ಮುರುಗಂಡಿ, ಕಾರನ್ನು ಮುಂಬೈನಿಂದ ಮಂಗಳೂರಿಗೆ ಚಲಾಯಿಸಿಕೊಂಡು ಬಂದು ಕೇರಳದ ಮೂಲಕ ತಮಿಳುನಾಡಿಗೆ ವಾಪಸಾಗಿದ್ದ. ನಿಖರವಾದ ಸ್ಥಳ, ಸಮಯ ಆಧರಿಸಿ, ದರೋಡೆಕೋರರು ಕೃತ್ಯ ನಡೆಸಿದ್ದನ್ನು ನೋಡಿದರೆ, ಸ್ಥಳೀಯರು ಪ್ರಕರಣದಲ್ಲಿ ಶಾಮೀಲಾಗಿರುವ ಶಂಕೆಯಿದೆ. ವಶಪಡಿಸಿಕೊಂಡ ವಸ್ತುಗಳ ನಿಖರ ಮೌಲ್ಯದ ಮೌಲ್ಯಮಾಪನ ನಡೆದಿದೆ’ ಎಂದು ಅವರು ಮಾಹಿತಿ ನೀಡಿದರು.

ರಾಜ್ಯ ಗುಪ್ತಚರ ವಿಭಾಗದ ಎಡಿಜಿಪಿ ಹೇಮಂತ್ ನಿಂಬಾಳ್ಕರ್ ಮತ್ತು ಡಿಐಜಿ ಸುಧೀರ್ ಕುಮಾರ್ ರೆಡ್ಡಿ ತನಿಖೆಗೆ ಮಾರ್ಗದರ್ಶನ ನೀಡಿದರು ಎಂದು ಅನುಪಮ್ ಅಗರವಾಲ್ ತಿಳಿಸಿದರು.

23ರಿಂದ ‘ಸಾವಯವ–ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಇದೇ 23ರಿಂದ 25ರವರೆಗೆ ಕೃಷಿ ಇಲಾಖೆಯಿಂದ ‘ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳ (ಐಟಿಎಫ್)–2025’ ಅನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೇಳದ ಕುರಿತು ವಿವರ ನೀಡಿದ ಅವರು, ‘23ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಳವನ್ನು ಉದ್ಘಾಟಿಸಲಿದ್ದಾರೆ. ಮೂರು ದಿನಗಳು ನಡೆಯುವ ಮೇಳದಲ್ಲಿ 300ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುವುದು. 30ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ತಜ್ಞರು ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳ ಕುರಿತು ಮಾಹಿತಿ ಹಂಚಿಕೊಳ್ಳಲಿದ್ದಾರೆ’ ಎಂದರು.

‘ಸಾವಯವ ಕೃಷಿಕರು, ರೈತ ಗುಂಪುಗಳು, ದೇಶಿಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು ಸಾವಯವ ಮತ್ತು ಸಿರಿಧಾನ್ಯ ವಲಯದ ಕೇಂದ್ರ ಮತ್ತು ರಾಜ್ಯ ಸಂಸ್ಥೆಗಳನ್ನು ಒಗ್ಗೂಡಿಸುವುದು ಮೇಳದ ಉದ್ದೇಶ. ಜೊತೆಗೆ ಹೊಸ ಹೊಸ ಅವಕಾಶಗಳನ್ನು ಅನ್ವೇಷಿಸುವ ಮತ್ತು ಪರಿಣಾಮಕಾರಿಯಾಗಿ ಮಾರುಕಟ್ಟೆ ಸಂಪರ್ಕಗಳನ್ನು ಕಲ್ಪಿಸಲು ಈ ಮೇಳ ಹೊಸ ವೇದಿಕೆಯಾಗಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಾವಯವ ಆಹಾರ ಮತ್ತು ಸಿರಿಧಾನ್ಯಗಳ ಪ್ರೋತ್ಸಾಹಿಸುವ ಸಲುವಾಗಿ ₹20 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ ‘ಸಾವಯವ ಮತ್ತು ಸಿರಿಧಾನ್ಯ ಹಬ್’ ನಿರ್ಮಿಸಲು ಉದ್ದೇಶಿಸಲಾಗಿದೆ. ಮೇಳದ ಆರಂಭದ ದಿನದಂದು ಮುಖ್ಯಮಂತ್ರಿಯವರು, ಇದಕ್ಕೆ ಶಂಕುಸ್ಥಾಪನೆ ನೆರವೇರಿಸುವರು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿ ಜೆ.ರವಿಶಂಕರ್, ಕೃಷಿ ಆಯುಕ್ತ ವೈ.ಎಸ್.ಪಾಟೀಲ, ಕೃಷಿ ಇಲಾಖೆ ನಿರ್ದೇಶಕ ಜಿ.ಟಿ.ಪುತ್ರ ಉಪಸ್ಥಿತರಿದ್ದರು.

ರಸ್ತೆ ಸುರಕ್ಷತೆ: ವರದಿ ಸಲ್ಲಿಸಲು 23 ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಮೋಟಾರು ವಾಹನಗಳಿಗೆ ಸಂಬಂಧಿಸಿದ ಕಾನೂನಿನ ಈಚಿನ ನಿಯಮಗಳನ್ನು ಅನುಷ್ಠಾನಕ್ಕೆ ತಂದಿರುವ ಬಗ್ಗೆ ವರದಿ ಸಲ್ಲಿಸಬೇಕು ಎಂದು 23 ರಾಜ್ಯಗಳಿಗೆ ಹಾಗೂ ಏಳು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಕರ್ನಾಟಕ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮತ್ತು ದೆಹಲಿ ಸರ್ಕಾರಗಳು ವರದಿಯನ್ನು ಸಲ್ಲಿಸಿವೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ವೇಗವಾಗಿ ಸಾಗುವ ವಾಹನಗಳ ಮೇಲೆ ಎಲೆಕ್ಟ್ರಾನಿಕ್ ಉಪಕರಣ ಬಳಸಿ ಕಣ್ಗಾವಲು ಇರಿಸಲು ಅವಕಾಶ ಕಲ್ಪಿಸುವ ಮೋಟಾರು ವಾಹನಗಳ ಕಾಯ್ದೆಯ ಸೆಕ್ಷನ್ 136(ಎ) ಅನುಷ್ಠಾನದ ಬಗ್ಗೆ ಸುಪ್ರೀಂ ಕೋರ್ಟ್ 2024ರ ಸೆಪ್ಟೆಂಬರ್ 2ರಂದು ನಿರ್ದೇಶನಗಳನ್ನು ನೀಡಿತ್ತು.ಈವರೆಗೆ ವರದಿ ಸಲ್ಲಿಸದೆ ಇರುವ 23 ರಾಜ್ಯಗಳು, ಏಳು ಕೇಂದ್ರಾಡಳಿತ ಪ್ರದೇಶಗಳು ವರದಿಯನ್ನು ಸಲ್ಲಿಸಬೇಕು ಎಂದು ಕೋರ್ಟ್ ಈಗ ಸೂಚಿಸಿದೆ. ಈ ವರದಿಗಳನ್ನು ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಸುಪ್ರೀಂ ಕೋರ್ಟ್‌ನ ಸಮಿತಿ ಜೊತೆ ಹಂಚಿಕೊಳ್ಳಲಾಗುತ್ತದೆ.

ಎಲ್ಲ ಆಯಾಮಗಳನ್ನು ಪರಿಶೀಲಿಸಲಿರುವ ಸಮಿತಿಯು ತನ್ನ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ನೀಡಲಿದೆ. ಎಲೆಕ್ಟ್ರಾನಿಕ್ ಉಪಕರಣ ಬಳಸಿ ಕಣ್ಗಾವಲು ಇರಿಸಲು ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ರೂಪಿಸುವಾಗ, ರಸ್ತೆ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರುವಾಗ ಕೇಂದ್ರವು ಈ ಸಲಹೆಗಳನ್ನು ಪರಿಗಣಿಸಬಹುದು ಎಂದು ಹೇಳಿದೆ.

ಆಕಸ್ಮಿಕ ಬೆಂಕಿ 7 ಹೋರಿಗಳು ಸಜೀವ ದಹನ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಚಂದ್ರಘಟಗಿ ಗ್ರಾಮದಲ್ಲಿ ಭಾನುವಾರ ರಾತ್ರಿ ಕೊಟ್ಟಿಗೆಗೆ ಆಕಸ್ಮಿಕ ಬೆಂಕಿ ತಗುಲಿ, ಏಳು ಹೋರಿಗಳು ಮೃತಪಟ್ಟಿವೆ.

‘ಚಂದ್ರಘಟಗಿ ಗ್ರಾಮದ ನಿವಾಸಿ ಮಹೇಶ ಗಣಪತಿ ಹೆಗಡೆ ಅವರ ಮನೆಯ ಹಿಂಭಾಗದಲ್ಲಿರುವ ಕೊಟ್ಟಿಗೆಗೆ ಆಕಸ್ಮಿಕ ಬೆಂಕಿ ತಗುಲಿತ್ತು. ಘಟನೆಯಲ್ಲಿ ಸಿಸಿಟಿವಿ ಕ್ಯಾಮೆರಾ, ಜಾನುವಾರುಗಳಿಗೆ ಸಂಗ್ರಹಿಸಿಟ್ಟ ಮೇವು, ಕಟ್ಟಿಗೆ ಸಾಮಗ್ರಿಗಳು ಸುಟ್ಟಿದ್ದು ಅಂದಾಜು ಲಕ್ಷಾಂತರ ರೂಪಾಯಿ ಹಾನಿಯಾಗಿದೆ’ ಎಂದು ತಹಶೀಲ್ದಾರ್ ಎಂ.ಆರ್. ಕುಲಕರ್ಣಿ ತಿಳಿಸಿದರು.

ಸಿರಿವಂತರ ಸಂಪತ್ತು ಮೂರುಪಟ್ಟು ಹೆಚ್ಚಳ

ದಾವೋಸ್ (ಪಿಟಿಐ): ವಿಶ್ವದಾದ್ಯಂತ ಸಿರಿವಂತರ ಸಂಪತ್ತು 2024ರಲ್ಲಿ ಎರಡು ಲಕ್ಷ ಕೋಟಿ ಡಾಲರ್‌ಗಳಿಂದ 15 ಲಕ್ಷ ಕೋಟಿ ಡಾಲರ್‌ಗಳಿಗೆ ತಲುಪಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮೂರು ಪಟ್ಟು ಸಂಪತ್ತು ವೃದ್ಧಿಸಿದೆ ಎಂದು ಅಧ್ಯಯನ ವರದಿಯೊಂದು ಹೇಳಿದೆ.

ಇಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆಯ ಮೊದಲ ದಿನವೇ ‘ಆಕ್ಸ್‌ಫ್ಯಾಮ್ ಇಂಟರ್‌ನ್ಯಾಶನಲ್’ ತನ್ನ ಮಹತ್ವದ ‘ಅಸಮಾನತೆಯ ವರದಿ’ಯನ್ನು ಬಿಡುಗಡೆ ಮಾಡಿದೆ.

ಏಷ್ಯಾದಲ್ಲಿ ಸಿರಿವಂತರ ಸಂಪತ್ತು 2024ರಲ್ಲಿ 299 ಶತಕೋಟಿ ಡಾಲರ್‌ಗಳಷ್ಟು ಹೆಚ್ಚಾಗಿದೆ ಎಂದು ಆಕ್ಸ್‌ಫ್ಯಾಮ್ ತನ್ನ ವರದಿಯಲ್ಲಿ ಹೇಳಿದ್ದು, ಒಂದು ದಶಕದೊಳಗೆ ಕನಿಷ್ಠ ಐದು ಮಂದಿ ಶತಕೋಟ್ಯಧಿಪತಿಗಳು ಏಷ್ಯಾದಲ್ಲಿ ಇರಲಿದ್ದಾರೆ ಎಂದು ಭವಿಷ್ಯ ನುಡಿದಿದೆ.

2024ರಲ್ಲಿ ಜಾಗತಿಕವಾಗಿ 204 ಹೊಸ ಸಿರಿವಂತರ ಸೇರ್ಪಡೆಯಾಗಿದೆ. ಪ್ರತಿ ವಾರ ಸರಾಸರಿ ನಾಲ್ಕು ಮಂದಿ ಸಿರಿವಂತರ ಉದಯವಾಗಿದ. ಏಷ್ಯಾದಲ್ಲಿಯೇ ವರ್ಷದಲ್ಲಿ 41 ಮಂದಿ ಹೊಸ ಸಿರಿವಂತರ ಉದಯವಾಗಿದೆ ಎಂದು ಅದು ಹೇಳಿದೆ.

ಬೆಂಬಲಿಗರು, ಅಮೆರಿಕ ಜನರಿಗೆ ಭರವಸೆ: ಅತ್ಯಂತ ಸುರಕ್ಷಿತ ಗಡಿ ಹೊಂದಲು ಪಣ

ಐತಿಹಾಸಿಕ ವೇಗದಲ್ಲಿ ಕೆಲಸ: ಟ್ರಂಪ್

ವಾಷಿಂಗ್ಟನ್ (ಪಿಟಿಐ): ಅಮೆರಿಕ ಎದುರಿಸುತ್ತಿರುವ ಪ್ರತಿ ಬಿಕ್ಕಟ್ಟನ್ನು ಸರಿಪಡಿಸಲು ಐತಿಹಾಸಿಕ ವೇಗದಲ್ಲಿ ಕಾರ್ಯ ನಿರ್ವಹಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (78) ಅವರು ದೇಶದ ಜನರು ಮತ್ತು ತನ್ನ ಬೆಂಬಲಿಗರಿಗೆ ಭರವಸೆ ನೀಡಿದರು.

ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಮುನ್ನ ‘ಕ್ಯಾಪಿಟಲ್ ಒನ್ ಅರೇನಾ’ದಲ್ಲಿ ಅವರು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು.

ಸಹಸ್ರಾರು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಟ್ರಂಪ್, ಇದನ್ನು ‘ವಿಜಯದ ರ‍್ಯಾಲಿ’ ಎಂದು ಕರೆದರು.

ಶ್ವೇತಭವನದಲ್ಲಿ ಜಿಲ್ ಬೈಡನ್, ಜೋ ಬೈಡನ್ ಅವರನ್ನು ಪ್ರಮಾಣವಚನ ಸ್ವೀಕರಿಸುವ ಮುನ್ನ ಭೇಟಿಯಾದ ಡೊನಾಲ್ಡ್ ಟ್ರಂಪ್ ಮತ್ತು ಮೆಲಾನಿಯಾ ಟ್ರಂಪ್ ಚಿತ್ರ: ಎಎಫ್‌ಪಿ

ಟ್ರಂಪ್ ಭಾಷಣದ ಪ್ರಮುಖಾಂಶಗಳು:

- ನಾವು ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲೇ ಯಾರೂ ನಿರೀಕ್ಷಿಸಿದ ಫಲಿತಾಂಶಗಳನ್ನು ನೀವು ಗಮನಿಸುತ್ತಿದ್ದೀರಿ. ಇದನ್ನು ‘ಟ್ರಂಪ್ ಎಫೆಕ್ಟ್’ ಎಂದು ಎಲ್ಲರೂ ಕರೆಯುತ್ತಿದ್ದಾರೆ. ಆದರೆ ಇದೆಲ್ಲ ಆಗುತ್ತಿರುವುದು ನಿಮ್ಮಿಂದ.
- ಬಿಟ್‌ಕಾಯಿನ್ ಮೌಲ್ಯ ಶರವೇಗದಲ್ಲಿ ಏರುತ್ತಿದೆ. ಪ್ರಮುಖ ಹೂಡಿಕೆ ಕಂಪನಿ ಡಿಎಂಎಸಿಸಿ ಪ್ರಾಪರ್ಟೀಸ್ ಅಮೆರಿಕದಲ್ಲಿ 20 ಶತಕೋಟಿ ಡಾಲರ್‌ನಿಂದ 40 ಶತಕೋಟಿ ಡಾಲರ್‌ನಷ್ಟು ಹೂಡಿಕೆ ಮಾಡುವುದಾಗಿ ಘೋಷಿಸಿದೆ. ನಾವು ಚುನಾವಣೆಯಲ್ಲಿ ಗೆದ್ದಿದ್ದೇವೆ ಎಂಬ ಕಾರಣಕ್ಕೆ ಇಷ್ಟೆಲ್ಲ ಹೂಡಿಕೆಗಳು ಬರುತ್ತಿವೆ.
- ಇದೆಲ್ಲ ಗಮನಿಸಿದರೆ ಜೋ ಬೈಡನ್ ಆಡಳಿತವು ನಾಲ್ಕು ವರ್ಷಗಳಲ್ಲಿ ಮಾಡಿದ್ದಕ್ಕಿಂತ ಹೆಚ್ಚಿನದ್ದನ್ನು ನಾವು ಈಗಲೇ ಮಾಡಿದ್ದೇವೆ. ಶ್ವೇತಭವನದಲ್ಲಿ ನಾಲ್ಕು ವರ್ಷಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಲಿದ್ದೇವೆ. ಅದನ್ನು ನೀವು ನೋಡಲಿದ್ದೀರಿ. ನಮ್ಮ ಕಾರ್ಯನಿರ್ವಾಹಕ ಆದೇಶಗಳು ನಿಮ್ಮನ್ನು ಹೆಚ್ಚು ಸಂತಸಪಡಿಸಲಿವೆ.
- ಲಕ್ಷಾಂತರ ಜನರು ನಮ್ಮ ದೇಶಕ್ಕೆ ಅಕ್ರಮವಾಗಿ, ಯಾವುದೇ ತಪಾಸಣೆಯಿಲ್ಲದೆ ಮುಕ್ತವಾಗಿ ಬಂದಿದ್ದಾರೆ. ಅವರಲ್ಲಿ ಹೆಚ್ಚಿನವರು ಕೊಲೆಗಾರರು ಎಂಬುದನ್ನು ಯೋಚಿಸಿ. ಇದಕ್ಕೆಲ್ಲ ನಾವು ಕಡಿವಾಣ ಹಾಕಲಿದ್ದೇವೆ. ನಮ್ಮ ಗಡಿಗಳ ಆಕ್ರಮಣವನ್ನು ಸ್ಥಗಿತಗೊಳಿಸುವ ಕಾರ್ಯ ಮಾಡಲಿದ್ದೇವೆ. ಅಕ್ರಮವಾಗಿ ಗಡಿ ಪ್ರವೇಶಿಸಿದವರು, ಅತಿಕ್ರಮಣಕಾರರು ಹಿಂದಿರುಗಲಿದ್ದಾರೆ. ಇದಕ್ಕಾಗಿ ಅತ್ಯಂತ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಲಿದ್ದೇವೆ.

ಈ ಮೂಲಕ ನಾವು ದೇಶದ ಇತಿಹಾಸದಲ್ಲಿಯೇ ಅತ್ಯಂತ ಸುರಕ್ಷಿತ ಗಡಿಯನ್ನು ಹೊಂದಲಿದ್ದೇವೆ.

> **ಅಮೆರಿಕವನ್ನು ಮತ್ತೊಮ್ಮೆ ಶ್ರೇಷ್ಠಗೊಳಿಸಬೇಕಿದೆ. ಇದಕ್ಕಾಗಿ ಶತಮಾನಗಳವರೆಗೆ ಶಾಶ್ವತವಾಗಿ ಇರುವಂತಹ ಬಲವಾದ ಅಡಿಪಾಯ ಹಾಕಲಾಗುವುದು**
> **ಎಲಾನ್ ಮಸ್ಕ್,** ಟೆಸ್ಲಾ ಕಂಪನಿ ಮಾಲೀಕ, ಅಮೆರಿಕ ಸರ್ಕಾರದ ಕಾರ್ಯದಕ್ಷತಾ ಇಲಾಖೆಯ (ಡಿಒಜಿಇ) ಉಸ್ತುವಾರಿ

ಕ್ಷಮಾದಾನ ನೀಡಿದ ಬೈಡನ್

ವಾಷಿಂಗ್ಟನ್ (ಎಪಿ): 2021ರ ಜನವರಿ 6ರಲ್ಲಿ ಕ್ಯಾಪಿಟಲ್ ಮೇಲಿನ ದಾಳಿಯ ತನಿಖೆ ನಡೆಸಿದ್ದ ಡಾ. ಆಂಥೋನಿ ಫೌಸಿ ಮತ್ತು ನಿವೃತ್ತ ಜನರಲ್ ಮರ್ಕ್ ಮಿಲ್ಲಿ ಹಾಗೂ ಸದನ ಸಮಿತಿ ಸದಸ್ಯರಿಗೆ ಕ್ಷಮಾದಾನ ನೀಡಿ ಜೋ ಬೈಡನ್ ಸೋಮವಾರ ಆದೇಶಿಸಿದ್ದಾರೆ. ಅವರು ತಮ್ಮ ಅಧ್ಯಕ್ಷ ಸ್ಥಾನದ ಅಧಿಕಾರಾವಧಿ ಮುಕ್ತಾಯವಾಗುವ ಕೊನೆಯ ಕ್ಷಣಗಳ ಮುನ್ನ ಅಸಾಧಾರಣ ಅಧಿಕಾರ ಬಳಸಿ, ಈ ಆದೇಶ ಹೊರಡಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಸಂಭವನೀಯ ಸೇಡು ಕ್ರಮಗಳ ವಿರುದ್ಧ ರಕ್ಷಣೆ ಒದಗಿಸಲು ಬೈಡನ್ ಅವರು ಈ ಕ್ರಮ ತೆಗೆದುಕೊಂಡಿದ್ದಾರೆ.

ಕ್ಷಮಾದಾನಕ್ಕೆ ಸಂಬಂಧಿಸಿದಂತೆ ಪ್ರಕಟಣೆ ಹೊರಡಿಸಿರುವ ಬೈಡನ್, ‘ಯಾವುದೇ ವ್ಯಕ್ತಿ ಯಾವುದೇ ತಪ್ಪಿನಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತಪ್ಪಾಗಿ ಗ್ರಹಿಸಬಾರದು ಅಥವಾ ಯಾವುದೇ ಅಪರಾಧ ಕೃತ್ಯದ ತಪ್ಪಿತಸ್ಥ ಎಂದು ಒಪ್ಪಿಕೊಂಡಿದ್ದಾರೆ ಎಂದೂ ತಪ್ಪಾಗಿ ಅರ್ಥೈಸಬಾರದು’ ಎಂದು ಉಲ್ಲೇಖಿಸಿದ್ದಾರೆ.

ವಲಸಿಗರ ಗಡೀಪಾರು ಯೋಜನೆ ನಾಚಿಕೆಗೇಡು–(ರೋಮ್ –ಎಪಿ): ಡೊನಾಲ್ಡ್ ಟ್ರಂಪ್ ಅವರು ವಲಸಿಗರ ಸಾಮೂಹಿಕ ಗಡೀಪಾರಿಗೆ ಯೋಜನೆ ರೂಪಿಸಿರುವುದು ‘ನಾಚಿಕೆಗೇಡು’ ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ. ವಲಸಿಗರನ್ನು ಗಡೀಪಾರು ಮಾಡಬೇಡಿ. ಇದು ಸಮಸ್ಯೆಗೆ ಪರಿಹಾರ ಅಲ್ಲ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ‘ಎಲ್ಲರನ್ನೂ ಸ್ವಾಗತಿಸುವ, ಅವಕಾಶಗಳನ್ನು ಒದಗಿಸುವ ಅಮೆರಿಕದ ಸಿದ್ಧಾಂತವು ಹಾಗೆಯೇ ಉಳಿಯಲಿ’ ಎಂದು ಪ್ರಾರ್ಥಿಸುತ್ತೇನೆ ಅವರು ಹೇಳಿದರು.

ಟ್ರಂಪ್‌ಗೆ ನರೇಂದ್ರ ಮೋದಿ ಪತ್ರ

ನವದೆಹಲಿ (ಪಿಟಿಐ): ಅಮೆರಿಕದ ನೂತನ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ಡೊನಾಲ್ಡ್ ಟ್ರಂಪ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಬರೆದಿರುವ ಪತ್ರವನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಕೊಂಡೊಯ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಟ್ರಂಪ್ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಜೈಶಂಕರ್ ಅವರು ವಿಶೇಷ ಪ್ರತಿನಿಧಿಯಾಗಿ ಭಾರತವನ್ನು ಪ್ರತಿನಿಧಿಸಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಸರ್ಕಾರಿ ಸ್ವಾಮ್ಯದ ಬೆಂಗಳೂರಿನ ಬಮೂಲ್ ಸಂಸ್ಥೆಗೆ ಗುತ್ತಿಗೆ ಭದ್ರತಾ ಸಿಬ್ಬಂದಿಗಳನ್ನು ನೇಮಿಸುತ್ತಿದ್ದೇವೆ. ಸರ್ಕಾರ ನಿಗಧಿಪಡಿಸಿದ ವೇತನ: ರೂಪಾಯಿ. 17,965/- (ಕೆಲಸದ ಅವಧಿ 8 ಗಂಟೆ) ಇಎಸ್‌ಐ, ಇಪಿಎಫ್, ಊಟ , ವಸತಿ ಇರುತ್ತದೆ. ಸಂಪರ್ಕಿಸಿ ಕಛೇರಿ: 080-23185599 ವ್ಯವಸ್ಥಾಪಕರು ವಿವೇಕ್: 9980061341 ರವಿ: 9481646452

ವಾಹನ

Automobile Services

For Hire

2022 CNG ಟ್ರಕ್ 10 ಟನ್ ಪೇಲೋಡ್ ಗ್ಯಾಸ್ ಕಂಪನಿಗೆ 5 ವರ್ಷಗಳವರೆಗೆ ಮಾಸಿಕ ಬಾಡಿಗೆಗೆ ಅಗತ್ಯವಿದೆ. ವಾಟ್ಸ್‌ಆಪ್ 9414186808/ 9414309990

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು
ಶ್ರೀ ಕೆ. ಕೃಷ್ಣಮೂರ್ತಿ ಮತ್ತು ಶ್ರೀಮತಿ ಅಮರಾವತಮ್ಮ
ನಿಧನ: 21-1-1992 ನಿಧನ 12-7-2007

ಬದ್ಲಾಪುರ ಪ್ರಕರಣ ಆರೋಪಿ ಹತ್ಯೆಗೆ ಐವರು ಪೊಲೀಸರು ಹೊಣೆ

ಮುಂಬೈ: ಬದ್ಲಾಪುರದ ಶಾಲೆಯೊಂದರಲ್ಲಿ ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪಿ ಅಕ್ಷಯ್ ಶಿಂದೆ (24) ಎನ್‌ಕೌಂಟರ್‌ಗೆ ಐವರು ಪೊಲೀಸರೇ ಹೊಣೆ ಎಂದು ಠಾಣೆಯ ಮ್ಯಾಜಿಸ್ಟ್ರೇಟ್ ತನಿಖಾ ವರದಿ ಹೇಳಿದೆ.

ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೇರೆ ಮತ್ತು ನೀಲಾ ಗೋಖಲೆ ಅವರಿದ್ದ ವಿಭಾಗೀಯ ಪೀಠಕ್ಕೆ ಠಾಣೆ ಮ್ಯಾಜಿಸ್ಟ್ರೇಟ್ ಈ ತನಿಖಾ ವರದಿಯನ್ನು ಸೋಮವಾರ ಸಲ್ಲಿಸಿದರು.

ತಮ್ಮ ಮಗನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ ಎಂದು ಅಕ್ಷಯ್ ಅವರ ತಂದೆ ಅಣ್ಣಾ ಶಿಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠವು, ಮ್ಯಾಜಿಸ್ಟ್ರೇಟ್ ಸಲ್ಲಿಸಿದ ತನಿಖಾ ವರದಿಗಳನ್ನು ಅವಲೋಕಿಸಿತು.

ಅಪರಾಧ ವಿಭಾಗದ ಹಿರಿಯ ಪೊಲೀಸ್ ಇನ್‌ಸ್ಪೆಕ್ಟರ್ ಸಂಜಯ್ ಶಿಂದೆ, ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ನೀಲೇಶ್ ಮೋರೆ, ಹೆಡ್ ಕಾನ್‌ಸ್ಟೆಬಲ್‌ಗಳಾದ ಅಭಿಜಿತ್ ಮೋರೆ, ಹರೀಶ್ ತಾವಡೆ ಮತ್ತು ಪೊಲೀಸ್ ಜೀಪ್ ಚಾಲಕನ ಮೇಲೆ ದೋಷಾರೋಪ ಹೊರಿಸಲಾಗಿದೆ.

ಐವರು ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಮುಂದುವರಿಸುವಂತೆ ವಿಭಾಗೀಯ ಪೀಠ ಆದೇಶ ನೀಡಿದೆ. ಕಳೆದ ವರ್ಷ ಆಗಸ್ಟ್ 12 ಮತ್ತು 13ರಂದು ಬದ್ಲಾಪುರದ ಶಾಲೆಯ ಶೌಚಾಲಯದಲ್ಲಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪ ಅಕ್ಷಯ್ ಮೇಲಿತ್ತು.

ಕೇರಳದಾದ್ಯಂತ ಸದ್ದು ಮಾಡಿದ್ದ ಶರೋನ್ ರಾಜ್ ಕೊಲೆ ಪ್ರಕರಣ

ಪ್ರಿಯಕರನ ಕೊಲೆ: ಯುವತಿಗೆ ಗಲ್ಲು

ತಿರುವನಂತಪುರ (ಪಿಟಿಐ): ತನ್ನ ಪ್ರಿಯಕರನಿಗೆ ವಿಷವುಣಿಸಿ ಕೊಂದಿದ್ದ ಪ್ರಕರಣದಲ್ಲಿ ಯುವತಿ ಗ್ರೀಷ್ಮಾಗೆ (24) ಕೇರಳದ ನ್ಯಾಯಾಲಯವು ಮರಣ ದಂಡನೆ ವಿಧಿಸಿ ಸೋಮವಾರ ತೀರ್ಪು ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ನೆಯ್ಯಾಟಿಂಕರ ಜಿಲ್ಲಾ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು, ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದ ಯುವತಿಯ ಚಿಕ್ಕಪ್ಪ ನಿರ್ಮಲ ಕುಮಾರನ್‌ಗೆ ಮೂರು ವರ್ಷಗಳ ಜೈಲು ವಿಧಿಸಿದೆ. 'ಯುವತಿಯ ಕೃತ್ಯವು ಸಮಾಜಕ್ಕೆ ಕೆಟ್ಟ ಸಂದೇಶ ನೀಡುವಂತಿದೆ. ಪ್ರೀತಿಯ ಪಾವಿತ್ರ್ಯವನ್ನೇ ಹಾಳುಗೆಡವಿದೆ' ಎಂದು ನ್ಯಾಯಾಧೀಶರು ಅಭಿಪ್ರಾಯ ಪಟ್ಟಿದ್ದಾರೆ.

24 ವರ್ಷದ ಗ್ರೀಷ್ಮಾ, ತನ್ನ ಶೈಕ್ಷಣಿಕ ಸಾಧನೆ, ಯಾವುದೇ ಕ್ರಿಮಿನಲ್ ಹಿನ್ನೆಲೆ ಹೊಂದಿಲ್ಲದಿರುವುದು ಹಾಗೂ ಹೆತ್ತವರಿಗೆ ಒಬ್ಬಳೇ ಮಗಳು ಎಂಬ ಅಂಶವನ್ನು ಮುಂದಿಟ್ಟುಕೊಂಡು ಕಠಿಣ ಶಿಕ್ಷೆ ನೀಡದಂತೆ ಮನವಿ ಮಾಡಿದ್ದಳು. ಆದರೆ ಅದನ್ನು ಒಪ್ಪದ ನ್ಯಾಯಾಲಯ, 'ಇದೊಂದು ತೀರಾ ಅಪರೂಪದ ಪ್ರಕರಣ' ಎಂದು 586 ಪುಟಗಳ ತೀರ್ಪಿನಲ್ಲಿ ಅಭಿಪ್ರಾಯ-ಪಟ್ಟಿತು.

'ಅಪರಾಧಿ ಯುವತಿಯು ಪ್ರಿಯಕರನನ್ನು ಕೊಲ್ಲಲು ಹಿಂದೊಮ್ಮೆ ಯತ್ನಿಸಿದ್ದಾಳೆ.

ಪೊಲೀಸರು ಗ್ರೀಷ್ಮಾಳನ್ನು ವೈದ್ಯಕೀಯ ಪರೀಕ್ಷೆಗೆಂದು ಆಸ್ಪತ್ರೆಗೆ ಕರೆದೊಯ್ದರು
—ಪಿಟಿಐ ಚಿತ್ರ

ಕೊಲೆ ಪ್ರಕರಣದ ತನಿಖೆಯ ಹಾದಿ ತಪ್ಪಿಸಲು ಆತ್ಮಹತ್ಯೆ ಮಾಡಿಕೊಳ್ಳಲೂ ಮುಂದಾಗಿದ್ದಾಳೆ. ಹಾಗಾಗಿ, ಆಕೆಗೆ ಕ್ರಿಮಿನಲ್ ಹಿನ್ನೆಲೆ ಇಲ್ಲ ಎಂಬ ವಾದವನ್ನು ಒಪ್ಪಲಾಗದು' ಎಂದು ಹೇಳಿತು. ಯುವತಿಯು ಎಸಗಿರುವ ಕೃತ್ಯದ ಮುಂದೆ ಆಕೆ ವಯಸ್ಸಿನಲ್ಲಿ ಚಿಕ್ಕವಳು ಎಂಬುದನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದಿತು.

ಪ್ರಕರಣವೇನು?: ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ಗ್ರೀಷ್ಮಾ ಹಾಗೂ ಕೇರಳದ ತಿರುವನಂತಪುರ ಜಿಲ್ಲೆಯ ಪಾರಶ್ಶಾಲದ ಶರೋನ್ ರಾಜ್ ಪರಸ್ಪರ ಪ್ರೀತಿಸುತ್ತಿದ್ದರು. ಬಳಿಕ ಕಾರಣಾಂತರಗಳಿಂದ ದೂರವಾಗಿದ್ದರು. ಗ್ರೀಷ್ಮಾಗೆ ಯೋಧನೊಂದಿಗೆ ವಿವಾಹ ನಿಶ್ಚಯವಾಗಿತ್ತು. ಈ ಮಧ್ಯೆ, ಗ್ರೀಷ್ಮಾ-ರಾಜ್ ನಡುವೆ ಪ್ರೀತಿ ಮತ್ತೆ ಚಿಗುರಿತ್ತು. ಇಬ್ಬರು ಮದುವೆಯೂ ಆಗಿದ್ದರು. ಬಳಿಕ, ಸಂಬಂಧ ಕಡಿದುಕೊಳ್ಳಲು ಗ್ರೀಷ್ಮಾ ಮುಂದಾಗಿದ್ದಳು. ಆದರೆ ಶರೋನ್ ಇದಕ್ಕೆ ಒಪ್ಪದಿದ್ದರಿಂದ, ಅವರನ್ನು ಕೊಲೆ ಮಾಡಲು ನಿರ್ಧರಿಸಿದ್ದಳು.

2022ರ ಅಕ್ಟೋಬರ್ 14ರಂದು ರಾಜ್‌ನನ್ನು ಕನ್ಯಾಕುಮಾರಿಯ ರಾಮವರ್ಮನ್‌ಚಿರಾಯ್‌ನಲ್ಲಿರುವ ತನ್ನ ಮನೆಗೆ ಕರೆಸಿಕೊಂಡಿದ್ದ ಆಕೆ, ಆಯುರ್ವೇದಿಕ್ ಜ್ಯೂಸ್‌ನಲ್ಲಿ ವಿಷ ಬೆರೆಸಿ ಕುಡಿಸಿದ್ದಳು. 11 ದಿನಗಳ ಜೀವನ್ಮರಣ ಹೋರಾಟ ನಡೆಸಿದ್ದ ಶರೋನ್, ಅ.25ರಂದು ಮೃತಪಟ್ಟಿದ್ದರು. ಈ ಪ್ರಕರಣವು ಕೇರಳದಲ್ಲಿ ಭಾರಿ ಸದ್ದು ಮಾಡಿತ್ತು.

'ಯುವತಿಯು ನಿಧಾನಗತಿಯಲ್ಲಿ ಪರಿಣಾಮ ಬೀರುವ ವಿಷದ (ಸ್ಲೋ ಪಾಯ್ಸನ್) ಬಗ್ಗೆ ಗೂಗಲ್ ಮಾಡಿದ್ದಾಳೆ. ಬಳಿಕ, ಪ್ಯಾರಕ್ವಾಟ್ ವಿಷವನ್ನು (ಕಳೆನಾಶಕ) ಆಯುರ್ವೇದ ಜ್ಯೂಸ್‌ನಲ್ಲಿ ಬೆರೆಸಿ ಯುವಕನಿಗೆ ಕುಡಿಸಿದ್ದಾಳೆ' ಎಂದು ಪ್ರಕರಣದ ವಿಚಾರಣೆ ನಡೆಸಿದ್ದ ಡಿವೈಎಸ್‌ಪಿ ಕೆ.ವೈ. ಜಾನ್ಸನ್ ಪ್ರತಿಕ್ರಿಯಿಸಿದ್ದಾರೆ.

ನ್ಯಾಯಾಲಯವು ಈ ಪ್ರಕರಣದ ಇನ್ನೊಬ್ಬ ಆರೋಪಿ ಗ್ರೀಷ್ಮಾಳ ತಾಯಿಯನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಶುಕ್ರವಾರ ಖುಲಾಸೆಗೊಳಿಸಿತ್ತು.

ರಾಹುಲ್ ವಿರುದ್ಧದ ಮಾನನಷ್ಟ ಮೊಕದ್ದಮೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

2019ರ ಲೋಕಸಭಾ ಚುನಾವಣೆಗೂ ಮುನ್ನ ಜಾರ್ಖಂಡ್‌ನ ಚಾಯ್‌ಬಾಸಾದಲ್ಲಿ ನಡೆಸಿದ ಸಾರ್ವಜನಿಕ ಸಭೆಯಲ್ಲಿ ರಾಹುಲ್ ಅವರು ಶಾ ಅವರನ್ನು 'ಕೊಲೆ ಆರೋಪಿ' ಎಂದು ಕರೆದಿರುವುದಾಗಿ ಆರೋಪಿಸಿ ಬಿಜೆಪಿ ಕಾರ್ಯಕರ್ತ ನವೀನ್ ಝಾ ಎಂಬುವವರು ನೀಡಿದ ದೂರಿನಂತೆ ಪ್ರಕರಣ ದಾಖಲಾಗಿತ್ತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು ರಾಹುಲ್ ಅವರ ಮೇಲ್ಮನವಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುವಂತೆ ಸೂಚಿಸಿ ಜಾರ್ಖಂಡ್ ಸರ್ಕಾರ ಮತ್ತು ದೂರುದಾರರಿಗೆ ನೋಟಿಸ್ ಜಾರಿಗೊಳಿಸಿತು. 'ಸಂತ್ರಸ್ತ ವ್ಯಕ್ತಿ ಮಾತ್ರ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಬಹುದು ಎಂದು ಹಲವಾರು ತೀರ್ಪುಗಳು ಹೇಳಿವೆ. ಮೂರನೇ ವ್ಯಕ್ತಿಯಿಂದ ಮಾನನಷ್ಟ ಮೊಕದ್ದಮೆ ಹೂಡಲು ಸಾಧ್ಯವಿಲ್ಲ' ಎಂದು ರಾಹುಲ್ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಪೀಠಕ್ಕೆ ತಿಳಿಸಿದರು.

ಛತ್ತೀಸಗಢ: ಎನ್‌ಕೌಂಟರ್‌ಗೆ ಇಬ್ಬರು ಮಹಿಳಾ ನಕ್ಸಲರ ಬಲಿ

ಗರಿಯಾಬಂದ್, ಛತ್ತೀಸಗಢ (ಪಿಟಿಐ): ನಕ್ಸಲರು ಹಾಗೂ ಪೊಲೀಸರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಮಹಿಳಾ ನಕ್ಸಲರು ಮೃತಪಟ್ಟಿದ್ದಾರೆ.

'ಒಡಿಶಾ ಗಡಿಗೆ ಹೊಂದಿಕೊಂಡಿರುವ ಮೈನ್‌ಪುರ್ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯದಲ್ಲಿ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದ ವೇಳೆ ನಕ್ಸಲರು ದಾಳಿ ನಡೆಸಿದರು. ಪ್ರತಿದಾಳಿ ವೇಳೆ ಇಬ್ಬರು ನಕ್ಸಲರು ಮೃತಪಟ್ಟರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ರಖೇಚಾ ತಿಳಿಸಿದರು.

'ಜಿಲ್ಲಾ ಮೀಸಲು ಪೊಲೀಸ್ ಪಡೆ (ಡಿಆರ್‌ಜಿ), ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಛತ್ತೀಸಗಢ ಕೋಬ್ರಾ ಪಡೆಯವರು ಜಂಟಿಯಾಗಿ ಕಾರ್ಯಾಚರಣೆ ನಡೆಸಿದ್ದರು. ಕೋಬ್ರಾ ಪಡೆಯ ಸಿಬ್ಬಂದಿಗೆ ಗುಂಡೇಟು ತಗುಲಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಹೆಲಿಕಾಪ್ಟರ್ ಮೂಲಕ ರಾಯಪುರಕ್ಕೆ ಕಳುಹಿಸಲಾಗಿದೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದರು.

ಈ ವರ್ಷದ ಜನವರಿಯಿಂದ ಈಚೆಗೆ ರಾಜ್ಯದ ವಿವಿಧೆಡೆ ನಡೆದ ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ 28 ನಕ್ಸಲರು ಮೃತಪಟ್ಟಿದ್ದಾರೆ.

ಗುಂಡಿನ ಚಕಮಕಿ: ಯೋಧ ಸಾವು

ಶ್ರೀನಗರ (ಪಿಟಿಐ): ಭಾರತೀಯ ಸೇನೆಯ ಯೋಧರೊಬ್ಬರು ಭಾನುವಾರ ರಾತ್ರಿ ಭಯೋತ್ಪಾದಕರೊಟ್ಟಿಗೆ ನಡೆಸಿದ ಗುಂಡಿನ ಚಕಮಕಿಯಲ್ಲಿ ಅಸುನೀಗಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಸೋಪೋರ್ ಬಳಿಯ ಜಲೂರ ಗುಜ್ಜರ್‌ಪತಿ ಎಂಬಲ್ಲಿನ ಶಂಕಿತ ಉಗ್ರರ ಅಡಗುತಾಣದಲ್ಲಿ ಗುಂಡಿನ ಚಕಮಕಿ ನಡೆಯಿತು. ಆಗ ಯೋಧರು ಗಾಯಗೊಂಡರು. ಸುರಕ್ಷಿತ ಸ್ಥಳಕ್ಕೆ ಹೊತ್ತೊಯ್ಯುವಾಗ ಅವರು ಮೃತಪಟ್ಟರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಉಗ್ರರು ಅಡಗಿರಬಹುದು ಎಂಬ ಮಾಹಿತಿ ಆಧರಿಸಿ ಇಡೀ ರಾತ್ರಿ ಜಲೂರ ಗುಜ್ಜರ್‌ಪತಿಯಲ್ಲಿ ಭಾರತೀಯ ಸೇನೆಯವರು ವ್ಯಾಪಕ ಶೋಧಕಾರ್ಯ ನಡೆಸಿದರು. ಆಗ ನಡೆದ ಗುಂಡಿನ ಚಕಮಕಿಯಿಂದಾಗಿ ಯೋಧ ಮೃತಪಟ್ಟರು ಎಂದಿದ್ದಾರೆ.

ಗುಂಡಿನ ಚಕಮಕಿ ನಡೆದ ಸೋಪೋರ್ ಬಳಿ ಯೋಧರ ಕಾವಲು

ಬಿಜೆಪಿ ಅಭ್ಯರ್ಥಿ ಪರ್ವೇಶ್ ವರ್ಮಾ ದೂರು

'ಕುರ್ಚಿ ಹಂಚಿದ ಕೇಜ್ರಿವಾಲ್'

ನವದೆಹಲಿ (ಪಿಟಿಐ): ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮತದಾರರಿಗೆ ಕುರ್ಚಿಗಳನ್ನು ಹಂಚಿದ್ದಾರೆಂದು ಆರೋಪಿಸಿ ನವದೆಹಲಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ್ವೇಶ್ ವರ್ಮಾ ದೂರು ನೀಡಿದ್ದಾರೆ.

'ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ ಕುರ್ಚಿಗಳನ್ನು ಹಂಚುವಂತೆ ಕೇಜ್ರಿವಾಲ್ ಅವರು ತಮ್ಮ ಬೆಂಬಲಿಗರಿಗೆ ಸೂಚಿಸಿದ್ದಾರೆ. ಈ ಮೂಲಕ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ, ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವ್ಯಕ್ತಿಯೊಬ್ಬ ಕುರ್ಚಿಗಳನ್ನು ಹಂಚುತ್ತಿರುವ ವಿಡಿಯೊ ಕ್ಲಿಪ್ ಅನ್ನು ದೂರಿನ ಜತೆಗೆ ಲಗತ್ತಿಸಲಾಗಿದೆ. ಆ ವ್ಯಕ್ತಿಯು, ತನ್ನನ್ನು ಕೇಜ್ರಿವಾಲ್ ಅವರೇ ಕಳುಹಿಸಿ-ರುವುದಾಗಿ ವಿಡಿಯೊದಲ್ಲಿ ಹೇಳಿದ್ದಾನೆ.

ವರ್ಮಾ ಅವರ ಪರವಾಗಿ, ಚುನಾವಣಾ ಏಜೆಂಟ್ ಸಂದೀಪ್ ಸಿಂಗ್ ಅವರು ಪೊಲೀಸರು ಹಾಗೂ ಚುನಾವಣಾ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

'ಬಿಜೆಪಿ ಅಭ್ಯರ್ಥಿ ವರ್ಮಾ ಅವರು ಮತದಾರರಿಗೆ ಹಣ, ಸೀರೆ, ಶೂ ಸೇರಿದಂತೆ ಇನ್ನಿತರ ವಸ್ತುಗಳನ್ನು ಹಂಚಿದ್ದಾರೆ' ಎಂದು ಆರೋಪಿಸಿ ಕೇಜ್ರಿವಾಲ್ ಅವರು ಚುನಾವಣಾ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದಾರೆ.

ಪ್ರಜಾ ಮತ ಜನತಂತ್ರದ ಹಬ್ಬ

ದೆಹಲಿಯಲ್ಲಿ ಎಎಪಿಯು ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಯುವಜನತೆಗೆ ಉದ್ಯೋಗಾವಕಾಶ ಒದಗಿಸುವುದು ನನ್ನ ಪ್ರಮುಖ ಆದ್ಯತೆ
ಅರವಿಂದ ಕೇಜ್ರಿವಾಲ್
ಎಎಪಿ ಸಂಚಾಲಕ

ಪ್ರತ್ಯೇಕತಾವಾದಿಗಳಿಗೆ ಎಎಪಿ ಬೆಂಬಲ–ಅನುರಾಗ್ ಠಾಕೂರ್: ಎಎಪಿ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುತ್ತಿದೆ ಎಂದು ಆರೋಪಿಸಿರುವ ಬಿಜೆಪಿ, ದೆಹಲಿಯ ಶಾಲೆಗಳು ಇತ್ತೀಚೆಗೆ ಎದುರಿಸಿದ ಹುಸಿ ಬಾಂಬ್ ಬೆದರಿಕೆಗಳ ಕುರಿತು ಸೋಮವಾರ ಪ್ರಶ್ನೆಗಳನ್ನು ಎತ್ತಿದೆ.

'ಕಾಂಗ್ರೆಸ್ ಮತ್ತು ಎಎಪಿ ಹೊರನೋಟಕ್ಕೆ ಭಿನ್ನವಾಗಿ ಕಂಡುಬಂದರೂ ಒಳಗೆ ಒಂದೇ' ಎಂದು ಬಿಜೆಪಿ ನಾಯಕ ಅನುರಾಗ್ ಠಾಕೂರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಕಾಂಗ್ರೆಸ್‌ನ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾ ಎಎಪಿ ಅಧಿಕಾರಕ್ಕೆ ಬಂದಿತು. ಆದರೆ ಈಗ ಎಎಪಿಯಲ್ಲಿ ಅರಾಜಕತೆ, ಪ್ರತ್ಯೇಕತೆ, ಭಯೋತ್ಪಾದನೆ, ವದಂತಿ ಹರಡುವಿಕೆ ಹಾಗೂ ಅಪರಾಧಿಗಳು ತುಂಬಿದ್ದಾರೆ' ಎಂದು ಅವರು ಆರೋಪಿಸಿದರು.

'ಕೆಲವರು ಬಾಂಬ್ ಸ್ಫೋಟದ ವದಂತಿಗಳನ್ನು ಹರಡಿ, ದೆಹಲಿಯ ಶಾಲಾ ಮಕ್ಕಳ ಪೋಷಕರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ. ವದಂತಿ ಹರಡುವರ ಜತೆ ಯಾರು ಸಂಪರ್ಕದಲ್ಲಿದ್ದಾರೆ ಎನ್ನುವುದಕ್ಕೆ ಆತಿಶಿ ಮತ್ತು ಕೇಜ್ರಿವಾಲ್ ಉತ್ತರ ನೀಡುತ್ತಾರಾ? ಅರಾಜಕತೆ ಸೃಷ್ಟಿಸುವುದರಲ್ಲಿ ಈ ಇಬ್ಬರು ಹಳೆ ಆಟಗಾರರು' ಎಂದು ಠಾಕೂರ್ ಟೀಕಿಸಿದರು.

ಸಂಕ್ಷಿಪ್ತ ಸುದ್ದಿ

ಉತ್ತರಾಖಂಡದಲ್ಲಿ ಯುಸಿಸಿಗೆ ಒಪ್ಪಿಗೆ

ನವದೆಹಲಿ: ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದ ಉತ್ತರಾಖಂಡ ಸರ್ಕಾರವು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆಗೆ (ಯುಸಿಸಿ) ಅನುಮೋದನೆ ನೀಡಿದೆ.

ರಾಷ್ಟ್ರೀಯ ಕ್ರೀಡಾಕೂಟದ ಉದ್ಘಾಟನೆಗೆ ಪ್ರಧಾನಿ ಮೋದಿ ರಾಜ್ಯಕ್ಕೆ ಭೇಟಿ ನೀಡಿದಾಗ ಈ ಕಾನೂನು ಜಾರಿಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್: ಮಹಿಳೆಗೆ ಎಚ್‌ಎಂಪಿವಿ

ಅಹಮದಾಬಾದ್ (ಪಿಟಿಐ): ರಾಜ್ಯದಲ್ಲಿ ಎಚ್‌ಎಂಪಿವಿ ಸೋಂಕಿನ ಸಕ್ರಿಯ ಪ್ರಕರಣಗಳಿಲ್ಲ ಎಂದು ಘೋಷಿಸಿದ ಬೆನ್ನಿಗೆ, ಮಹಿ-ಳೆಯೊಬ್ಬರಲ್ಲಿ ಸೋಮವಾರ ಸೋಂಕು ಮತ್ತೆಯಾಗಿದೆ.

ಅಹಮದಾಬಾದ್‌ನ ಖಾಸಗಿ ಆಸ್ಪತ್ರೆಗೆ ದಾಖಲಾಗಿರುವ ಮೆಹ್ಸಾಣಾ ಜಿಲ್ಲೆಯ 69 ವರ್ಷದ ಮಹಿಳೆಯಲ್ಲಿ ಸೋಂಕು ಪತ್ತೆಯಾಗಿದೆ ಎಂದು ಪಾಲಿಕೆಯ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಜ. 18ರಂದು ನಡೆಸಿದ ಪರೀಕ್ಷೆಯಲ್ಲಿ ಮಹಿಳೆಗೆ ಸೋಂಕು ತಗುಲಿರುವುದು ಖಚಿತಪಟ್ಟಿದೆ. ಕೆಮ್ಮು ಮತ್ತು ಉಸಿರಾಟದ ತೊಂದರೆಯಿಂದ ಅದೇ ದಿನ ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಮಾಜಿ ಐಎಎಸ್ ಅಧಿಕಾರಿಗೆ 5 ವರ್ಷ ಜೈಲು ಶಿಕ್ಷೆ

ಅಹಮದಾಬಾದ್: ಭ್ರಷ್ಟಾಚಾರ ಪ್ರಕರಣದಲ್ಲಿ ಅಪರಾಧಿಯಾಗಿರುವ ಮಾಜಿ ಐಎಎಸ್ ಅಧಿಕಾರಿ ಪ್ರದೀಪ್ ಶರ್ಮಾ ಅವರಿಗೆ ಐದು ವರ್ಷ ಜೈಲು ಶಿಕ್ಷೆಯನ್ನು ಇಲ್ಲಿನ ವಿಶೇಷ ನ್ಯಾಯಾಲಯ ಸೋಮವಾರ ವಿಧಿಸಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಕೆ.ಎಂ. ಸೋಜಿತ್ರಾ ಅವರು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(2)ರ ಅಡಿಯಲ್ಲಿ, ಸರ್ಕಾರಿ ನೌಕರ/ಅಧಿಕಾರಿ ತಮ್ಮ ಸ್ಥಾನ ದುರ್ಬಳಕೆ ಮಾಡಿಕೊಂಡು ಲಾಭ ಪಡೆದ ಮತ್ತು ಕ್ರಿಮಿನಲ್ ದುಷ್ಕೃತ್ಯ ಎಸಗಿರುವ ಆರೋಪದಲ್ಲಿ ಶರ್ಮಾ ಅವರನ್ನು ತಪ್ಪಿತಸ್ಥರೆಂದು ತೀರ್ಪು ನೀಡಿದರು.

ಸೋಮವಾರ ಸಂಜೆ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದ ಕಾರಣ ತೀರ್ಪಿನ ವಿವರಗಳು ತಕ್ಷಣಕ್ಕೆ ಲಭ್ಯವಾಗಿಲ್ಲ. ಮಾಜಿ ಐಎಎಸ್ ತನ್ನ ಪತ್ನಿ ಶ್ಯಾಮಲಾ ಅವರನ್ನು ವ್ಯಾಲ್ಯೂ ಪ್ಯಾಕೇಜಿಂಗ್ ಸಂಸ್ಥೆಯಲ್ಲಿ ಪಾಲುದಾ-ರರನ್ನಾಗಿಸಿ, ಈ ಸಂಸ್ಥೆಗೆ ಕಡಿಮೆ ದರಕ್ಕೆ ಭೂಮಿ ಮಂಜೂರು ಮಾಡಿರುವುದು ಮತ್ತು ಲಂಚ ಪಡೆದ ಪ್ರಕರಣದಲ್ಲಿ ಶರ್ಮಾಗೆ ಶಿಕ್ಷೆಯಾಗಿದೆ ಎಂದು ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ವಕೀಲ ಆರ್.ಸಿ.ಕೊಡೆಕಾರ್ ಹೇಳಿದರು. ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಅವರ ಸರ್ಕಾರದೊಂದಿಗೆ ವೈಷಮ್ಯ ಹೊಂದಿದ್ದ ಮಾಜಿ ಐಎಎಸ್ ಅಧಿಕಾರಿ ದೋಷಿ ಮತ್ತು ಶಿಕ್ಷೆಗೆ ಗುರಿಯಾದ ಮೊದಲ ಪ್ರಮುಖ ಪ್ರಕರಣ ಇದು ಎನಿಸಿದೆ.

'ಗೋಮೂತ್ರದಲ್ಲಿ ಔಷಧೀಯ ಗುಣ: ಸಂಶೋಧನೆಯೇ ಆಧಾರ'

ಚೆನ್ನೈ: ಗೋಮೂತ್ರದಲ್ಲಿ ಶಿಲೀಂಧ್ರ, ಬ್ಯಾಕ್ಟೀರಿಯಾ ಮತ್ತು ಉರಿಯೂತ ಪ್ರತಿರೋಧಕ ಗುಣಗಳು ಇವೆ ಎಂದು ತಾವು ಹೇಳಿದ್ದ ಮಾತುಗಳಿಗೆ ಐಐಟಿ-ಮದ್ರಾಸ್ ನಿರ್ದೇಶಕ ಪ್ರೊ. ವಿ. ಕಾಮಕೋಟಿ ಅವರು ಸೋಮವಾರ 'ವೈಜ್ಞಾನಿಕ ಆಧಾರ' ಒದಗಿಸಿದ್ದಾರೆ.

ಜ್ವರಪೀಡಿತರಾಗಿದ್ದ ಸನ್ಯಾಸಿಯೊಬ್ಬರು ಗೋಮೂತ್ರ ಬಳಸಿ 15 ನಿಮಿಷಗಳಲ್ಲಿ ಜ್ವರ ವಾಸಿ ಮಾಡಿಕೊಂಡಿದ್ದರು ಎಂದು ಕಾಮಕೋಟಿ ಅವರು ಜನವರಿ 15ರಂದು ಮಾಡಿದ್ದ ಭಾಷಣದಲ್ಲಿ ಹೇಳಿದ್ದರು. ಈ ಭಾಷಣದ ತುಣುಕು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹಂಚಿಕೆಯಾಗಿತ್ತು.

ಕಾಮಕೋಟಿ ಅವರು ಅವೈಜ್ಞಾನಿಕವಾಗಿ ಮಾತನಾಡಿದ್ದಾರೆ ಎಂದು ಟೀಕಿಸಲಾಗಿತ್ತು.

'ನನ್ನ ಮಾತುಗಳಿಗೆ ವೈಜ್ಞಾನಿಕ ಆಧಾರ ಇದೆಯೇ ಎಂಬ ಪ್ರಶ್ನೆ ಎದುರಾಗಿದೆ. ನಾನು ಐದು ಸಂಶೋಧನಾ ಲೇಖನಗಳನ್ನು ಕಳುಹಿಸುತ್ತಿದ್ದೇನೆ. ಅವುಗಳಲ್ಲಿ ಒಂದು ನೇಚರ್ ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. ಈ ವಿಚಾರವಾಗಿ ಒಂದು ಪೇಟೆಂಟ್ ಕೂಡ ಇದೆ. ಗೋಮೂತ್ರದಲ್ಲಿ ಶಿಲೀಂಧ್ರ, ಬ್ಯಾಕ್ಟೀರಿಯಾ ಮತ್ತು ಉರಿಯೂತ ಪ್ರತಿರೋಧಕ ಗುಣಗಳು ಇವೆ ಎಂಬುದನ್ನು ಲೇಖನಗಳು ಹೇಳುತ್ತವೆ. ಇದು ವೈಜ್ಞಾನಿಕವಾಗಿ ಸಾಬೀತಾಗಿದೆ' ಎಂದು ಕಾಮಕೋಟಿ ಅವರು ಹೇಳಿದ್ದಾರೆ.

ಪ್ರಿಯತಮೆಗಾಗಿ ಮತಾಂತರಗೊಂಡ ಮುಸ್ಲಿಂ ವ್ಯಕ್ತಿ

ಬಸ್ತಿ (ಉತ್ತರ ಪ್ರದೇಶ) (ಪಿಟಿಐ): ಹತ್ತು ವರ್ಷಗಳಿಂದ ಪ್ರೀತಿಸುತ್ತಿರುವ ಹುಡುಗಿಗಾಗಿ 34 ವರ್ಷದ ಮುಸ್ಲಿಂ ವ್ಯಕ್ತಿಯೊಬ್ಬರು ಹಿಂದೂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ತಮ್ಮ ಹೆಸರನ್ನು ಸದ್ದಾಂ ಹುಸೇನ್ ಬದಲಾಗಿ ಶಿವಶಂಕರ್ ಸೋನಿ ಎಂದು ಬದಲಾಯಿಸಿಕೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ಕೋತವಾಲಿ ಠಾಣೆಯ ಠಾಣಾಧಿಕಾರಿ ದೇವೇಂದ್ರ ಸಿಂಗ್ ಅವರು, 'ಮೂರು ದಿನಗಳ ಹಿಂದೆ ಮಹಿಳೆಯೊಬ್ಬರು ಸದ್ದಾಂ ಮತ್ತು ಅವರ ಕುಟುಂಬಸ್ಥರ ವಿರುದ್ಧ ಅತ್ಯಾಚಾರ ಮತ್ತು ಗರ್ಭಪಾತಕ್ಕೆ ಒತ್ತಾಯಿಸುತ್ತಿರುವ ಆರೋಪದ ಮೇಲೆ ದೂರು ದಾಖಲಿಸಿದ್ದರು. ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಲಾಗಿದೆ ಮತ್ತು ಕೊಲ್ಲುವ ಬೆದರಿಕೆ ಹಾಕಲಾಗುತ್ತಿದೆ ಎಂದು ದೂರಿದ್ದರು. ಆದರೆ ಈಗ ಸ್ವಇಚ್ಛೆಯ ಮೇರೆಗೆ ಇಬ್ಬರೂ ಮದುವೆ ಆಗಿದ್ದಾರೆ' ಎಂದರು.

ಅಭಿಪ್ರಾಯ ಸಂಗ್ರಹ ಇಂದು

ಒಂದನೇ ಪುಟದಿಂದ...

ರಾಜ್ಯ ಘಟಕದ ಅಧ್ಯಕ್ಷರ ನೇಮಕ ಕುರಿತ ಅಭಿಪ್ರಾಯ ಸಂಗ್ರಹ ಪ್ರಾಥಮಿಕ ಹಂತದ್ದಾಗಿದೆ. ಚುನಾವಣಾ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಸಮ್ಮುಖದಲ್ಲಿ ಚುನಾವಣೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

'ಜನಪ್ರತಿನಿಧಿಗಳ ಸಭೆಯ ಬಳಿಕ ಸಂಘಟನಾ ಪರ್ವ ಸಭೆಯೂ ನಡೆಯಲಿದೆ. ಸಂಜೆ 7ಕ್ಕೆ ಪ್ರಮುಖ ನಾಯಕರ ಸಮಿತಿ ಸಭೆಯೂ ನಡೆಯಲಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸುದ್ದಿಗಾರರಿಗೆ ತಿಳಿಸಿದರು.

'ಮಂಡಲ ಅಧ್ಯಕ್ಷರ ಚುನಾವಣೆ ಈಗಾಗಲೇ ನಡೆದಿದೆ. ಜಿಲ್ಲಾ ಘಟಕದ ಅಧ್ಯಕ್ಷರ ನಿಯೋಜನೆ ಪ್ರಕ್ರಿಯೆ ನಡೆಯುತ್ತಿದೆ. ಪಕ್ಷದ ಚುನಾವಣಾ ಅಧಿಕಾರಿಗಳು, ಸಹ ಅಧಿಕಾರಿಗಳು, 13 ಜನ ಮೇಲ್ವಿಚಾರಕರ ಸಭೆ ಕೂಡ ನಡೆಯಲಿದೆ. ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆ ಬಗ್ಗೆಯೂ ಚರ್ಚೆಯಾಗಲಿದೆ' ಎಂದು ಅವರು ತಿಳಿಸಿದರು.

ಮಂಗಳವಾರದ ಸಭೆಯಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಅವರ ಬಣದ ಶಾಸಕರು ಭಾಗವಹಿಸು-ತ್ತಾರೊ ಇಲ್ಲವೊ ಎಂಬುದು ಕುತೂಹಲ ಕೆರಳಿಸಿದೆ.

ಮೈಕ್ರೊ ಫೈನಾನ್ಸ್: ವ್ಯವಸ್ಥಾಪಕನ ಬಂಧನ

ಒಂದನೇ ಪುಟದಿಂದ...

ಪ್ರತಿ ತಿಂಗಳು ಸಾಲದ ಕಂತಾಗಿ ₹2,810 ಪಾವತಿಸುತ್ತಿದ್ದ ಮುನಿವೆಂಕಟಮ್ಮ ಅವರಿಗೆ ಹಣಕಾಸಿನ ತೊಂದರೆಯಿಂದ 3 ತಿಂಗಳು ಸಾಲ ಪಾವತಿಸಿರಲಿಲ್ಲ. ಡಿ.20ರಂದು ಮಹಿಳೆ ಮನೆಗೆ ಬಂದಿದ್ದ ರಘು ಸಾಲ ಪಾವತಿಸದಿದ್ದಕ್ಕೆ ನಿಂದಿಸಿ ಎಲ್ಲರೆದುರು ಎಳೆದಾಡಿ ಹಲ್ಲೆ ನಡೆಸಿ, ಬೆದರಿಕೆ ಹಾಕಿದ್ದರು.

ವ್ಯವಸ್ಥಾಪಕನ ಕಿರುಕುಳಕ್ಕೆ ಹೆದರಿದ್ದ ಮುನಿವೆಂಕಟಮ್ಮ ಊರು ಬಿಟ್ಟು, ಮಾಗಡಿ ತಾಲ್ಲೂಕಿನಲ್ಲಿರುವ ಗೊಲ್ಲರ-ಪಾಳ್ಯದಲ್ಲಿರುವ ತಮ್ಮ ತಾಯಿ ಮನೆಗೆ ಹೋಗಿದ್ದರು. ಕೆಲ ದಿನಗಳ ಬಳಿಕ ಮತ್ತೆ ಗ್ರಾಮಕ್ಕೆ ಬಂದಿದ್ದ ರಘು ಸಾಲ ಕಟ್ಟದಿದ್ದರೆ ಬಂಧಿಸುವ ನೋಟಿಸ್ ಅನ್ನು ಬ್ಯಾಂಕ್ ಸೀಲಿನೊಂದಿಗೆ ಬಾಗಿಲಿಗೆ ಅಂಟಿಸಿದ್ದರು ಎಂದು ಪೊಲೀಸರು ಹೇಳಿದರು.

ಸಾಲ ಮರುಪಾವತಿಗೆ ಕಾಲಾವಕಾಶ ಕೋರಿದರೂ ವ್ಯವಸ್ಥಾಪಕ ಕಿರುಕುಳ ಮುಂದುವರಿಸಿದ್ದ. ಸಾಲ ಪಡೆದ ಗ್ರಾಮದ ಇನ್ನೂ ಕೆಲವರು ಕಿರುಕುಳಕ್ಕೆ ಹೆದರಿ ಊರು ಬಿಟ್ಟಿದ್ದರು. ತಮ್ಮ ಮನೆ ಬಾಗಿಲಿಗೆ ನೋಟಿಸ್ ಅಂಟಿಸಿರುವ ವಿಷಯ ತಿಳಿದ ಮುನಿವೆಂಕಟಮ್ಮ, ವ್ಯವಸ್ಥಾಪಕ ರಘು ವಿರುದ್ಧ ಜ.18ರಂದು ದೂರು ದಾಖಲಿಸಿದ್ದರು.

'ಅಮಾಯಕತೆಯೇ ಬಂಡವಾಳ'

'ಕಡು ಬಡವರಾಗಿರುವ ಇರುಳಿಗರು ಊರಂಚಿನಲ್ಲಿ ಬದುಕುವ ಸಣ್ಣ ಸಮುದಾಯ. ತೋಟಗಳ ಕಾವಲು ಕಾಯುವುದು, ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುವುದು ಸೇರಿದಂತೆ ಕೂಲಿ ಮಾಡಿಯೇ ಬದುಕುತ್ತಾರೆ. ಹಾಗಾಗಿ, ಅವರಿಗೆ ಸಾಲ ಕೊಟ್ಟರೆ ಬೆದರಿಸಿ ವಸೂಲಿ ಮಾಡುವುದು ಸುಲಭ ಎಂಬ ಕಾರಣಕ್ಕೆ ಮೈಕ್ರೊ ಫೈನಾನ್ಸ್ ಕಂಪನಿಯವರು ಸುಲಭವಾಗಿ ಇರುಳಿಗರಿಗೆ ಸಾಲ ಕೊಡುತ್ತಾರೆ.

ಕೂಲಿ ಸಿಗದಿದ್ದರೆ ಅಥವಾ ಬೇರೆ ಏನಾದರು ಸಮಸ್ಯೆಯಾದರೆ ಸಾಲದ ಕಂತು ಕಟ್ಟಲು ವಿಫಲರಾದಾಗ, ಕಂಪನಿ ಸಿಬ್ಬಂದಿ ಮನೆಗೆ ಬಂದು ಬೆದರಿಸುತ್ತಾರೆ. ಜಿಲ್ಲೆಯ ಹಲವು ಇರುಳಿಗರ ಕಾಲೊನಿಗಳಲ್ಲಿ ಫೈನಾನ್ಸ್ ಕಂಪನಿ ಸಿಬ್ಬಂದಿ ಕಾಟ ಹೆಚ್ಚಾಗಿದ್ದು, ಕಿರುಕುಳ ತಡೆಯದೆ ಜನ ಊರು ಬಿಡುತ್ತಿದ್ದಾರೆ. ಕನಕಪುರ ತಾಲ್ಲೂಕಿನ ಕೂತಗಾನಹಳ್ಳಿಯಲ್ಲಿ ಇತ್ತೀಚೆಗೆ ವ್ಯಕ್ತಿಯೊಬ್ಬರು ಇದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡರು. ಇಂತಹ ಕಿರುಕುಳದ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಇರುಳಿಗ ಸಮುದಾಯದ ಮುಖಂಡ ಡಾ. ಕೃಷ್ಣಮೂರ್ತಿ ಕೆ.ವಿ ತಿಳಿಸಿದರು.

ಇರುಳಿಗರೇ ಟಾರ್ಗೆಟ್: ಗಮನ ಸೆಳೆದಿದ್ದ 'ಪ್ರಜಾವಾಣಿ'

ವಿವಿಧ ಹೆಸರಿನ ಮೈಕ್ರೊ ಫೈನಾನ್ಸ್ ಕಂಪನಿ ಸಿಬ್ಬಂದಿ ಜಿಲ್ಲೆಯ ಬಡ ಇರುಳಿಗ ಸಮುದಾಯವರನ್ನು ಟಾರ್ಗೆಟ್ ಮಾಡಿ ಸಾಲ ನೀಡುತ್ತಿವೆ. ಕೂಲಿ ಮಾಡಿಯೇ ಬದುಕುವ ಸಮುದಾಯವರಿಗೆ ಕಂಪನಿಯವರು ಕನಿಷ್ಠ ₹25 ಸಾವಿರದಿಂದ ₹1ಲಕ್ಷದವರೆಗೆ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ದಾಖಲೆ ಪಡೆದು ಸುಲಭವಾಗಿ ಸಾಲ ಕೊಡುತ್ತಾರೆ.

ಸಾಲದ ಕಂತು ಮರುಪಾವತಿ ವಿಳಂಬವಾದಾಗ ಮನೆಗೆ ಬಂದು ಕಿರುಕುಳ ನೀಡುವುದು ಸಾಮಾನ್ಯ. ಈ ಕುರಿತು 'ಪ್ರಜಾವಾಣಿ' ಜ.12ರಂದು 'ಜೀವ ಹಿಂಡುತ್ತಿದೆ ಮೈಕ್ರೊ ಫೈನಾನ್ಸ್ ಭೂತ' ಎಂಬ ವಿಶೇಷ ವರದಿ ಪ್ರಕಟಿಸಿತ್ತು. ಸಾಲ ಪಡೆದ ಇರುಳಿಗ ಸಮುದಾಯದವರು ಕಿರುಕುಳ ತಾಳದೆ ಊರು ಬಿಡುತ್ತಿರುವ ಕುರಿತು ಗಮನ ಸೆಳೆದಿತ್ತು.

ಆರೋಪಿ ರಘು ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 123ನೇ ಕಲಂ (ಅಪರಾಧದ ಉದ್ದೇಶದಿಂದ ನೋವುಂಟು ಮಾಡುವುದು), 351ನೇ ಕಲಂ (ಬೆದರಿಕೆ), 352 ನೇ ಕಲಂ (ಶಾಂತಿಗೆ ಭಂಗ ತರಲು ಉದ್ದೇಶ-ಪೂರ್ವಕವಾಗಿ ಅವಮಾನಿಸುವುದು) ಹಾಗೂ 74ನೇ ಕಲಂ (ಮಹಿಳೆ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಆಕೆ ಮೇಲೆ ಹಲ್ಲೆ ಅಥವಾ ಬಲ ಪ್ರಯೋಗ) ಅಡಿ ಪ್ರಕರಣ ದಾಖಲಿಸಿಕೊಂಡು, ಬಂಧಿಸಲಾಗಿದೆ.

ಬರಿಗಾಲಲ್ಲಿ ಅಭ್ಯಾಸ; ಕುರುಬೂರಿನ ಆಟಗಾರ್ತಿ ಚೈತ್ರಾ ಸಾಧನೆ

ವಿಶ್ವಕಪ್ ವಿಜೇತೆಗೆ ಪ್ರಶಂಸೆಯ ಸುರಿಮಳೆ

• ಆರ್. ಜಿತೇಂದ್ರ

ಮೈಸೂರು: ಚೊಚ್ಚಲ ಕೊಕ್ಕೊ ವಿಶ್ವಕಪ್‌ನಲ್ಲಿ ಚಾಂಪಿಯನ್ ಆದ ಭಾರತದ ವನಿತೆಯರ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಕರ್ನಾಟಕದ ಆಟಗಾರ್ತಿ ಚೈತ್ರಾ ಸ್ವಾಗತಕ್ಕೆ ಸ್ವಗ್ರಾಮದಲ್ಲಿ ಸಂಭ್ರಮದ ಸಿದ್ಧತೆ ನಡೆದಿದೆ.

ಚೈತ್ರಾ ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಕುರುಬೂರು ಗ್ರಾಮದ ಗ್ರಾಮೀಣ ಪ್ರತಿಭೆ. ಕೊಕ್ಕೊ ವಿಶ್ವಕಪ್‌ಗೆ ದಕ್ಷಿಣ ಭಾರತದಿಂದ ಆಕೆಯಾದ ಏಕೈಕ ಆಟಗಾರ್ತಿ ಎಂಬ ಶ್ರೇಯ ಆಕೆಯದ್ದು.

ಗ್ರಾಮದ ಕೆ.ಎಂ. ಬಸವಣ್ಣ ಹಾಗೂ ನಾಗರತ್ನ ದಂಪತಿಯ ಪುತ್ರಿ ಚೈತ್ರಾ ಮನೆಯಲ್ಲಿ ಸೋಮವಾರ ಸಂಭ್ರಮ ಮನೆ ಮಾಡಿತ್ತು. ಗ್ರಾಮಸ್ಥರು, ನೆಂಟರಿಷ್ಟರು ಪೋಷಕರನ್ನು ಅಭಿನಂದಿಸಿದರು.

'ಫೈನಲ್‌ನಲ್ಲಿ ಆಕೆಯ ಆಟ ನೋಡಿ ಖುಷಿಯಾಯಿತು. ಮಗಳನ್ನು ಕ್ರೀಡೆಯಲ್ಲಿ ತೊಡಗಿಸಿದ್ದಕ್ಕೆ ಕೆಲವರು ಆಕ್ಷೇಪಿಸಿದ್ದರು. ಆದರೆ, ನಾವು ಅದನ್ನೇ ಆಶೀರ್ವಾದ ಎಂದುಕೊಂಡೆವು. ಮಗಳು ಅದನ್ನೇ ಸವಾಲಾಗಿ ಸ್ವೀಕರಿಸಿ ಆಡಿದ್ದಾಳೆ. ಸಾಧನೆ ಮೂಲಕವೇ ಉತ್ತರ ಕೊಟ್ಟಿದ್ದಾಳೆ' ಎಂದು ನಾಗರತ್ನ ಭಾವುಕರಾದರು.

'ಎಂಟು ವರ್ಷದಿಂದ ಅವಳು ಕೊಕ್ಕೊ ಆಡುತ್ತಿದ್ದಾಳೆ. ಅವಳಿಗೆ ಶೂ ಕೊಡಿಸುವಷ್ಟು ಆರ್ಥಿಕ ಶಕ್ತಿ ನಮಗೆ ಇರಲಿಲ್ಲ. ನಿರಂತರ ಆಟದಿಂದ ಆಕೆಯ ಪಾದಗಳು ಸೀಳುತ್ತಿದ್ದವು. ಅದಕ್ಕೆ ರಾತ್ರಿಯೆಲ್ಲ ಔಷಧಿ ಹಚ್ಚಿದ್ದೇವೆ. ಅದೆಲ್ಲವನ್ನೂ ಲೆಕ್ಕಿಸದೇ ಸಾಧನೆ ಮಾಡಿದ್ದಾಳೆ' ಎಂದು ತಂದೆ ಬಸವಣ್ಣ ಮಗಳ ಸಾಧನೆಗೆ ಹೆಮ್ಮೆ ವ್ಯಕ್ತಪಡಿಸಿದರು.

'ಕುರುಬೂರು ವಿದ್ಯಾದರ್ಶಿನಿ ಶಾಲೆಯಲ್ಲಿ ಆಕೆ ಮತ್ತು ಸಂಗಡಿಗರು ನಿರಂತರ ಅಭ್ಯಾಸ ಮಾಡುತ್ತಿದ್ದಾರೆ. ಅವಳಂತೆ ಅವಳ ಸಂಗಡಿಗರೂ ಸಾಧನೆ ಮಾಡಲಿ. ಮಂಜುನಾಥ್ ಮಾಸ್ಟರ್, ವಸಂತಕುಮಾರಿ ಅವರು ಮಗಳಿಗೆ ನೀಡಿದ ಮಾರ್ಗದರ್ಶನವನ್ನು ಮರೆಯುವುದಿಲ್ಲ' ಎಂದರು.

ಸದ್ಯ ಮಂಡ್ಯ ಜಿಲ್ಲೆಯ ಪಾಂಡವಪುರದ ಶ್ರೀ ಶಂಭುಲಿಂಗೇಶ್ವರ ಕಾಲೇಜಿನಲ್ಲಿ ಬಿಪಿ.ಇಡಿ ಓದುತ್ತಿರುವ ಚೈತ್ರಾ ಈವರೆಗೆ 30ಕ್ಕೂ ಹೆಚ್ಚು ಟೂರ್ನಿಗಳಲ್ಲಿ ಕರ್ನಾಟಕವನ್ನು ಪ್ರತಿ-ನಿಧಿಸಿದ್ದು, 11 ಚಿನ್ನ ಸಹಿತ ಹಲವು ಪದಕಗಳಿಗೆ ಕೊರಳೊಡ್ಡಿದ್ದಾರೆ.

ವಿಶ್ವಕಪ್ ಗೆಲುವಿನ ಬಳಿಕ ಭಾರತದ ಬಾವುಟ ಹಿಡಿದು ಸಂಭ್ರಮಿಸಿದ ಚೈತ್ರಾ

ಕ್ರೀಡಾಪಟುಗಳ ಗ್ರಾಮ ಕುರುಬೂರು

ನಾಡಿಗೆ ಸಾಲುಸಾಲು ಕೊಕ್ಕೊ ಪಟುಗಳನ್ನು ಕೊಡುಗೆಯಾಗಿ ಕೊಟ್ಟ ಕೀರ್ತಿ ತಿ. ನರಸೀಪುರ ತಾಲ್ಲೂಕಿನ ಕುರುಬೂರಿನದ್ದು. ಅಲ್ಲಿನ ವಿದ್ಯಾದರ್ಶಿನಿ ಕಾನ್ವೆಂಟ್‌ನ ಅಂಗಳ ಚೈತ್ರಾರಂತಹ ಹತ್ತಾರು ಕ್ರೀಡಾಪಟುಗಳ ಭವಿಷ್ಯ ರೂಪಿಸಿದೆ. ಮಂಜುನಾಥ್‌ರಂತಹ ತರಬೇತುದಾರರ ಗರಡಿಯಲ್ಲಿ ಕ್ರೀಡಾಪಟುಗಳು ಬೆಳಗುತ್ತಿದ್ದಾರೆ. ಬೆಳಿಗ್ಗೆ 6ಕ್ಕೆ ಕೊಕ್ಕೊ ಅಭ್ಯಾಸ ಆರಂಭಗೊಂಡರೆ 9ರವರೆಗೂ ಮುಂದುವರಿಯುತ್ತದೆ. ಮತ್ತೆ ಸಂಜೆಯೂ ಅಭ್ಯಾಸ ನಿರಂತರವಾಗಿರುತ್ತದೆ.

10.13 ಕೋಟಿ ಮಂದಿ ಭಾಗವಹಿಸುವ ನಿರೀಕ್ಷೆ: ಹದಿಮೂರು ಅಖಾಡಗಳಿಗೆ ಮನವಿ

'ಪುಣ್ಯಸ್ನಾನ: ನಿಗದಿಪಡಿಸಿದ ಸಮಯ ಅನುಸರಿಸಿ'

'ಕಳಶ್ ಯಾತ್ರಾ' ಸಮಾರಂಭದಲ್ಲಿ ಕಳಸ ಹೊತ್ತು ಮಹಿಳೆಯೊಬ್ಬರು ಸಾಗಿದರು

ಪ್ರಯಾಗರಾಜ್‌ನ ಗಂಗಾ ನದಿ ದಡದಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಅಂಗವಾಗಿ ಗಂಗಾ ನದಿಯಲ್ಲಿ ಪುಣ್ಯಸ್ನಾನ ಭಾಗಿಯಾದ ಭಕ್ತರು — ಪಿಟಿಐ ಚಿತ್ರಗಳು

ಮಹಾಕುಂಭ ನಗರ (ಪಿಟಿಐ): ಪ್ರಯಾಗರಾಜ್‌ನ ಗಂಗಾನದಿ ದಡದಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಮುಂದಿನ ಪುಣ್ಯಸ್ನಾನ 'ಮೌನಿ ಅಮಾವಾಸ್ಯೆ'ಯಂದು ನಿಗದಿಯಾಗಿದ್ದು, 10 ಕೋಟಿಗೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಸಂಗಮದಲ್ಲಿ 'ಪುಣ್ಯಸ್ನಾನ'ದ ವೇಳೆ ನಿಗದಿಪಡಿಸಿದ ಸಮಯ ಅನುಸರಿಸಬೇಕು ಎಂದು 13 ಅಖಾಡಾಗಳಿಗೆ ಮನವಿ ಮಾಡಲಾಗಿದೆ.

ಜ.29ರಂದು 'ಮೌನಿ ಅಮಾವಾಸ್ಯೆ' ಇದ್ದು, 144 ವರ್ಷಗಳ ಬಳಿಕ ಗ್ರಹಗಳು ಸಂಯೋಜನೆಯಾಗುತ್ತದೆನ್ನುವ ನಂಬಿಕೆಯ ಕಾರಣ ಆ ದಿನವನ್ನು 'ಅತ್ಯಂತ ಪವಿತ್ರ' ಎಂದು ಭಾವಿಸಲಾಗಿದೆ. ಆ ದಿನ ನಡೆಯುವ 'ಪುಣ್ಯಸ್ನಾನ'ದ ವೇಳೆ ಗೊಂದಲ ತಡೆಯುವುದಕ್ಕಾಗಿ, ಶೈವ, ವೈಷ್ಣವ ಸಂಪ್ರದಾಯವನ್ನು ಅನುಸರಿಸುವ 13 ಅಖಾಡಗಳನ್ನು ಒಳಗೊಂಡ 'ಅಖಿಲ ಭಾರತೀಯ ಅಖಾಡ ಪರಿಷತ್ (ಎಬಿಎಪಿ)ಯು ಸಭೆ ನಡೆಸಿ, ಈ ನಿರ್ಧಾರ ಪ್ರಕಟಿಸಿದೆ.

'ಪ್ರತಿ ಅಖಾಡವು ನಿಗದಿಪಡಿಸಿದ ಸಮಯಕ್ಕಿಂತ ಐದು ನಿಮಿಷ ಮುಂಚಿತವಾಗಿ ಘಾಟ್‌ನಿಂದ ಹೊರಹೋಗಬೇಕು' ಎಂದು ಎಬಿಎಪಿ ಮುಖ್ಯಸ್ಥ ಮಹಂತ್ ರವೀಂದ್ರಪುರಿ ತಿಳಿಸಿದರು.

ಕಿನ್ನರ ಅಖಾಡದಲ್ಲಿ ಬೆಂಕಿ

ಸೆಕ್ಟರ್ 16ರಲ್ಲಿರುವ 'ಕಿನ್ನರ ಅಖಾಡ' ಶಿಬಿರದಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿತು. 'ಬೆಳಿಗ್ಗೆ 9.30ರ ಸುಮಾರಿಗೆ ಅನ್ನ ಕ್ಷೇತ್ರದಲ್ಲಿ ಹೊಗೆ ಕಾಣಿಸಿಕೊಂಡ ತಕ್ಷಣವೇ ಕಂಟ್ರೋಲ್ ರೂಂಗೆ ಮಾಹಿತಿ ನೀಡಿದರು. ಅಗ್ನಿಶಾಮಕ ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ, ಬೆಂಕಿ ನಂದಿಸಿದರು' ಎಂದು ಅಧಿಕಾರಿಗಳು ತಿಳಿಸಿದರು. ಪರಿಶೀಲನೆ ವೇಳೆ 'ಶ್ರೀ ಹರಿ ದಿವ್ಯಾ ಸಾಧ್ನಾ ಪೀಠ ಶಿಬಿರ'ದಲ್ಲಿ ಬೆಂಕಿ ಕಾಣಿಸಿದ್ದು, ಪ್ರಾಣಹಾನಿ ಸಂಭವಿಸಿಲ್ಲ' ಎಂದು ತಿಳಿಸಿದರು.

ಸಾತ್ವಿಕ್–ಚಿರಾಗ್ ಜೋಡಿಗೆ ಪ್ರಶಸ್ತಿ ಕನಸು

ಜಕಾರ್ತ, ಇಂಡೊನೇಷ್ಯಾ (ಪಿಟಿಐ): ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಆರಂಭ-ವಾಗಲಿರುವ ಇಂಡೊನೇಷ್ಯಾ ಓಪನ್ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಪ್ರಸಕ್ತ ಋತುವಿನ ಮೊದಲ ಪ್ರಶಸ್ತಿ ಜಯಿಸುವತ್ತ ಈ ಜೋಡಿ ಕಣ್ಣು ನೆಟ್ಟಿದೆ. ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಹಾಗೂ ಮಹಿಳೆಯರ ಸಿಂಗಲ್ಸ್ ನಲ್ಲಿ ಪಿ.ವಿ. ಸಿಂಧು ಅವರು ಕೂಡ ಪ್ರಶಸ್ತಿ ಬರವನ್ನು ನೀಗಿಸಿಕೊಳ್ಳುವ ಛಲದಲ್ಲಿ-ದ್ದಾರೆ.

ವಿಶ್ವ ರ್‍ಯಾಂಕ್‌ನಲ್ಲಿ 9ನೇ ಸ್ಥಾನದಲ್ಲಿ-ರುವ ಸಾತ್ವಿಕ್ -ಚಿರಾಗ್ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ.ಕಳೆದ ಮಲೇಷ್ಯಾ ಓಪನ್ ಸೂಪರ್ 1000 ಮತ್ತು ಇಂಡಿಯಾ ಓಪನ್ ಸೂಪರ್ 750 ಟೂರ್ನಿಗಳಲ್ಲಿ ಅವರು ಸೆಮಿಫೈನಲ್ ಪ್ರವೇಶಿಸಿದ್ದರು. ಈ ಜೋಡಿಯು 32ರ ಘಟ್ಟದಲ್ಲಿ ಚೈನಿಸ್ ತೈಪೆಯ ಚೆನ್ ಝಿ ರೇ ಮತ್ತು ಯೂ ಚೀ ಲಿನ್ ವಿರುದ್ಧ ಕಣಕ್ಕಿಳಿಯುವರು.

ಆದರೆ ಸಿಂಗಲ್ಸ್ ವಿಭಾಗದಲ್ಲಿ ಹೆಚ್ಚು ಕಠಿಣ ಪೈಪೋಟಿಯು ಭಾರತಕ್ಕೆ ಎದುರಾಗಲಿದೆ. 23 ವರ್ಷದ ಲಕ್ಷ್ಯ ಅವರು ಹೋದ ವರ್ಷ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ತನುಷ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ತನುಷ್ ಬಿ.ಸಿ., ಎಐಟಿಎ 12 ವರ್ಷದೊಳಗಿ-ನವರ ಹರಿಯಾಣದ ರೋಹ್ತಕ್‌ನಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಟೆನಿಸ್ ಸರಣಿ ಟೂರ್ನಿಯ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಡಬಲ್ ಸಾಧನೆಗೆ ಪಾತ್ರರಾಗಿದ್ದಾನೆ.

10 ವರ್ಷ ವಯಸ್ಸಿನ ತನುಷ್ ಸಿಂಗಲ್ಸ್ ಫೈನಲ್‌ನಲ್ಲಿ ಲಕ್ಷ್ಯ ತ್ರಿಪಾಠಿ ಮೇಲೆ 6–4, 6–1ರಲ್ಲಿ ಜಯಗಳಿಸಿದ. ಇದಕ್ಕೆ ಮೊದಲು ಡಬಲ್ಸ್ ಫೈನಲ್‌ನಲ್ಲಿ ಮಹಾರಾಷ್ಟ್ರದ ಆರವ್ ಜೊತೆಗೂಡಿ 4–6, 6–4, 10–7ರಲ್ಲಿ ಆಧಿಶ್ ಪಿಎಂ–ತೇಜವೀರ್ ಸಿಂಗ್ ಜೋಡಿ ಮೇಲೆ ಜಯಗಳಿಸಿದ್ದ.

ಆಸ್ಟ್ರೇಲಿಯನ್ ಓಪನ್ • ಸ್ವಿಟೋಲಿನಾ ಮುನ್ನಡೆ • ಟಿಯೆನ್ ಸವಾಲು ಅಂತ್ಯ

ಕ್ವಾರ್ಟರ್‌ಗೆ ಶ್ವಾಂಟೆಕ್, ಸಿನ್ನರ್

ಎಲಿನಾ ಸ್ವಿಟೋಲಿನಾ ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ ಮತ್ತೆ ಚರ್ಚೆಯ ಕೇಂದ್ರವಾದರು. ಒಂದೆಡೆ ಬಿಸಿಲಿನ ಮಟ್ಟ ಏರುತ್ತಿದ್ದು ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರಿಗೆ ಪಂದ್ಯದ ವೇಳೆ ಆರೈಕೆ ಬೇಕಾಯಿತು. ಇನ್ನೊಂದೆಡೆ, ಪೋಲೆಂಡ್‌ನ ಇಗಾ ಶ್ವಾಂಟೆಕ್ ಲೀಲಾಜಾಲ ಗೆಲುವಿನೊಡನೆ ಎಂಟರ ಘಟ್ಟಕ್ಕೆ ದಾಪುಗಾಲಿಟ್ಟರು.

ಆದರೆ ಅಮೆರಿಕದ ಹದಿಹರೆಯದ ಕ್ವಾಲಿಫೈಯರ್ ಲರ್ನರ್ ಟಿಯೆನ್ ಅವರ ರೋಚಕ ಯಶಸ್ಸಿನ ಓಟಕ್ಕೆ ಇಟಲಿಯ ಲೊರೆಂಝೊ ಸೊನೆಗೊ ವಿರಾಮ ಹಾಕಿದರು. ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರು ವೆರೊನಿಕಾ ಕುದೆರ್‌ಮೆಟೋವಾ ಅವರನ್ನು ಸೋಲಿಸಿದ ನಂತರ ರಷ್ಯದ ಆಟಗಾರ್ತಿಗೆ ಹಸ್ತಲಾಘವಕ್ಕೆ ನಿರಾಕರಿಸಿದರು. 28ನೇ ಶ್ರೇಯಾಂಕದ ಸ್ವಿಟೋಲಿನಾ 6-4, 6-1 ರಿಂದ ಗೆದ್ದರು. ಇವೆರಡು ದೇಶಗಳ ನಡುವೆ ಯುದ್ಧ ನಡೆಯುತ್ತಿದೆ.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಐದು ಪ್ರಶಸ್ತಿಗಳ ಒಡತಿ ಇಗಾ ಶ್ವಾಂಟೆಕ್ ಸೋಮವಾರ 6-0, 6-1 ರಿಂದ 'ಲಕ್ಕಿ ಲೂಸರ್' ಇವಾ ಲಿಸ್ ಅವರನ್ನು ಸದೆಬಡಿದು ಎಂಟರ ಘಟ್ಟ ತಲುಪಿದರು.

ಜೊಕೊವಿಚ್ ಅವರು ಭಾನುವಾರ ಸಮಾಧಾನದೊಡನೆ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ. ತಮ್ಮನ್ನು ಮತ್ತು ಅಭಿಮಾನಿಗಳನ್ನು ಚಾನೆಲ್ 9 ವಾಹಿನಿಯ ಕ್ರೀಡಾ ನಿರೂಪಕ ಟೋನಿ ಜೋನ್ಸ್ ಲೇವಡಿ ಮಾಡಿದ್ದಾರೆಂದು ದೂರಿ ಸರ್ಬಿಯಾದ ಆಟಗಾರ ಬಹಿರಂಗ ಕ್ಷಮೆಗೆ ಪಟ್ಟುಹಿಡಿದಿದ್ದರು. ನಾಲ್ಕನೇ ಸುತ್ತಿನ ಪಂದ್ಯದ ನಂತರ ಸಂದರ್ಶನಕ್ಕೂ ನಿರಾಕರಿಸಿದ್ದರು. ಸೋಮವಾರ ನೇರಪ್ರಸಾರದ ವೇಳೆ ಟೋನಿ ಕ್ಷಮೆ ಯಾಚಿಸಿದರು.

ಈ ಕುರಿತು ಜೊಕೊವಿಚ್ ಅವರು ಎಕ್ಸ್‌ನಲ್ಲಿ ಕಿರು ವಿಡಿಯೊ ಬಿಡುಗಡೆ ಮಾಡಿದ್ದು, ಅದು ಸೈಟ್‌ನ ಮಾಲೀಕ ಎಲಾನ್ ಮಸ್ಕ್ ಗಮನವನ್ನೂ ಸೆಳೆದಿದೆ. 'ಬಹಿರಂಗವಾಗಿ ಕೇಳಿದ ಕ್ಷಮೆಯನ್ನು ನೊವಾಕ್ ಒಪ್ಪಿಕೊಂಡಿದ್ದಾರೆ. ಅವರು ಈಗ ಮುಂದಿನ ಪಂದ್ಯದ ಕಡೆ ಚಿತ್ತ ಹರಿಸಲಿದ್ದಾರೆ' ಎಂದು ಆಯೋಜಕರು ಹೇಳಿದ್ದಾರೆ.

ಇದೇ ಟೂರ್ನಿಯಲ್ಲಿ 2022ರಲ್ಲಿ ಕೋವಿಡ್ ಲಸಿಕೆ ಪಡೆಯಲು ನಿರಾಕರಿಸಿ ನಿಯಮ ಉಲ್ಲಂಘಿಸಿದ್ದಕ್ಕೆ ಜೊಕೊವಿಚ್ ಅವರನ್ನು ವಾಪಸು ತವರಿಗೆ ಕಳಿಸ ಲಾಗಿತ್ತು. ಗಡಿಪಾರು ಮೊದಲು ತಮಗೆ ನೀಡಿದ್ದ ಆಹಾರದಲ್ಲಿ ವಿಷಕಾರಿ ಅಂಶಗಳಿದ್ದವು ಎಂದು ಅವರು ಆರೋಪಿಸಿದ್ದರು.

ಸಿನ್ನರ್ ಮುನ್ನಡೆ:

ಅಗ್ರಮಾನ್ಯ ಆಟಗಾರ ಸಿನ್ನರ್ 6-3, 3-6, 6-3, 6-2 ರಿಂದ 13ನೇ ಶ್ರೇಯಾಂಕದ ಹೋಲ್ಗರ್ ರೂನ್ (ಡೆನ್ಮಾರ್ಕ್) ಅವರನ್ನು ಸೋಲಿಸಿದರು. ಬಿಸಿಲಿನ ಪ್ರಖರತೆ ಎರಡನೇ ದಿನವೂ ಜೋರಾಗಿದ್ದು, ಸಿನ್ನರ್ ಮೂರನೇ ಸೆಟ್‌ನಲ್ಲಿ ಚಿಕಿತ್ಸೆ ಪಡೆಯಲು ಕೆಲಕಾಲ ಕೋರ್ಟ್‌ನಿಂದಾಚೆ ನಡೆದರು.

ಸ್ಥಳೀಯ ಭರವಸೆ ಅಲೆಕ್ಸ್ ಡಿ ಮಿನೋರ್ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಅಲೆಕ್ಸ್ ಮೈಕೆಲ್ಸನ್ ಅವರನ್ನು 6-0, 7-6 (7-5), 6-3 ರಿಂದ ಸೋಲಿಸಿದರು.

ಸ್ವಿಟೋಲಿನಾ ಅವರ ಪತಿ, 38 ವರ್ಷ ವಯಸ್ಸಿನ ಗೇಲ್ ಮಾನ್ಫಿಲ್ಸ್ 16ರ ಘಟ್ಟದ ಪಂದ್ಯದ ಅರ್ಧದಲ್ಲಿ ನಿವೃತ್ತರಾದರು. ಬಳಲಿದಂತೆ ಕಂಡ ಅವರು 21ನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರಿಗೆ ನಾಲ್ಕನೇ ಸೆಟ್‌ನ ಆರಂಭದಲ್ಲಿ ಪಂದ್ಯ ಬಿಟ್ಟುಕೊಟ್ಟರು. ಆಗ ಶೆಲ್ಟನ್ 7-6 (7-3), 6-7 (3-7), 7-6 (7-2), 1-0ಯಿಂದ ಮುಂದಿದ್ದರು.

ಲೊರೆಂಝೊ ಸೊನೆಗೊ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 19 ವರ್ಷ ವಯಸ್ಸಿನ ಟಿಯೆನ್ ಅವರನ್ನು 6-3, 6-2, 3-6, 6-1ರಿಂದ ಹಿಮ್ಮೆಟ್ಟಿಸಿದರು. ಟಿಯೆನ್, ಎರಡನೇ ಸುತ್ತಿನಲ್ಲಿ ಮೆಡ್ವೆಡೇವ್ ಅವರಿಗೆ ಆಘಾತ ನಿಡಿದ್ದರು.

ದಕ್ಷಿಣ ಕನ್ನಡಕ್ಕೆ ಮಣಿದ ಪೊಲೀಸ್ ತಂಡ

ಕರ್ನಾಟಕ ಕ್ರೀಡಾಕೂಟದ ಬ್ಯಾಸ್ಕೆಟ್‌ಬಾಲ್: ಧಾರವಾಡ ಮಹಿಳಾ ತಂಡಕ್ಕೆ ಜಯ

• ವಿಕ್ರಂ ಕಾಂತಿಕೆರೆ

ಮಂಗಳೂರು: ಆರಂಭದಲ್ಲಿ ಪಾಯಿಂಟ್ಸ್ ಗಳಿಸಲು ತಡಕಾಡಿದ ಆತಿಥೇಯ ದಕ್ಷಿಣ ಕನ್ನಡ ಜಿಲ್ಲಾ ತಂಡ ನಂತರ ಪಾರಮ್ಯ ಮೆರೆದು ಕರ್ನಾಟಕ ಕ್ರೀಡಾಕೂಟದ ಬ್ಯಾಸ್ಕೆಟ್‌ಬಾಲ್‌ನಲ್ಲಿ ಸೋಮವಾರ ಅಮೋಘ ಜಯದ ಮೂಲಕ ಶುಭಾರಂಭ ಮಾಡಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ, ದಕ್ಷಿಣ ಕನ್ನಡ-ಉಡುಪಿ ಜಿಲ್ಲಾಡಳಿತ ಆಯೋಜಿಸಿರುವ ಕ್ರೀಡಾಕೂಟದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ತಂಡ ಕರ್ನಾಟಕ ಪೊಲೀಸ್ ತಂಡದ ವಿರುದ್ಧ 76-59ರಲ್ಲಿ ಗೆಲುವು ಸಾಧಿಸಿತು.

ಮಂಗಳ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಆರಂಭದಲ್ಲೇ ಕ್ರಮವಾಗಿ 3 ಮತ್ತು 2 ಪಾಯಿಂಟ್ ಗಳಿಸಿದ ಲಕ್ಷ್ಮಣ ಗಸ್ತಿ ಅವರು ಪೊಲೀಸ್ ಪಾಳಯದಲ್ಲಿ ಸಂಭ್ರಮ ಮೂಡಿಸಿದರು. ಏಳನೇ ನಿಮಿಷದಲ್ಲಿ ಲಕ್ಷ್ಮಣ ಗಸ್ತಿ ಮತ್ತೊಮ್ಮೆ 3 ಪಾಯಿಂಟ್ ಗಳಿಸಿ ಎದುರಾಳಿಗಳಿಗೆ ಆತಂಕ ಹೆಚ್ಚಿಸಿದರು. ಆತಿಥೇಯರಿಗೆ ಎಂಟನೇ ನಿಮಿಷದಲ್ಲಿ ಪ್ರದೀಪ್ ದಿಲೀಪ್ 3 ಪಾಯಿಂಟ್‌ಗಳೊಂದಿಗೆ ಯಶಸ್ಸು ತಂದುಕೊಟ್ಟರು. ಪೊಲೀಸ್ ತಂಡ ಆಗಲೇ 16 ಪಾಯಿಂಟ್ ಕಲೆ ಹಾಕಿತ್ತು.

ಖಾತೆ ತೆರೆದ ನಂತರ ಆಕ್ರಮಣಕ್ಕೆ ಇಳಿದ ದಕ್ಷಿಣ ಕನ್ನಡ ಆದಿತ್ಯ ಮಹಾಲೆ ಅವರ ಚುರುಕಿನ ಪಾಸ್‌ಗಳ ಮೂಲಕ ಪಾಯಿಂಟ್‌ಗಳನ್ನು ಗಳಿಸುತ್ತ ಸಾಗಿತು. ಪ್ರದೀಪ್ ಮತ್ತೊಮ್ಮೆ 3 ಪಾಯಿಂಟ್ ತಂದುಕೊಟ್ಟು ತಂಡದಲ್ಲಿ ಮುನ್ನಡೆಯ ಭರವಸೆ ಚಿಗುರಿಸಿದರು. ಎರಡನೇ ಕ್ವಾರ್ಟರ್‌ನ ಆರಂಭದಲ್ಲೇ ಆದಿತ್ಯ ಮಹಾಲೆ 3 ಪಾಯಿಂಟ್ ಗಳಿಸಿದರು. ಈ ಸಂದರ್ಭದಲ್ಲಿ ಲಕ್ಷ್ಮಣ ಗಸ್ತಿ ಮತ್ತೆ ಮಿಂಚಿದರು. ಪಟ್ಟುಬಿಡದ ದಕ್ಷಿಣ ಕನ್ನಡ ಮೊದಲಾರ್ಧದಲ್ಲಿ 35-32ರ ಮುನ್ನಡೆ ಸಾಧಿಸಿತು.

ಸೌಕಿನ್ ಮಿಂಚು: ದ್ವಿತೀಯಾರ್ಧದಲ್ಲಿ ದಕ್ಷಿಣ ಕನ್ನಡ ಎದುರಾಳಿಗಳನ್ನು ಯಶಸ್ವಿಯಾಗಿ ಕಟ್ಟಿಹಾಕಿತು. ಸೌಕಿನ್ ಶೆಟ್ಟಿ ಮತ್ತು ಆದಿತ್ಯ ಅವರು ಡ್ರಿಬ್ಲಿಂಗ್, ಶೂಟಿಂಗ್ ಮೂಲಕ ಮಿಂಚಿದರು. ಸೌಕಿನ್ ಒಟ್ಟಾರೆ 18 ಮತ್ತು ಆದಿತ್ಯ 13 ಪಾಯಿಂಟ್ ಗಳಿಸಿದರು. ಪೊಲೀಸ್ ಪರ ಲಕ್ಷ್ಮಣ್ 28 ಪಾಯಿಂಟ್ ಗಳಿಸಿದರು.

ಡಿವೈಇಎಸ್‌ಗೆ ಗೆಲುವು: ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಮೌಂಟ್ಸ್ ತಂಡವನ್ನು ಮಂಡ್ಯದ ಡಿವೈಇಎಸ್ 44-39ರಲ್ಲಿ ಸೋಲಿಸಿತು. ಲಾವಣ್ಯ ಮತ್ತು ಮಂದಾರ ಅವರ ಚಾಕಚಕ್ಯತೆಯ ಆಟದಿಂದ ಮಂಡ್ಯ ಪಾಯಿಂಟ್‌ಗಳನ್ನು ಕಲೆಹಾಕಿತು. ಮೊದಲಾರ್ಧದಲ್ಲಿ 11-18ರ ಹಿನ್ನಡೆಯಲ್ಲಿದ್ದ ತಂಡ ದ್ವಿತೀಯಾರ್ಧದಲ್ಲಿ ಶಿಸ್ತಿನ ಆಟ ಪ್ರದರ್ಶಿಸಿತು. ಲಾವಣ್ಯ 12 ಮತ್ತು ಮಂದಾರ 10 ಪಾಯಿಂಟ್ ಗಳಿಸಿದರೆ ಮೌಂಟ್ ತಂಡಕ್ಕೆ ಪಾವನಿ 14 ಪಾಯಿಂಟ್ ತಂದುಕೊಟ್ಟರು. ಬೀಗಲ್ಸ್ ಎದುರಿನ ಪಂದ್ಯದಲ್ಲಿ ಮಂಡ್ಯ 41-14ರಲ್ಲಿ ಗೆದ್ದಿತು.

ಪುರುಷರ ವಿಭಾಗದ ಇನ್ನೊಂದು ಪಂದ್ಯದಲ್ಲಿ ಡಿವೈಇಎಸ್ ಬೆಂಗಳೂರು 49-35ರಲ್ಲಿ ಎಂಎನ್‌ಕೆ ರಾವ್ ತಂಡ ವಿರುದ್ಧ ಜಯಗಳಿಸಿತು.

ಕರ್ನಾಟಕ ಪೊಲೀಸ್ ತಂಡದ ವಿರುದ್ಧದ ಪಂದ್ಯದಲ್ಲಿ ದಕ್ಷಿಣ ಕನ್ನಡದ ಸೌಕಿನ್ ಶೆಟ್ಟಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಶೂಟಿಂಗ್: ಮೇಘನಾಗೆ 'ಡಬಲ್' ಚಿನ್ನ

ಬೆಂಗಳೂರಿನಲ್ಲಿ ನಡೆದ ಶೂಟಿಂಗ್‌ನಲ್ಲಿ ಮೇಘನಾ ಸಜ್ಜನವರ ಎರಡು ಚಿನ್ನ ಗೆದ್ದು ಸಂಭ್ರಮಿಸಿದರು. 50 ಮೀ ರೈಫಲ್ ಪ್ರೋನ್‌ನಲ್ಲಿ ಮೊದಲಿಗರಾದ ಅವರು 50 ಮೀ ರೈಫಲ್ ತ್ರಿ ಪೊಸಿಷನ್‌ನಲ್ಲೂ ಬಂಗಾರ ಗೆದ್ದುಕೊಂಡರು. 50 ಮೀ ರೈಫಲ್ ತ್ರಿ ಪೊಸಿಷನ್‌ನಲ್ಲಿ ತಿಲೋತ್ತಮ ಸೇನ್ ಮತ್ತು ಕಿರಣಾ ನಂದನ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ರೈಫಲ್ ಪ್ರೋನ್‌ನಲ್ಲಿ ಬೀನಾ ರಾಣಿ ಮತ್ತು ತಿಲೋತ್ತಮ ಸೇನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಪುರುಷರ 50 ಮೀ ರೈಫಲ್ ಪ್ರೋನ್‌ನಲ್ಲಿ ಶಶಿಕಿರಣ್ ಚಿನ್ನ ಗೆದ್ದುಕೊಂಡರು. ರಯಾನ್ ಬೇಗ್ ಬೆಳ್ಳಿ ಮತ್ತು ರೋನಕ್ ಪಟೇಲ್ ಕಂಚಿನ ಪದಕ ಗೆದ್ದರು. 50 ಮೀ ರೈಫಲ್ ಪ್ರೋನ್ ತಂಡ ವಿಭಾಗದಲ್ಲಿ ಸೂರ್ಯ, ಪುನೀತ್ ಮತ್ತು ಆಶಿಶ್ ಚಿನ್ನ ಗೆದ್ದುಕೊಂಡರು. ಚಂದನ್, ರಯಾನ್ ಮತ್ತು ಅರ್ಷದ್ ಬೆಳ್ಳಿ, ಸಂದೀಪ್, ರೋನಕ್ ಮತ್ತು ಮುಸೇಬ್ ಕಂಚಿನ ಪದಕ ಗಳಿಸಿದರು.

ವೇದಾಂಶ್‌ಗೆ ಪ್ರಶಸ್ತಿ

ಬೆಂಗಳೂರು ನಗರ ಜಿಲ್ಲೆಯ ಸ್ಕಂದ ಪಸನ್ನ ವಿರುದ್ಧ ನೇರ ಸೆಟ್‌ಗಳಿಂದ ಗೆದ್ದ ಅದೇ ಜಿಲ್ಲೆಯ ವೇದಾಂಶ್ ರೆಡ್ಡಿಯಾರ್ ಟೆನಿಸ್ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಮಣಿಪಾಲದಲ್ಲಿ ನಡೆದ ಪಂದ್ಯದಲ್ಲಿ ವೇದಾಂಶ್ 6-4, 7-5ರಲ್ಲಿ ಜಯ ಸಾಧಿಸಿದರು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಮಂಡ್ಯ ಜಿಲ್ಲೆಯ ಅರ್ಜುನ್ ಸೂರಿ ಬೆಂಗಳೂರು ನಗರ ಜಿಲ್ಲೆಯ ಮಂದೀಪ್ ರೆಡ್ಡಿ ಅವರನ್ನು ಮಣಿಸಿದರು.

ಪುರುಷರ ಡಬಲ್ಸ್ ವಿಭಾಗದ ಪ್ರಶಸ್ತಿ ದಾವಣಗೆರೆ ಜಿಲ್ಲೆಯ ಆಲೋಕ್ ಆರಾಧ್ಯ ಮತ್ತು ಬಸವರಾಜ ಕೆ ಅವರ ಪಾಲಾಯಿತು. ವೇದಾಂಶ್ ರೆಡ್ಡಿ ಮತ್ತು ಸ್ಕಂದ ಪ್ರಸನ್ನ ರಾವ್ ವಿರುದ್ಧ ಈ ಜೋಡಿ 7-5, 7-5ರಲ್ಲಿ ಜಯ ಗಳಿಸಿತು.

ರಣಜಿ ತಂಡ: ಮಯಂಕ್ ನಾಯಕ, ಮನೀಷ್‌ಗೆ ಕೊಕ್

ತಂಡಕ್ಕೆ ದೇವದತ್ತ, ಪ್ರಸಿದ್ಧ ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು:ವಿಜಯ್ ಹಜಾರೆ ಟ್ರೋಫಿ ಜಯಿಸಿ ಬಂದಿರುವ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಹಂತದಲ್ಲಿ ಕಣಕ್ಕಿಳಿಯಲು ಸಿದ್ಧವಾಗಿದೆ. ಇದೇ 23ರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರನೇ ಸುತ್ತಿನ ಪಂದ್ಯ ನಡೆಯಲಿದೆ. ಪಂಜಾಬ್ ಎದುರು ಆಡಲಿರುವ ಕರ್ನಾಟಕ ತಂಡವನ್ನು ಮಯಂಕ್ ಅಗರವಾಲ್ ಮುನ್ನಡೆಸುವರು. ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಅವರನ್ನು ಕೈಬಿಡಲಾಗಿದೆ.

ಭಾರತ ತಂಡದ ಆಟಗಾರರಾದ ದೇವದತ್ತ ಪಡಿಕ್ಕಲ್ ಹಾಗೂ ವೇಗಿ ಪ್ರಸಿದ್ಧ ಕೃಷ್ಣ ತಂಡದಲ್ಲಿದ್ದಾರೆ. ದೇವದತ್ತ ಮತ್ತು ಪ್ರಸಿದ್ಧ ಅವರು ಆಸ್ಟ್ರೇಲಿಯಾ ಪ್ರವಾಸ ಮಾಡಿದ್ದ ಭಾರತ ತಂಡದಲ್ಲಿ ಆಡಿದ್ದರು. ಅದರ ನಂತರ ಕರ್ನಾಟಕ ತಂಡಕ್ಕೆ ಮರಳಿ ವಿಜಯ್ ಹಜಾರೆ ಟ್ರೋಫಿ ನಾಕೌಟ್‌ನಲ್ಲಿ ಆಡಿದ್ದರು. ದೇವದತ್ತ ಶತಕ ಗಳಿಸಿದ್ದರು. ಪ್ರಸಿದ್ಧ ಕೂಡ ಉತ್ತಮ ಬೌಲಿಂಗ್ ಮಾಡಿದ್ದರು. ಇದರಿಂದಾಗಿ ತಂಡವು ನಾಕೌಟ್ ಹಂತದಲ್ಲಿ ಜಯಿಸಿತು.

ಉಳಿದಂತೆ ಮಯಂಕ್, ಅನೀಶ್, ಶ್ರೀಜಿತ್, ಅಭಿನವ್ ಹಾಗೂ ಸ್ಮರಣ್ ಅವರೂ ಉತ್ತಮ ಲಯದಲ್ಲಿದ್ದಾರೆ. ಮಧ್ಯಮವೇಗಿ ಕೌಶಿಕ್, ವಿದ್ಯಾಧರ್ ಮತ್ತು ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಕೂಡ ಪಂದ್ಯ ಗೆಲ್ಲಿಸಿಕೊಡಬಲ್ಲ ಸಮರ್ಥರಾಗಿದ್ದಾರೆ.

ಕಳೆದ ವರ್ಷದ ಅಕ್ಟೋಬರ್ 11 ರಿಂದ ನವೆಂಬರ್ 13ರವರೆಗೆ ನಡೆದಿದ್ದ ರಣಜಿ ಟ್ರೋಫಿ ಟೂರ್ನಿಯ ಮೊದಲ ಹಂತದಲ್ಲಿ (ಎಲೀಟ್ ಸಿ ಗುಂಪು) ಕರ್ನಾಟಕ ತಂಡವು 5 ಪಂದ್ಯಗಳನ್ನು ಆಡಿ 1ರಲ್ಲಿ ಗೆದ್ದಿತ್ತು. 4 ಪಂದ್ಯಗಳು ಡ್ರಾ ಆಗಿದ್ದವು ಅದರಲ್ಲಿ ಮಳೆಯಿಂದಾಗಿ ಅಡಚಣೆಯಾಗಿದ್ದೇ ಹೆಚ್ಚು. ಈ ಹಂತದಲ್ಲಿ ಮನೀಷ್ ಪಾಂಡೆ ಆಡಿದ್ದರು. ಆದರೆ ಅವರನ್ನು ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿಯೂ ಕೈಬಿಡಲಾಗಿತ್ತು. ಈಗ ರಣಜಿ ಟೂರ್ನಿಯಲ್ಲಿ ಅವಕಾಶ ನೀಡಲಾಗಿಲ್ಲ.

ಗುಂಪು ಹಂತದಲ್ಲಿ ಉಳಿದಿರುವ ಎರಡು ಪಂದ್ಯ ಪಂದ್ಯಗಳುಬೆಂಗಳೂರಿನಲ್ಲಿ ನಡೆಯುತ್ತಿರುವುದರಿಂದ ಪೂರ್ಣ ಅಂಕಗಳೊಂದಿಗೆ ಜಯಿಸುವ ಛಲದಲ್ಲಿ ಮಯಂಕ್ ಬಳಗವಿದೆ. ಭಾರತ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು ತಮ್ಮ ಮೊಣಕೈ ಗಾಯದ ಕಾರಣ ರಣಜಿ ಟೂರ್ನಿಯಲ್ಲಿ ಆಡುವುದಿಲ್ಲವೆಂದು ಈಚೆಗೆ ತಿಳಿಸಿದ್ದರು.

ಮಯಂಕ್ ಅಗರ್‌ವಾಲ್

ಪ್ರಸಿದ್ಧ ಕೃಷ್ಣ

ತಂಡ ಇಂತಿದೆ: ಮಯಂಕ್ ಅಗರವಾಲ್ (ನಾಯಕ), ಶ್ರೇಯಸ್ ಗೋಪಾಲ್ (ಉಪನಾಯಕ), ದೇವದತ್ತ ಪಡಿಕ್ಕಲ್, ಅನೀಶ್ ಕೆ.ವಿ., ಸ್ಮರಣ್ ಆರ್, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಅಭಿನವ್ ಮನೋಹರ್, ಹಾರ್ದಿಕ್ ರಾಜ್, ಪ್ರಸಿದ್ಧ ಎಂ ಕೃಷ್ಣ, ವಿ. ಕೌಶಿಕ್, ಅಭಿಲಾಷ್ ಶೆಟ್ಟಿ, ಯಶೋವರ್ಧನ್ ಪರಂತಾಪ್, ನಿಕಿನ್ ಜೋಸ್, ವಿದ್ಯಾಧರ್ ಪಾಟೀಲ, ಸುಜಯ್ ಸತೇರಿ (ವಿಕೆಟ್‌ಕೀಪರ್), ಮೊಹಸಿನ್ ಖಾನ್. ಕೆ. ಯರೇಗೌಡ (ಕೋಚ್), ಮನ್ಸೂರ್ ಅಲಿ ಖಾನ್ (ಬೌಲಿಂಗ್ ಕೋಚ್), ಶಬರೀಶ್ ಪಿ ಮೋಹನ್ (ಫೀಲ್ಡಿಂಗ್ ಕೋಚ್), ಎ. ರಮೇಶ್ ರಾವ್ (ಮ್ಯಾನೇಜರ್), ಎ. ಜಾಬ ಪ್ರಭು (ಫಿಸಿಯೊ), ಎ. ಕಿರಣ (ಸ್ಟ್ರೆಂಥ್, ಕಂಡಿಷನಿಂಗ್ ಕೋಚ್), ಸಿ.ಎಂ. ಸೋಮಸುಂದರ್ (ಮಸಾಜ್ ತಜ್ಞ).

ಲಖನೌಗೆ ಪಂತ್ ನಾಯಕ

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರನ್ನು ಐಪಿಎಲ್‌ನಲ್ಲಿ ಆಡುವ ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಈಚೆಗೆ ನಡೆದಿದ್ದ ಮೆಗಾ ಹರಾಜಿನಲ್ಲಿ ರಿಷಭ್ ಅವರನ್ನು ಲಖನೌ ತಂಡವು ದಾಖಲೆಯ ಮೊತ್ತಕ್ಕೆ (₹ 27 ಕೋಟಿ) ಖರೀದಿಸಿತ್ತು. ಸಂಜೀವ ಗೋಯೆಂಕಾ ಒಡೆತನದ ಈ ತಂಡಕ್ಕೆ ಹೋದ ವರ್ಷ ಕನ್ನಡಿಗ ಕೆ.ಎಲ್. ರಾಹುಲ್ ನಾಯಕರಾಗಿದ್ದರು.

'ನಾನು ಪರಿಪೂರ್ಣ ಸಾಮರ್ಥ್ಯದೊಂದಿಗೆ ಆಡುತ್ತೇನೆ. ತಂಡವು ಇಟ್ಟ ವಿಶ್ವಾಸವನ್ನು ಉಳಿಸಿಕೊಳ್ಳುತ್ತೇನೆ. ಹೊಸ ಅಧ್ಯಾಯ ಆರಂಭಿಸುವೆ' ಎಂದು ರಿಷಭ್ ಹೇಳಿದ್ದಾರೆ.

ರಿಷಭ್ ಅವರು ಈ ಹಿಂದೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದರು.

'ಲಖನೌ ತಂಡವು ಉತ್ತಮವಾಗಿದೆ. ಯುವ ಮತ್ತು ಅನುಭವಿಗಳು ಇದ್ದಾರೆ. ಇದರಿಂದಾಗಿ ತಂಡವು ಸಮತೋಲನವಾಗಿದೆ. ಉನ್ನತ ಗುರಿಯತ್ತ ನಮ್ಮ ಪಯಣ ಆರಂಭವಾಗಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ಇಲ್ಲಿ ನಡೆದ ತಂಡದ ಆಟಗಾರರ ಪೋಷಾಕು ಅನಾವರಣ ಕಾರ್ಯಕ್ರಮದಲ್ಲಿ ರಿಷಭ್ ಪಂತ್ ಅವರನ್ನು ನಾಯಕರನ್ನಾಗಿ ಘೋಷಿಸಲಾಯಿತು.

ರೈಲ್ವೇ ವಿರುದ್ಧ ರಣಜಿ ಪಂದ್ಯಕ್ಕೆ ಕೊಹ್ಲಿ

ನವದೆಹಲಿ (ಪಿಟಿಐ): ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು 2012ರ ನಂತರ ಇದೇ ಮೊದಲ ಬಾರಿ ರಣಜಿ ಟ್ರೋಫಿ ಪಂದ್ಯ ಆಡಲು ಸಜ್ಜಾಗಿದ್ದಾರೆ. ಜನವರಿ 30ರಿಂದ ರೈಲ್ವೇಸ್ ವಿರುದ್ಧ ನಡೆಯಲಿರುವ ದೆಹಲಿಯ ಕೊನೆಯ ಲೀಗ್ ಪಂದ್ಯಕ್ಕೆ ಲಭ್ಯರಿರುವುದಾಗಿ ಅವರು ಮಾಹಿತಿ ನೀಡಿದ್ದಾರೆ.

ಇದೇ 23ರಿಂದ ಸೌರಾಷ್ಟ್ರ ವಿರುದ್ಧ ರಾಜಕೋಟ್‌ನಲ್ಲಿ ನಡೆಯುವ ಪಂದ್ಯಕ್ಕೆ ಕತ್ತು ನೋವಿನ ಕಾರಣ ಲಭ್ಯರಿರುವುದಿಲ್ಲ ಎಂದು ಅವರು ತಿಳಿಸಿದ್ದರು. ಆದರೆ ಕೊನೆಯ ಲೀಗ್ ಪಂದ್ಯಕ್ಕೆ ಲಭ್ಯರಿರುವುದಾಗಿ ಅವರು ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆಗೆ (ಡಿಡಿಸಿಎ) ಮಾಹಿತಿ ನೀಡಿದ್ದಾರೆ ಎಂದು ದೆಹಲಿ ತಂಡದ ಹೆಡ್ ಕೋಚ್ ಸರಣ್‌ದೀಪ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಹಾಕಿ: ಅಧಿಯಾಮಾನ್ ಕಾಲೇಜಿಗೆ ಜಯ

ಬೆಂಗಳೂರು: ಅಧಿಯಾಮಾನ್ ಎಂಜಿನಿಯರಿಂಗ್ ಕಾಲೇಜು ಮತ್ತು ವಾರಿಯರ್ಸ್ ಸ್ಪೋರ್ಟ್ಸ್ ಕ್ಲಬ್ ತಂಡಗಳು ಇಲ್ಲಿ ನಡೆಯುತ್ತಿರುವ ಕೆಎಸ್‌ಎಚ್‌ಎ ಬಿ ಡಿವಿಷನ್ ಲೀಗ್ ಹಾಕಿ ಟೂರ್ನಿಯಲ್ಲಿ ಜಯಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ಅಧಿಯಾಮಾನ್ ಕಾಲೇಜು ತಂಡವು 8-1ರಿಂದ ಪ್ರೈಮ್‌ರೋಸ್ ಹಾಕಿ ಕ್ಲಬ್ ವಿರುದ್ಧ ಜಯಿಸಿತು. ಎರಡನೇ ಪಂದ್ಯದಲ್ಲಿ ವಾರಿಯರ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 6-1ರಿಂದ ಹಾವೇರಿ ಜಿಲ್ಲಾ ಹಾಕಿ ಸಂಸ್ಥೆ ವಿರುದ್ಧ ಜಯಿಸಿತು.

ಚೆಸ್: ಗೆದ್ದ ಪ್ರಜ್ಞಾನಂದ

ಪ್ರಜ್ಞಾನಂದ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ, 87ನೇ ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸ್ವದೇಶದ ಪಿ.ಹರಿಕಷ್ಣ ಮೇಲೆ ಜಯಗಳಿಸಿದರು. ವಿಶ್ವ ಚಾಂಪಿಯನ್ ಗುಕೇಶ್ ಮತ್ತು ಭಾರತದ ಅಗ್ರ ಆಟಗಾರ ಅರ್ಜುನ್ ಇರಿಗೇಶಿ ತಮ್ಮ ಪಂದ್ಯಗಳನ್ನು ಭಾನುವಾರ ಡ್ರಾ ಮಾಡಿಕೊಂಡರು.

ಡಿ.ಗುಕೇಶ್ ಕಪ್ಪುಕಾಯಿಗಳಲ್ಲಿ ಆಡಿ ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಜೊತೆ ಡ್ರಾ ಮಾಡಿಕೊಂಡರು. ಅರ್ಜುನ್, ಸ್ಥಳೀಯ ಹೀರೊ ಅನಿಶ್ ಗಿರಿ ಎದುರು ಗೆಲುವಿಗೆ ಶತಪ್ರಯತ್ನ ನಡೆಸಿದರೂ, ಅಂತಿಮವಾಗಿ ಡ್ರಾಕ್ಕೆ ಒಪ್ಪಿಕೊಳ್ಳಬೇಕಾಯಿತು. ಗಿರಿ ಶನಿವಾರ ಮೊದಲ ಸುತ್ತಿನಲ್ಲಿ ಗುಕೇಶ್ ಎದುರು ಮೇಲುಗೈ ಸಾಧಿಸಿದ್ದರೂ, ಅಂತಿಮವಾಗಿ ಸೋತಿದ್ದರು.

14 ಆಟಗಾರರ ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಇನ್ನೊಬ್ಬ ಆಟಗಾರ ಲಿಯಾನ್ ಲ್ಯೂಕ್ ಮೆಂಡೊನ್ಸಾ ಅವರು ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಎದುರು ಸೋಲನುಭವಿಸಿದರು. ಇದು ಗೋವಾದ ಗ್ರ್ಯಾಂಡ್‌ಮಾಸ್ಟರ್‌ಗೆ ಸತತ ಎರಡನೇ ಸೋಲು.

19 ವರ್ಷ ವಯಸ್ಸಿನ ಪ್ರಜ್ಞಾನಂದ ಅವರ ಗೆಲುವು ಶ್ರೇಷ್ಠ ಮಟ್ಟದ ರಕ್ಷಣೆ ಮತ್ತು ಪ್ರತಿದಾಳಿಯ ಆಟಕ್ಕೆ ನಿದರ್ಶನವಾಯಿತು.

ಸಂಕ್ಷಿಪ್ತ ಸುದ್ದಿ

ಹಂಪಿನಗರ, ಫ್ಯಾಂಟಮ್ ಸೆಮಿಫೈನಲ್‌ಗೆ

ಬೆಂಗಳೂರು:ಹಂಪಿನಗರ ಎಫ್‌ಸಿ ಮತ್ತು ಬೆಂಗಳೂರು ಫ್ಯಾಂಟಮ್ ತಂಡಗಳು ದೌಲತ್ ಖಾನ್ ಟೂರ್ನಿಯಲ್ಲಿಸೆಮಿಫೈನಲ್ ಪ್ರವೇಶಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣಲ್ಲಿ ಸೋಮವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹಂಪಿನಗರ ಎಫ್‌ಸಿ ತಂಡ ನಿಗದಿತ ಸಮಯದಲ್ಲಿ 2-2 ಗೋಲುಗಳಿಂದ ಯಂಗ್ ಜೆಮ್ಸ್ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತು.

ನಂತರ ಟೈಬ್ರೇಕರ್‌ನಲ್ಲಿ ಹಂಪಿನಗರ ಎಫ್‌ಸಿ ತಂಡ 4-2 ಗೋಲುಗಳಿಂದ ಮಣಿಸಿ ಉಪಾಂತ್ಯ ಪ್ರವೇಶಿಸಿತು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಫ್ಯಾಂಟಮ್ ಎಫ್‌ಸಿ ತಂಡ 7-1 ಗೋಲುಗಳಿಂದ ಕ್ವೀನ್ಸ್ ಸ್ಟಾರ್ ಎಫ್‌ಸಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು.

ಸೂಪರ್ ಡಿವಿಷನ್ ಲೀಗ್‌ಎ: ಫ್‌ಸಿ ಬೆಂಗಳೂರು ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡದ ವಿರುದ್ಧ ಯಾವುದೇ ಗೋಲಿಲ್ಲದೇ ಡ್ರಾ ಸಾಧಿಸಿತು. ಎಂಇಜಿ ಮತ್ತು ಸೆಂಟರ್ ಎಫ್‌ಸಿ ತಂಡ ಇನ್ನೊಂದು ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ವಿರುದ್ಧ ಡ್ರಾ ಸಾಧಿಸಿತು.

ಸಿಂಗಪುರ ತಂಡಕ್ಕೆ ಅನೂಪ್ ಕೋಚ್

ಸಿಂಗಪುರ (ಪಿಟಿಐ): ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಮಾಜಿ ಆಟಗಾರ, ಬೆಂಗಳೂರಿನ ಅನೂಪ್ ಶ್ರೀಧರ್ ಅವರನ್ನು ಸಿಂಗಪುರ ಬ್ಯಾಡ್ಮಿಂಟನ್ ಸಂಸ್ಥೆಯು (ಎಸ್‌ಬಿಎ) ಸಿಂಗಲ್ಸ್ ಕೋಚ್ ಆಗಿ ಸೋಮವಾರ ನೇಮಕ ಮಾಡಿಕೊಂಡಿದೆ.

ದಕ್ಷಿಣ ಕೊರಿಯಾದ ಕಿಮ್ ಜಿ-ಹ್ಯುನ್ ಅವರು ಎಸ್‌ಬಿಎನ ಪುರುಷರ ಮತ್ತು ಮಹಿಳಾ ತಂಡಗಳ ಹೆಡ್ ಕೋಚ್ ಆಗಿ ಮುಂದುವರಿಯಲಿದ್ದಾರೆ. 'ಅನೂಪ್ ಅವರ ಸೇರ್ಪಡೆ ದಿನಾಂಕ ನಿಗದಿಯಾಗಿಲ್ಲ.